# ಸಮಾಜವಿಜ್ಞಾನ

## ಭಾಗ - 1

## ತರಗತಿ VII

**Social Science**
**Part-1**
**STD-VII**
**Kannada Medium**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
**2024**

ST-503-1-SOC. SCI. (K)-7-VOL-1

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ.
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ; ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

7

# ಸಮಾಜವಿಜ್ಞಾನ

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2024
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜ ವಿಜ್ಞಾನವು ಸಾಮಾಜಿಕ ಜೀವನ ಮತ್ತು ಶೈಕ್ಷಣಿಕ ಅಭಿವೃದ್ಧಿಯ ಅಸ್ತಿತ್ವಕ್ಕೆ ಆಧಾರವಾದ ಅಧ್ಯಯನ ಶಾಖೆಯಾಗಿದೆ. ಸಮಾಜ ವಿಜ್ಞಾನದ ಮೂಲಕ ಹಿಂದಿನ ಕಾಲಘಟ್ಟವನ್ನು ಆಧಾರವಾಗಿರಿಸಿ ಹೊಸ ಕಾಲಘಟ್ಟವನ್ನು ಮುನ್ನಡೆಸಲು ಮತ್ತು ಪರಿಸರವು ಉಂಟುಮಾಡುವ ಪ್ರತಿಕೂಲ ಸಂದರ್ಭಗಳನ್ನು ನಿವಾರಿಸಲು ಸಾಧ್ಯವಾಗಬೇಕು. ಸಂವಿಧಾನವು ಮುಂದಿಡುವ ಮೂಲಭೂತ ಹಕ್ಕುಗಳನ್ನು ವೈಜ್ಞಾನಿಕ ಮನೋಭಾವದಿಂದ ಕಾರ್ಯಗತಗೊಳಿಸಲು ಮತ್ತು ದೇಶದ ಆರ್ಥಿಕ ವ್ಯವಸ್ಥೆಯನ್ನು ಪರಿಪೋಷಿಸಲು ಅಗತ್ಯವಾದ ಸಾಧ್ಯತೆಗಳನ್ನು ಕಂಡುಕೊಳ್ಳಲು ಸಮಾಜ ವಿಜ್ಞಾನವು ನಮಗೆ ಸಹಾಯಕವಾಗಿದೆ.

ಅವಗಣಿಸಲ್ಪಡುವ ಎಲ್ಲಾ ಸಾಮಾಜಿಕ ವಿಭಾಗಗಳನ್ನು ಅಂಗೀಕರಿಸುವ ಮನೋಭಾವವನ್ನು ಬೆಳೆಸಲು ಮತ್ತು ದೇಶದ ಸಾಂಸ್ಕೃತಿಕ-ಜಾತ್ಯತೀತ ಪರಂಪರೆಯನ್ನು ಸಂರಕ್ಷಿಸಲು ನಾವು ಸಮಾಜದ ಕುರಿತು ಸ್ಪಷ್ಟ ತಿಳುವಳಿಕೆಯನ್ನು ಹೊಂದಬೇಕು. ಭೌಗೋಳಿಕ ವಿಶೇಷತೆಗಳನ್ನು ಕಂಡುಕೊಳ್ಳಲು, ಪ್ರಕೃತಿ ಸಂರಕ್ಷಣೆ ಮತ್ತು ಕೃಷಿ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲು ಒಬ್ಬ ಸಮಾಜ ವಿಜ್ಞಾನ ವಿದ್ಯಾರ್ಥಿಗೆ ಸಾಧ್ಯವಾಗಬೇಕು.

ಪರಿಷ್ಕೃತ ಕೇರಳ ಪಠ್ಯಕ್ರಮ ಚೌಕಟ್ಟು 2023 ಮುಂದಿರಿಸುವ ಇಂತಹ ಪ್ರಗತಿಪರ ದೃಷ್ಟಿಕೋನಗಳನ್ನು ಒಳಗೊಳ್ಳಿಸಿದ ಏಳನೇ ತರಗತಿಯ ಸಮಾಜ ವಿಜ್ಞಾನ ಭಾಗ 1 ಪಾಠಪುಸ್ತಕವು ನಿಮ್ಮ ಜೀವನ ಯಶಸ್ಸಿಗೆ ಒಂದು ಸಂಪತ್ತಾಗಬಹುದು ಎಂದು ಭಾವಿಸುತ್ತೇನೆ.

ಸಮಾಜವನ್ನು ಹೆಚ್ಚು ಕ್ರಿಯಾಶೀಲವಾಗಿಸಲು ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಈ ಪಾಠ ಪುಸ್ತಕ ನಿಮಗೆ ಸಹಾಯಕವಾಗುವುದು ಖಂಡಿತ.

ಪ್ರೀತಿಪೂರ್ವಕ,

**ಡಾ. ಜಯಪ್ರಕಾಶ್ ಆರ್.ಕೆ**
ಡೈರೆಕ್ಟರ್
ಎಸ್.ಸಿ.ಇ.ಆರ್.ಟಿ. ಕೇರಳ

# Text Book Development Team

## Advisor

**Dr. K. N. Ganesh**
Chairman, Kerala Council for Historical Research

## Chairperson

**Dr. Baiju K. C.**
Vice chancellor (In-charge), Central University, Kasaragod

## Experts

**Dr. P. P. Abdul Razak**
Associate Professor (Rtd.)
Department of History,
P.S.M.O. College, Thirurangadi

**Dr. Anish V. R.**
Assistant Professor,
Department of Political Science,
S.A.R.B.T.M. Govt. College, Quilandy

## Members

**Anas N. S.**
Research Scholar, N.S.S. College, Nilamel

**M. Johnbai**
M.V.H.S.S. Arumanoor
Thiruvananthapuram

**Johnson T. Y.**
C.S.I.H.S.S. For Deaf, Valakom

**Krishnan Kuriya**
A. E. O.(Rtd.), Kannur South

**Musthafa Mattathoor**
Teacher Educator, Govt. Institute of
Teacher Education, Malappuram

**T. S. Nisha**
S.N.V.U.P.S. Maruthamanpally, Kollam

**Nisha M. S.**
P.H.S.S. Mezhuveli, Pathanamthitta

**Premjith Sureshbabu**
Artist

**Priya S. S.**
G.B.H.S.S. Mithirmala, Thiruvananthapuram

**Rajan P. P.**
Trainer, B.R.C., Malappuram

**Rajan Kulangara**
Iringannoor H.S.S., Vadakara, Kozhikode

**Sai Kumar P.**
A.M.L.P.S. Kaliyattumukku, Malappuram

## Kannada Version

### Expert

**Narayana. D**
D.P.O. SSK Kasaragod

### Language Expert

**Ramanna. D**
Headmaster (Rtd.)
G.V.H.S.S Delampady

### Members

**Gopala P. K.**
U.P.S.T, G.H.S.S. Padre

**Raghava M. N.**
H.S.T Social Science
G.H.S.S. Mogralputhur

**Ananda. S**
H.S.T Social Science
G.H.S.S Pandi

**Vijayakumar. A**
U.P.S.T, B.A.U.P.S Katukukke

**Pradeep Kumar. B. S**
U.P.S.T, B.A.U.P.S Katukukke

## Academic Coordinator

**Dr. Anil D.**
Research Officer, SCERT Kerala

STATE COUNCIL OF EDUCATION RESEARCH AND TRAINING (SCERT)
Vidhyabhavan, Poojappura,Thiruvananthapuram 695 012

# ಅನುಕ್ರಮಣಿಕೆ


1. ಮಧ್ಯಕಾಲ ಭಾರತ ........ 7-24
2. ಮಧ್ಯಕಾಲ ಭಾರತ : ಸಾಂಸ್ಕೃತಿಕ ಚಳುವಳಿಗಳು ........ 25-38
3. ಸಂವಿಧಾನ : ಮಾರ್ಗವೂ ಮಾರ್ಗದರ್ಶಿಯೂ ........ 39-53
4. ಅನ್ಯಾಯದಿಂದ ನ್ಯಾಯದೆಡೆಗೆ ........ 54-67
5. ನಮ್ಮ ಭೂಮಿ ........ 68-81
6. ಭಾರತ ಉಪಭೂಖಂಡ ........ 82-93
7. ಆಹಾರ ಉತ್ಪಾದನೆಯಿಂದ ಆಹಾರ ಭದ್ರತೆಯವರೆಗೆ ........ 94-110


ಈ ಪಾಠಪುಸ್ತಕದಲ್ಲಿ ಕಲಿಕಾಸೌಕರ್ಯಕ್ಕಾಗಿ
ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ



ಹೆಚ್ಚುವರಿ ಓದು - ಮೌಲ್ಯಮಾಪನಕ್ಕೆ ಒಳಪಡಿಸಬೇಕೆಂದಿಲ್ಲ



ಕಲಿಕಾ ಚಟುವಟಿಕೆಗಳು



ಮುಂದುವರಿದ ಚಟುವಟಿಕೆಗಳು



ನಾವು ಓದುವ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



1

# ಮಧ್ಯಕಾಲ ಭಾರತ



*ಚಿತ್ರ 1.1*



*ಚಿತ್ರ 1.2*

ಮೇಲೆ ಕೊಟ್ಟಿರುವ ಚಿತ್ರಗಳನ್ನು ನಿರೀಕ್ಷಿಸಿರಿ. ಇವು ಮಧ್ಯಕಾಲ ಭಾರತದಲ್ಲಿ ಆಡಳಿತ ನಡೆಸಿದ ಎರಡು ರಾಜ್ಯಗಳ ಚಾರಿತ್ರಿಕ ಅವಶೇಷಗಳಾಗಿವೆ.

ಇದರಲ್ಲಿ ಮೊದಲನೆಯದು ನಿಮಗೆ ಪರಿಚಯವಿರಬಹುದಲ್ಲವೇ?

ಸ್ವಾತಂತ್ರ್ಯ ದಿನಾಚರಣೆಯಂದು ನಮ್ಮ ಪ್ರಧಾನಮಂತ್ರಿ ಇಲ್ಲಿ ರಾಷ್ಟ್ರಧ್ವಜವನ್ನು ಏರಿಸುವುದನ್ನು ನೀವು ನೋಡಿರಬಹುದಲ್ಲವೇ?


ಇದು ಮೊಘಲ್ ಚಕ್ರವರ್ತಿಯಾದ ಷಹಜಹಾನನ ಆಡಳಿತ ಕಾಲದಲ್ಲಿ ದೆಹಲಿಯಲ್ಲಿ ನಿರ್ಮಿಸಿದ ಕೆಂಪುಕೋಟೆಯಾಗಿದೆ.

ಇದೇ ಸಮಯದಲ್ಲಿ ದಕ್ಷಿಣ ಭಾರತದಲ್ಲಿ ನೆಲೆನಿಂತಿದ್ದ ವಿಜಯನಗರದ ರಾಜಧಾನಿಯಾದ ಹಂಪಿಯನ್ನು ಎರಡನೇ ಚಿತ್ರದಲ್ಲಿ ಕಾಣಬಹುದು.

ಈ ಎರಡು ರಾಜ್ಯಗಳ ಕುರಿತು ನಾವು ಈ ಅಧ್ಯಾಯದಲ್ಲಿ ಚರ್ಚಿಸಲಿದ್ದೇವೆ.

## ಮೊಘಲ್ ಆಡಳಿತ


1526 ರಲ್ಲಿ ಬಾಬರನು ಮೊಘಲ್ ಆಡಳಿತವನ್ನು ಆರಂಭಿಸಿದನು. 1857 ರ ವರೆಗೆ ದೆಹಲಿಯನ್ನು ಕೇಂದ್ರವಾಗಿಸಿ ಭಾರತವನ್ನು ಆಳಿದ ಮೊಘಲ್ ಆಡಳಿತಕಾಲದ ಪ್ರಧಾನ ರಾಜರು ಯಾರೆಲ್ಲಾ ಎಂಬುದು ನಿಮಗೆ ತಿಳಿದಿದೆಯೇ?




ಪ್ರಧಾನವಾದ ಮೊಘಲ್ ಚಕ್ರವರ್ತಿಗಳು ಯಾರೆಲ್ಲಾ ಎಂಬುದನ್ನು ಪದಸೂರ್ಯದಿಂದ ನೀವು ಗುರುತಿಸಿರುವಿರಲ್ಲವೇ?

**ಮೊಘಲ್ ರಾಜರುಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.**

ಮೊಘಲರ ರಾಜ್ಯವು ಬಹಳ ವಿಸ್ತಾರವಾಗಿತ್ತು. ಇಂದಿನ ಭಾರತಕ್ಕೆ ಹೊರತಾಗಿ ನೆರೆ ದೇಶಗಳಿಗೂ ಮೊಘಲ್ ಆಡಳಿತ ವ್ಯಾಪಿಸಿತ್ತು.




*ಚಿತ್ರ 1.3*
*ಔರಂಗಜೇಬನ ಕಾಲದ ಮೊಘಲ್ ರಾಜ್ಯ*

**ಇಂದಿನ ಯಾವೆಲ್ಲಾ ದೇಶಗಳಲ್ಲಿ ಮೊಘಲ್ ಆಡಳಿತ ವ್ಯಾಪಿಸಿತ್ತು ಎಂದು ಭೂಪಟದಿಂದ ಕಂಡುಹಿಡಿದು ಪಟ್ಟಿಮಾಡಿರಿ.**

- ಅಫಘಾನಿಸ್ತಾನ
- 
- 

## ಮೊಘಲರು ಮತ್ತು ಒಂದನೇ ಪಾಣಿಪತ್ ಯುದ್ಧ

‘ಮಂಗೋಲ್’ ಎಂಬ ಪದದಿಂದ ‘ಮೊಘಲ್’ ಎಂಬ ಹೆಸರು ರೂಪುಗೊಂಡಿದೆ. ಮೊಘಲ್ ರಾಜ್ಯದ ಸ್ಥಾಪಕನಾದ ಬಾಬರನು ತಂದೆಯ ಪರಂಪರೆಯಲ್ಲಿ ತುರ್ಕಿಯ ರಾಜನಾಗಿದ್ದ ತೈಮೂರನ ಮತ್ತು ತಾಯಿಯ ಪರಂಪರೆಯಲ್ಲಿ ಮಂಗೋಲ್ ರಾಜನಾಗಿದ್ದ ಚೆಂಗಿಸ್‌ಖಾನನ ಉತ್ತರಾಧಿಕಾರಿಯಾಗಿದ್ದನು. 16ನೇ ಶತಮಾನದಲ್ಲಿ ಯುರೋಪಿಯನ್ನರು ಈ ರಾಜವಂಶವನ್ನು ಮೊಘಲ್ ವಂಶವೆಂದು ಕರೆಯಲು ಆರಂಭಿಸಿದರು.

ಲೋದಿ ವಂಶದ ಕೊನೆಯ ರಾಜನಾಗಿದ್ದ ಇಬ್ರಾಹಿಂ ಲೋದಿಯನ್ನು ಕಾಬುಲ್‌ನ ರಾಜನಾಗಿದ್ದ ಬಾಬರನು 1526ರಲ್ಲಿ ಹರಿಯಾಣದ ಪಾಣಿಪತ್ ಎಂಬಲ್ಲಿ ನಡೆದ ಯುದ್ಧದಲ್ಲಿ ಎದುರಿಸಿದನು. ಇತಿಹಾಸದಲ್ಲಿ ಇದನ್ನು ಮೊದಲ ಪಾಣಿಪತ್ ಯುದ್ಧ ಎಂದು ಕರೆಯುತ್ತಾರೆ. ಈ ಯುದ್ಧದ ಗೆಲುವಿನ ಮೂಲಕ ಬಾಬರನು ಭಾರತದಲ್ಲಿ ಮೊಘಲ್ ಆಡಳಿತವನ್ನು ಸ್ಥಾಪಿಸಿದನು.

“ಪೂರ್ವ ಪ್ರದೇಶವನ್ನು ನಡುಗಿಸಿದ ಅಕ್ಬರ್ ಚಕ್ರವರ್ತಿಯು ಮರಣ ಹೊಂದಿರುತ್ತಾನೆ. ನಿಜವಾಗಿಯೂ ಅಕ್ಬರನು ಶ್ರೇಷ್ಠ ಚಕ್ರವರ್ತಿಯಾಗಿದ್ದನು. ಏಕಕಾಲದಲ್ಲಿ ಪ್ರಜೆಗಳಿಂದ ಪ್ರೀತಿ ಮತ್ತು ಗೌರವ ಹಾಗೂ ವಿಧೇಯತೆಯನ್ನು ಗಳಿಸಿದುದರ ಜೊತೆಗೆ ಆಜ್ಞಾಶಕ್ತಿಯನ್ನು ಉಳಿಸಿಕೊಳ್ಳಲು ಅವನಿಂದ ಸಾಧ್ಯವಾಯಿತು. ಮೇಲ್ವರ್ಗ-ಕೆಳವರ್ಗ ಎಂಬ ವ್ಯತ್ಯಾಸವಿಲ್ಲದೆಯೂ, ಪರಿಚಿತ/ಅಪರಿಚಿತ ಎಂಬ ಭೇದ ಭಾವವಿಲ್ಲದೆಯೂ ಹಿಂದೂ/ ಕ್ರಿಶ್ಚಿಯನ್/ಮುಸ್ಲಿಂ ಎಂಬ ಪ್ರತ್ಯೇಕತೆಗಳಿಲ್ಲದೆಯೂ ಸಮಾನ ನ್ಯಾಯ ಒದಗಿಸಲು, ಬಲಿಷ್ಠರಲ್ಲಿ ಶಕ್ತವಾಗಿಯೂ, ಅಶಕ್ತರಲ್ಲಿ ಕರುಣೆಯಿಂದಲೂ ನಡೆದುಕೊಂಡ ಈ ಸುಲ್ತಾನ ಎಲ್ಲರಿಗೂ ಇಷ್ಟವಾಗಿದ್ದನು...”

ಜೆಸ್ಯೂಟ್ ಪಾದ್ರಿ ಪಿಯರಿ ಜಾರಿಕ್ ಅಕ್ಬರ್ ಚಕ್ರವರ್ತಿಯ ಮರಣದ ನಂತರ ಸಿ. ಇ. 1605ರಲ್ಲಿ ಬರೆದ ದುಃಖ ಸೂಚಕ ಟಿಪ್ಪಣಿಯನ್ನು ಮೇಲೆ ನೀಡಲಾಗಿದೆ.

ಈ ಟಿಪ್ಪಣಿಯಿಂದ ಮೊಘಲ್ ಚಕ್ರವರ್ತಿಯಾದ ಅಕ್ಬರನ ಕುರಿತು ನಿಮಗೆ ಯಾವೆಲ್ಲ ವಿಷಯಗಳನ್ನು ತಿಳಿಯಲು ಸಾಧ್ಯವಾಯಿತು?

- ಅಕ್ಬರನು ಬಲಿಷ್ಠ ಚಕ್ರವರ್ತಿಯಾಗಿದ್ದನು.
- 
- 
- 



*ಚಿತ್ರ 1.4*
*ಮೊಘಲ್ ರಾಜವಂಶದ ಪ್ರಸಿದ್ಧ ರಾಜನಾಗಿದ್ದ ಅಕ್ಬರನು ವಿವಿಧ ಮತದವರೊಂದಿಗೆ ಚರ್ಚೆ ನಡೆಸುತ್ತಾನೆ.*

1575ರಲ್ಲಿ ತನ್ನ ಹೊಸ ರಾಜಧಾನಿಯಾಗಿದ್ದ ಫತೇಪುರ್ ಸಿಕ್ರಿಯಲ್ಲಿ ಅಕ್ಬರನು 'ಇಬಾದತ್ ಖಾನ್' ನಿರ್ಮಿಸಿದನು. ವಿವಿಧ ಮತಗಳ ಪಂಡಿತರು ಮತ್ತು ಪ್ರಮುಖರು ಇಲ್ಲಿ ಒಟ್ಟು ಸೇರಿದ್ದರು. ಅಕ್ಬರನು ಮತಸೌಹಾರ್ದತೆಯನ್ನು ಬೆಂಬಲಿಸಿದ್ದನು ಎಂಬುದಕ್ಕೆ ಇಂತಹ ಚರ್ಚೆಗಳು ಉತ್ತಮ ಉದಾಹರಣೆಗಳಾಗಿವೆ.

ಎಲ್ಲಾ ಮತಗಳ ಉತ್ತಮ ಅಂಶಗಳನ್ನು ಒಳಗೊಂಡು ಅಕ್ಬರನು ದೀನ್ - ಇ - ಲಾಹಿ ಎಂಬ ಪಂಥವನ್ನು ಪ್ರಸ್ತುತಪಡಿಸಿದನು. ಈ ಪಂಥದ ತಿರುಳು ಎಲ್ಲರಿಗೂ ಸಮಾಧಾನ ಅಥವಾ ಸುಳ್‌ಹ್ - ಈ - ಕುಲ್ ಎಂಬುದಾಗಿತ್ತು. ಪಂಥಗಳು ಮನುಷ್ಯರ ಕ್ಷೇಮಕ್ಕಾಗಿ ಇರುವುದಾಗಿದೆ ಎಂಬ ಆಶಯವನ್ನು ಸ್ಪಷ್ಟ ಪಡಿಸುವುದು ಅವನ ಉದ್ದೇಶವಾಗಿತ್ತು.



*ಚಿತ್ರ 1.5*
*ಪತೇಪುರ್ ಸಿಕ್ರಿ*

‘ಜಸ್ಸಿಯಾ’ ಎಂಬ ಧಾರ್ಮಿಕ ತೆರಿಗೆಯನ್ನು ಅಕ್ಬರನು ನಿಲ್ಲಿಸಿದನು. ಆಡಳಿತ ಕ್ಷೇತ್ರದಲ್ಲೂ ಅಕ್ಬರನು ಮತ ಸಹಿಷ್ಣುತೆಯನ್ನು ಬೆಂಬಲಿಸಿದ್ದನು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಮೊಘಲ್ ಆಡಳಿತದಲ್ಲಿ ಎಲ್ಲಾ ಕ್ಷೇತ್ರದಲ್ಲೂ ಎಲ್ಲಾ ಮತ ವಿಭಾಗದವರು ಸಮಾನವಾಗಿ ಪರಿಗಣಿಸಲ್ಪಟ್ಟಿದ್ದರು. ರಾಜ ತೋಡರಮಲ್, ರಾಜ ಮಾನ್‌ಸಿಂಗ್, ರಾಜ ಭಗವನ್‌ದಾಸ್, ಬೀರಬಲ್ ಎಂಬಿವರು ಅಕ್ಬರ್ ಚಕ್ರವರ್ತಿಯ ರಾಜ ಸಭೆಯಲ್ಲಿ ಉನ್ನತ ಸ್ಥಾನವನ್ನು ವಹಿಸಿದ್ದವರಲ್ಲಿ ಪ್ರಮುಖರಾಗಿದ್ದರು.

**ಅಕ್ಬರನು ‘ಇಬಾದತ್ ಖಾನ್’ ನಿರ್ಮಿಸಿದುದರ ಉದ್ದೇಶ ಏನಾಗಿತ್ತು? ಟಿಪ್ಪಣಿ ತಯಾರಿಸಿರಿ.**

“ನನ್ನ ಅನುಯಾಯಿಗಳು ಇತರ ಮತ ವಿಭಾಗದವರೊಂದಿಗೆ ಶತ್ರುತ್ವದಲ್ಲಿ ವರ್ತಿಸಿ ಸಮಯ ವ್ಯರ್ಥ ಮಾಡಬಾರದು. ಇತರ ಮತ ವಿಭಾಗದವರೊಂದಿಗಿನ ಸಂಬಂಧದಲ್ಲಿ ಸುಳ್ಹ್ಇ-ಕುಲ್ (ಎಲ್ಲರಿಗೂ ಶಾಂತಿ) ಎಂಬ ಆಶಯವನ್ನು ಬೆಂಬಲಿಸಲಿ. ಮೃಗಗಳನ್ನು ಕೊಲ್ಲಬಾರದು. ಯುದ್ಧ ಸಮಯಗಳಲ್ಲಿ ಅಲ್ಲದೆ ಆಯುಧಗಳನ್ನು ತೆಗೆದು ಪ್ರಯೋಗಿಸಬಾರದು”. ಎಂದು ಅಕ್ಬರ್ ತನ್ನ ಅನುಯಾಯಿಗಳೊಡನೆ ಆಜ್ಞಾಪಿಸಿದ್ದ ಎಂದು ಮೊಘಲ್ ಸುಲ್ತಾನನಾಗಿದ್ದ ಜಹಾಂಗೀರ್ ತನ್ನ ಪುಸ್ತಕ ವಾದ *‘ತುಸುಕಿ ಜಹಾಂಗೀರಿ’* ಯಲ್ಲಿ ದಾಖಲಿಸಿದ್ದಾನೆ.

**ಈ ಹೇಳಿಕೆಯ ಆಧಾರದಲ್ಲಿ ಮೊಘಲ್ ಆಡಳಿತ ಕಾಲದಲ್ಲಿ ವಿವಿಧ ಮತ ವಿಭಾಗಗಳ ಜನರ ಎಡೆಯಲ್ಲಿ ಮತ ಸಹಿಷ್ಣುತೆಯನ್ನು ಸ್ಥಾಪಿಸಲು ಅಕ್ಬರನ ಧೋರಣೆಗಳು ಹೇಗೆ ಸಹಕಾರಿಯಾಗಿತ್ತು ಎಂದು ತರಗತಿಯಲ್ಲಿ ಒಂದು ಚರ್ಚೆಯನ್ನು ನಡೆಸಿರಿ.**

## ಮೊಘಲ್ ಸೈನ್ಯ


ಮೊಗಲ್ ಕಾಲಘಟ್ಟದಲ್ಲಿ ರಾಜ್ಯವು ವಿಸ್ತಾರಗೊಳ್ಳಲು ಮತ್ತು ವಿಸ್ತಾರಗೊಂಡ ರಾಜ್ಯದ ಅಸ್ತಿತ್ವದ ಉಳಿವಿಗೆ ಒಂದು ಸದೃಢವಾದ ಸೈನ್ಯದ ಅವಶ್ಯಕತೆ ಇತ್ತು. ಇದಕ್ಕಾಗಿ ಅಕ್ಬರನು ‘ಮನ್ಸಬ್ದಾರಿ’ ಸೈನಿಕ ಪದ್ಧತಿಯನ್ನು ಜಾರಿಗೊಳಿಸಿದನು. ಈ ಸಂಪ್ರದಾಯದಂತೆ ಪ್ರತಿಯೊಂದು ಉದ್ಯೋಗಸ್ಥರ ಕೈ ಕೆಳಗೆ ಒಂದೊಂದು ಸೈನಿಕ ಪಡೆ ಇರಬೇಕಾಗಿತ್ತು. ‘ಮನ್ಸಬ್’ ಎಂಬ ಪದವಿಯು ಪ್ರತಿಯೊಬ್ಬ ಉದ್ಯೋಗಸ್ಥನು ತಾನು ಇಟ್ಟುಕೊಳ್ಳಬೇಕಾದ ಅಶ್ವಪಡೆಯ ಸಂಖ್ಯೆಯನ್ನು ಸೂಚಿಸುತ್ತದೆ. ತಾನು ಇಟ್ಟುಕೊಳ್ಳುವ ಸೈನಿಕರ ಸಂಖ್ಯೆಗೆ ಅನುಸರಿಸಿ ಮನ್ಸಬ್ದಾರರ ಹುದ್ದೆಯು ನಿಶ್ಚಯಿಸಲ್ಪಡುತ್ತಿತ್ತು. ಸರಕಾರಿ ಖಜಾನೆಯಿಂದ ನೇರವಾಗಿ ಹಣವನ್ನು ಖರ್ಚು ಮಾಡಿ ಸೈನ್ಯವನ್ನು ಇಟ್ಟುಕೊಳ್ಳುವ ಬದಲಿಗೆ ಈ ಸಂಪ್ರದಾಯವನ್ನು ಜಾರಿಗೊಳಿಸಲಾಯಿತು. ಮನ್ಸಬ್ದಾರ್‌ಗಳಿಗೆ ಅವರು ವಹಿಸಿಕೊಂಡಿರುವ ಪದವಿಗೆ ಅನುಸರಿಸಿ ಜಮೀನನ್ನು ವಿಭಾಗಿಸಿ ನೀಡಲಾಗಿತ್ತು. ಪ್ರಸ್ತುತ ಈ ಜಮೀನುಗಳಿಂದ ಬರುವ ತೆರಿಗೆಯನ್ನು ಸಂಗ್ರಹಿಸಿ ತನ್ನ ಸೈನ್ಯವನ್ನು ಇವರು ಉಳಿಸಿಕೊಳ್ಳಬೇಕಾಗಿತ್ತು. ಆಡಳಿತವನ್ನು ಶಕ್ತಿಯುತವಾಗಿ ಮುಂದುವರಿಸಲು ಮುಖ್ಯಸ್ಥರ ಮತ್ತು ಸೈನಿಕರ ಬೆಂಬಲವು ಅತ್ಯಗತ್ಯವಾಗಿತ್ತು. ಈ ಉದ್ದೇಶವನ್ನು ಈಡೇರಿಸಲು ‘ಮನ್ಸಬ್ದಾರಿ’ ಪದ್ಧತಿಯನ್ನು ಜಾರಿಗೊಳಿಸಲಾಗಿತ್ತು.

**ಮೊಘಲರ ಮನ್ಸಬ್ದಾರಿ ಸಂಪ್ರದಾಯದ ಕುರಿತು ತರಗತಿಯಲ್ಲಿ ಒಂದು ಚರ್ಚಾ ಕೂಟವನ್ನು ಏರ್ಪಡಿಸಿರಿ.**

## ಮೊಘಲ್ ಆಡಳಿತ ರೀತಿ

ಮೊಘಲ್ ಕಾಲಘಟ್ಟದಲ್ಲಿ ಆಡಳಿತ ಸೌಕರ್ಯಕ್ಕಾಗಿ ಕೈಗೊಂಡ ಆಡಳಿತ ವ್ಯವಸ್ಥೆಯನ್ನು ತಿಳಿದುಕೊಳ್ಳೋಣ.


**ಮೊಘಲ್ ರಾಜ್ಯ**




ಮೊಘಲ್ ಆಡಳಿತದ ಅಕ್ಬರನ ಕಾಲದಲ್ಲಿ ಈ ರೀತಿಯ ಆಡಳಿತ ಶ್ರೇಣಿ(ಘಟಕ)ಯನ್ನು ಯಶಸ್ವಿಯಾಗಿ ರೂಪೀಕರಿಸಲಾಯಿತು.

ಚಕ್ರವರ್ತಿಯು ದೇಶದ ಸರ್ವಾಧಿಕಾರಿ, ಸರ್ವ ಸೇನಾಧಿಪತಿ, ಶಾಸನವನ್ನು ರೂಪಿಕರಿಸುವವನು ಮತ್ತು ಅಂತಿಮವಾದ ನ್ಯಾಯಾಧೀಶನು ಆಗಿದ್ದನು.

ಮೊಗಲ್ ಕಾಲಘಟ್ಟದಲ್ಲಿ ನ್ಯಾಯನೀತಿಯ ನಿರ್ವಹಣೆಗಾಗಿ ಇಂದಿನಂತೆ ಪ್ರತ್ಯೇಕವಾದ ನ್ಯಾಯಾಲಯಗಳು ಇರಲಿಲ್ಲ ಬದಲಾಗಿ ಸ್ಥಳೀಯ ಮತ ಪಂಡಿತರು (ಖಾಸಿಗಳು) ತರ್ಕಗಳನ್ನು ಅನ್ವೇಷಣೆ ಮಾಡಿ ತೀರ್ಪು ನೀಡುತ್ತಿದ್ದರು. ಇಂತಹ ತೀರ್ಮಾನಗಳಲ್ಲಿ ಅತೃಪ್ತಿ ಇರುವವರು ಚಕ್ರವರ್ತಿಯಲ್ಲಿ ನೇರವಾಗಿ ದೂರು ನೀಡಲು ಅವಕಾಶವಿತ್ತು. ಆಡಳಿತ ಕಾರ್ಯದಲ್ಲಿ ರಾಜನಿಗೆ ಸಲಹೆಗಳನ್ನು ನೀಡಲು ಮಂತ್ರಿಗಳು ಮತ್ತು ಇಲಾಖಾ ಅಧ್ಯಕ್ಷರುಗಳನ್ನು ನೇಮಿಸಿದ್ದರು.



*ಚಿತ್ರ 1.6*
*ಅಕ್ಬರ್ ಚಕ್ರವರ್ತಿ ದಿವಾನ್ -ಇ- ಖಾಸ್‌ನಲ್ಲಿ ಜನರ ಅಹವಾಲುಗಳನ್ನು ಕೇಳುತ್ತಿರುವುದು.*

## ಸಾಮಾಜಿಕ - ಆರ್ಥಿಕ ಸ್ಥಿತಿ

ತಮ್ಮ ಪ್ರವಾಸದ ಬರವಣಿಗೆಯಲ್ಲಿ ಮೊಘಲ್ ಆಡಳಿತ ಕಾಲದ ಸಮಾಜದ ಕುರಿತು ಆ ಕಾಲದಲ್ಲಿ ಭಾರತವನ್ನು ಸಂದರ್ಶಿಸಿದ್ದ ಯುರೋಪ್ ಯಾತ್ರಿಕರು ಮತ್ತು ವ್ಯಾಪಾರಿಗಳು ದಾಖಲಿಸಿದ್ದರು. ಆ ಕಾಲದಲ್ಲಿ ಫ್ಯೂಡಲ್ ಸಾಮಾಜಿಕ ವ್ಯವಸ್ಥೆ ಜಾರಿಯಲ್ಲಿತ್ತು. ಸಮಾಜವು ಹಲವು ಸ್ಥರಗಳಾಗಿ ವಿಭಜಿಸಲ್ಪಟ್ಟಿತ್ತು.


ಸಮಾಜದಲ್ಲಿ ಅತ್ಯಂತ ಕೆಳಸ್ಥರದಲ್ಲಿ ಜನಸಾಮಾನ್ಯರು, ಅತ್ಯಂತ ಮೇಲೆ ರಾಜನು ಆಗಿದ್ದನು. ಜನರ ಜೀವನ ಮಟ್ಟವು ವೇತನ ಮತ್ತು ಆದಾಯವನ್ನು ಆಶ್ರಯಿಸಿಕೊಂಡಿತ್ತು. ರಾಜ್ಯದ ಜನರಲ್ಲಿ ಹೆಚ್ಚಿನವರು ಕೃಷಿಕರಾಗಿದ್ದರು. ಜಾತಿ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು. ಪ್ರತಿಯೊಂದು ಜಾತಿಯವರಿಗೂ ಅವರದ್ದೇ ಆದ ಆಚಾರ, ಸಂಪ್ರದಾಯಗಳು ಇದ್ದವು. ಮೊಘಲ್ ಕಾಲಘಟ್ಟದಲ್ಲಿ ಭಾರತವನ್ನು ಸಂದರ್ಶಿಸಿದ ಫ್ರೆಂಚ್ ಯಾಂತ್ರಿಕ ಟವರ್ನಿಯರ್, ಭಾರತದಲ್ಲಿದ್ದ ಸಾಮಾಜಿಕ ವ್ಯವಸ್ಥೆಯ ಕುರಿತು, ಜನರ ಜೀವನ ರೀತಿಯ ಕುರಿತು ದಾಖಲಿಸಿರುವನು. ಪ್ರತಿಯೊಂದು ಪ್ರದೇಶದಲ್ಲಿಯೂ ಜನರ ಜೀವನ ರೀತಿ, ಆಹಾರ, ಉಡುಗೆ - ತೊಡುಗೆಯಲ್ಲಿ ಅನೇಕ ವ್ಯತ್ಯಾಸಗಳು ರೂಢಿಯಲ್ಲಿದ್ದವು. ಬಾಬರನು ತನ್ನ ಅನುಭವ ಟಿಪ್ಪಣಿಯಲ್ಲಿ ಆ ಕಾಲದಲ್ಲಿ ಭಾರತದಲ್ಲಿ ರೂಢಿಯಲ್ಲಿದ್ದ ಉದ್ಯೋಗ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಯ ಕುರಿತು ದಾಖಲಿಸಿರುವನು.

'ಆಗ್ರಾ ಮತ್ತು ಫತೇಪುರ್ ಸಿಕ್ರಿ'ಯು ಲಂಡನ್ ನಗರಕ್ಕಿಂತ ದೊಡ್ಡದು ಮತ್ತು ಜನದಟ್ಟಣೆಯಿಂದ ಕೂಡಿದ್ದು ಆಗಿತ್ತು. ಈ ನಗರಗಳ ಮಧ್ಯೆ ಸರಿಸುಮಾರು 12 ಮೈಲುಗಳ ಅಂತರವಿದೆ. ಈ ದಾರಿಯುದ್ದಕ್ಕೂ ಬದಿಗಳಲ್ಲಿ ಆಹಾರವಸ್ತುಗಳನ್ನು ಮತ್ತು ಇತರ ವಸ್ತುಗಳನ್ನು ಮಾರುವ ಅಂಗಡಿಗಳನ್ನು ನೋಡಬಹುದು.

ಮೊಗಲ್ ಕಾಲಘಟ್ಟದಲ್ಲಿ ಭಾರತವನ್ನು ಸಂದರ್ಶಿಸಿದ್ದ ಇಂಗ್ಲೀಷ್ ಯಾತ್ರಿಕ ರಾಲ್ಫ್‌ಚ್ ಭಾರತದ ಎರಡು ನಗರಗಳ ಕುರಿತು ವಿವರಿಸಿರುವುದನ್ನು ಮೇಲೆ ನೀಡಲಾಗಿದೆ. ಮೊಘಲ್ ಆಡಳಿತ ಕಾಲದಲ್ಲಿ ನಾವು ಎಷ್ಟೊಂದು ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದೆವು ಎಂಬುದನ್ನು ಈ ವಿವರಣೆಯು ಸೂಚಿಸುತ್ತದೆ. ಕೃಷಿ ಕ್ಷೇತ್ರದ ಸಾಧನೆಗಳು ಆರ್ಥಿಕ ಪ್ರಗತಿಗೆ ಮೂಲವಾಗಿತ್ತು. ಭತ್ತ, ಗೋಧಿ, ಬಾರ್ಲಿ, ಕಬ್ಬು, ಹತ್ತಿ, ಎಣ್ಣೆಬೀಜಗಳು ಇತ್ಯಾದಿಗಳು ಆ ಕಾಲದ ಪ್ರಧಾನ ಕೃಷಿ ಉತ್ಪನ್ನಗಳಾಗಿದ್ದವು. ಅಬುಲ್ ಫಜಲ್ ತನ್ನ ಪುಸ್ತಕವಾದ 'ಐನ್-ಇ-ಅಕ್ಬರಿ'ಯಲ್ಲಿ ಭಾರತದಲ್ಲಿ ವೈವಿಧ್ಯವಾದ ಭತ್ತದ ತಳಿಗಳನ್ನು ಕೃಷಿ ಮಾಡುತ್ತಿದ್ದರು ಎಂಬುದಾಗಿ ದಾಖಲಿಸಿದ್ದಾನೆ. ತೆರಿಗೆ ಪಾವತಿಸುವಷ್ಟು ಕಾಲದವರೆಗೆ ಕೃಷಿಕರನ್ನು ಜಮೀನಿನಿಂದ ಒಕ್ಕಲೆಬ್ಬಿಸುತ್ತಿರಲಿಲ್ಲ. ಮೊಘಲ್ ಕಾಲದಲ್ಲಿ ತಂತ್ರಜ್ಞಾನ ವಿದ್ಯೆಗಳ ಮತ್ತು ನೂತನ ಉಪಕರಣಗಳ ಉಪಯೋಗಗಳು ಕೃಷಿ ಕ್ಷೇತ್ರವನ್ನು ಬಲಪಡಿಸಿದವು. ನೀರಾವರಿಗಾಗಿ ಪರ್ಷಿಯನ್ ಚಕ್ರ, ಕಾಲುವೆಗಳು ಯಥೇಚ್ಛವಾಗಿ ಉಪಯೋಗಿಸಲ್ಪಟ್ಟಿತ್ತು.

### ಅಬುಲ್ ಫಜಲ್

ಅಬುಲ್ ಫಜಲ್ ಮೊಘಲ್ ಆಡಳಿತ ಕಾಲದ ಪ್ರಸಿದ್ಧ ಇತಿಹಾಸಕಾರನಾಗಿದ್ದನು. ಇವನು ಅಕ್ಬರನ ಸಲಹೆಗಾರನೂ ಜೀವನ ಚರಿತ್ರೆಯನ್ನು ಬರೆದವನೂ ಆಗಿದ್ದಾನೆ. 'ಐನ್-ಇ-ಅಕ್ಬರಿ', 'ಅಕ್ಬರ್ ನಾಮ' ಎಂಬೀ ಗ್ರಂಥಗಳನ್ನು ರಚಿಸಿದ್ದಾನೆ.



*ಚಿತ್ರ 1.7*
*ಪರ್ಷಿಯನ್ ಚಕ್ರ*

ಹೆಚ್ಚಾದ ಕೃಷಿ ಕ್ಷೇತ್ರದ ಉತ್ಪಾದನೆಯು ವ್ಯಾಪಾರವನ್ನು ಮತ್ತು ನಗರೀಕರಣದ ಬೆಳವಣಿಗೆಯ ವೇಗವನ್ನು ಹೆಚ್ಚಿಸಿತು. ಗುಜರಾತ್ ವಿದೇಶಿ ಸರಕುಗಳ ಪ್ರವೇಶ ದ್ವಾರವಾಗಿತ್ತು. ವಸ್ತ್ರಗಳು, ರೇಷ್ಮೆ, ಸಕ್ಕರೆ, ಅಕ್ಕಿ ಮೊದಲಾದವುಗಳು ವಿದೇಶಗಳಿಗೆ ರಫ್ತಾಗುತ್ತಿದ್ದ ಪ್ರಧಾನ ವಸ್ತುಗಳಾಗಿದ್ದವು. ಜಲಸಾರಿಗೆಯೂ ಮುಖ್ಯವಾಗಿ ಪ್ರಗತಿಯನ್ನು ಹೊಂದಿತ್ತು. ಆ ಕಾಲದ  ಪ್ರಮುಖ ನಗರಗಳೆಂದರೆ ಡಾಕಾ, ಮುರ್ಷಿದಾಬಾದ್, ಸೂರತ್, ಲಾಹೋರ್, ಆಗ್ರಾ ಇತ್ಯಾದಿಗಳು.

ಮೊಘಲ್ ಆಡಳಿತ ಕಾಲದ ನಗರಗಳು ಇಂದು ಯಾವೆಲ್ಲಾ ದೇಶಗಳಲ್ಲಿವೆ ಎಂಬುದನ್ನು ಕಂಡುಹಿಡಿದು ಪಟ್ಟಿ ಪೂರ್ತಿಗೊಳಿಸಿರಿ.

| ನಗರಗಳು | ಇಂದಿನ ದೇಶಗಳು |
|---|---|
| ● ಢಾಕಾ | ● ಬಾಂಗ್ಲಾದೇಶ |
| ● ಮುರ್ಷಿದಾಬಾದ್ | ● |
| ● ಲಾಹೋರ್ | ● |
| ● ಸೂರತ್ | ● |
| ● ಆಗ್ರಾ | ● |

## ಸಾಂಸ್ಕೃತಿಕ ಸಮನ್ವಯ



*ಚಿತ್ರ 1.8*
*ರಜ್ ನಾಮಾ (Razm Nama) ಎಂಬ ಪುಸ್ತಕದ ಮುಖಪುಟ*

ಚಿತ್ರವನ್ನು ಗಮನಿಸಿದಿರಲ್ಲವೇ?
ಇದು ಮೊಘಲ್ ಆಡಳಿತ ಕಾಲದಲ್ಲಿ ಪರ್ಷಿಯನ್ ಭಾಷೆಗೆ ಅನುವಾದಿಸಲ್ಪಟ್ಟ ಮಹಾಭಾರತ ಪುಸ್ತಕದ ಮುಖಪುಟವಾಗಿದೆ. ಮೊಘಲ್ ಚಕ್ರವರ್ತಿಯಾಗಿದ್ದ ಷಹಜಹಾನನ ಮಗನಾದ ದಾರಾಷುಕೋ ಈ ಅನುವಾದವನ್ನು ಮಾಡಿರುತ್ತಾನೆ.
ಮೊಘಲ್ ವಂಶಜರು ಭಾರತದ ಸಂಸ್ಕೃತಿಯೊಂದಿಗೆ ಒಟ್ಟು ಸೇರಿರುವುದಕ್ಕೆ ಇದು ಉದಾಹರಣೆಯಾಗಿದೆ. ಈ ಕಾಲದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ಒಗ್ಗೂಡುವಿಕೆಗಳು ನಡೆದವು. ಅಂತಹ ಸಾಂಸ್ಕೃತಿಕ ಸಮನ್ವಯದ ಕೆಲವು ಉದಾಹರಣೆಗಳನ್ನು ನಾವು ನೋಡೋಣ.

ತಾಜ್‌ಮಹಲ್, ಆಗ್ರಾ ಕೋಟೆ, ಕೆಂಪು ಕೋಟೆ ಮೊದಲಾದವುಗಳು ಭಾರತೀಯ ಮತ್ತು ಮೊಘಲರು ಇಲ್ಲಿಗೆ ತಂದ ಪರ್ಷಿಯನ್ ವಾಸ್ತು ಶೈಲಿಯ ಸಮನ್ವಯದ ಉದಾಹರಣೆಗಳಾಗಿವೆ. ಪರ್ಷಿಯನ್ ಮತ್ತು ಹಿಂದಿ ಭಾಷೆಗಳು ಒಟ್ಟು ಸೇರಿ ಒಂದು ಹೊಸ ಭಾಷೆಯಾದ ಉರ್ದು ಭಾಷೆಯು ರೂಪುಗೊಂಡಿತು. ಈ ಸಮನ್ವತೆಯ ಭಾಗವಾಗಿ ಈ ಕಾಲದಲ್ಲಿ ಹಿಂದೂಸ್ತಾನಿ ಸಂಗೀತವು ಹುಟ್ಟಿಕೊಂಡಿತು.



*ಚಿತ್ರ 1.9*
*ತಾಜ್‌ಮಹಲ್*



*ಚಿತ್ರ 1.10*
*ಆಗ್ರಾಕೋಟೆ*


ಮೊಘಲ್ ಆಡಳಿತ ಕಾಲದಲ್ಲಿ ಮನುಷ್ಯ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಈ ರೀತಿಯ ಸಾಮರಸ್ಯದ ಉದಾಹರಣೆಗಳನ್ನು ಕಾಣಲು ಸಾಧ್ಯವಿದೆ.

## ವಿಜಯನಗರ ಆಡಳಿತ

ಮಧ್ಯಕಾಲದಲ್ಲಿ ದೆಹಲಿಯನ್ನು ಕೇಂದ್ರೀಕರಿಸಿ ಆಡಳಿತ ನಡೆಸುತ್ತಿದ್ದ ಮೊಘಲ್ ರಾಜವಂಶದ ಕುರಿತು ನಿಮಗೆ ತಿಳಿಯಿತಲ್ಲವೇ? ಈ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವಿಭಿನ್ನ ರಾಜವಂಶಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಧಾನವಾಗಿದೆ.

### ವಿಜಯನಗರ ಮತ್ತು ಹಂಪಿ

ವಿಜಯನಗರ (ವಿಜಯದ ನಗರ) ಒಂದು ನಗರ ಹಾಗೂ ದೇಶದ ಹೆಸರಾಗಿತ್ತು. ಸಿ.ಇ 1565 ರಲ್ಲಿ ಈ ನಗರವು ನಾಶವಾಗುವುದರೊಂದಿಗೆ ಮುಂದಿನ ಶತಮಾನಗಳಲ್ಲಿ ಅದು ಜನರ ಮನಸ್ಸುಗಳಲ್ಲಿ ಮಾತ್ರ ನೆಲೆ ನಿಂತಿತು. ಅವರ ಮನಸ್ಸಿನಲ್ಲಿ ಅದು ಹಂಪಿ ಎಂಬ ಹೆಸರಿನಲ್ಲಿ ನೆಲೆ ನಿಂತಿತ್ತು. 1800 ರಲ್ಲಿ ಕೆರ್ನಾಲ್ ಮಕ್ಕೆನ್ಸ್ ಎಂಬ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಉದ್ಯೋಗಿಯು ಹಂಪಿಯ ಅವಶೇಷಗಳನ್ನು ಕಂಡುಹಿಡಿದನು. ಆ ಮೂಲಕ ವಿಜಯನಗರದ ಇತಿಹಾಸದೆಡೆಗೆ ಸಂಶೋಧಕರ ಗಮನ ಸೆಳೆಯಿತು.




*ಚಿತ್ರ 1.11*
*ಕೃಷ್ಣದೇವರಾಯರ ಕಾಲದ ವಿಜಯನಗರ.*

ಭೂಪಟವನ್ನು ನಿರೀಕ್ಷಿಸಿ ವಿಜಯನಗರವನ್ನು ಒಳಗೊಂಡ ಇಂದಿನ ಭಾರತದ ರಾಜ್ಯಗಳು ಯಾವುವು ಎಂದು ಕಂಡುಹಿಡಿದು ಪಟ್ಟಿ ಮಾಡಿರಿ.

-
-
-

| ವಿಜಯನಗರದ ರಾಜರುಗಳು | |
|---|---|
| • ಸಂಗಮ ರಾಜವಂಶ | • ಹರಿಹರ ಮತ್ತು ಬುಕ್ಕ |
| • ಸಾಳ್ವ ವಂಶ | • ನರಸಿಂಹ ಸಾಳ್ವ |
| • ತುಳುವ ವಂಶ | • ವೀರ ನರಸಿಂಹ<br>• ಕೃಷ್ಣದೇವರಾಯ |
| • ಅರವೀಡು ವಂಶ | • ತಿರುಮಲ<br>• ವೆಂಕಟ 1 |

ಸಿ.ಇ 1336 ರಲ್ಲಿ ಹರಿಹರ, ಬುಕ್ಕ ಸಹೋದರರು ವಿಜಯನಗರವನ್ನು ಸ್ಥಾಪಿಸಿದರು. ಕೃಷ್ಣದೇವರಾಯ (1509 - 1529) ದಕ್ಷಿಣ ಭಾರತದ ಪ್ರಬಲವೂ ಸಂಪತ್ಭರಿತವೂ ಆದ ವಿಜಯನಗರದ ಪ್ರಮುಖ ರಾಜನಾಗಿದ್ದನು. ಅವರ ಕುರಿತಾಗಿ ಯುರೋಪಿನ ಯಾತ್ರಿಕನಾದ ಬರ್ಬೋಸಾ ಹೇಳಿರುವ ಮಾತುಗಳನ್ನು ನಾವು ಪರಿಚಯಿಸಿಕೊಳ್ಳುವ.

"ಕ್ರೈಸ್ತನೆಂದೋ, ಯಹೂದಿಯೆಂದೋ, ಮ್ಯೂರ್ ಎಂದೋ, ಕಿರಾತನೆಂದೋ ವ್ಯತ್ಯಾಸವಿಲ್ಲದೆ ತನ್ನ ನಂಬಿಕೆಯನ್ನು ಉಳಿಸಿಕೊಂಡು ಹೋಗಲು ಮತ್ತು ಜೀವಿಸಲು ಯಾವುದೇ ಅಡ್ಡಿ ಆತಂಕಗಳು ಇಲ್ಲದಂತೆ ರಾಜನು ಸ್ವಾತಂತ್ರ್ಯವನ್ನು ನೀಡಿದ್ದನು. ದೇಶದ ನ್ಯಾಯ ನೀತಿ ವ್ಯವಸ್ಥೆಯು ಸಮಾನತೆಯಿಂದ ಕೂಡಿತ್ತು."



**ಬರ್ಬೋಸ**
ಭಾರತ ಸಂದರ್ಶಿಸಿದ ಪೋರ್ಚುಗೀಸ್ ಯಾತ್ರಿಕ

ಕೃಷ್ಣದೇವರಾಯನ ಆಡಳಿತ ಕಾಲವು ರಾಜ್ಯದ ವಿಸ್ತರಣೆ ಮತ್ತು ಅಭಿವೃದ್ಧಿಯ ಕಾಲಘಟ್ಟವಾಗಿತ್ತು. ಅವರು ಅನೇಕ ನಿರ್ಮಾಣ ಚಟುವಟಿಕೆಗಳನ್ನು ಆ ಕಾಲದಲ್ಲಿ ನಡೆಸಿದರು. ರಾಜಧಾನಿ ನಗರವಾದ ಹಂಪಿಯಲ್ಲಿ ಹೆಚ್ಚಿನ ಸೌಕರ್ಯಗಳನ್ನು ಏರ್ಪಡಿಸುವುದರೊಂದಿಗೆ ಕೋಟೆಗಳು, ಅರಮನೆಗಳು, ದೇವಾಲಯಗಳನ್ನು ಆ ಕಾಲದಲ್ಲಿ ನಿರ್ಮಿಸಲಾಯಿತು. ಮತ ಸಹಿಷ್ಣುತೆಯು ಅವರ ಖ್ಯಾತಿಗೆ ಮತ್ತೊಂದು ಪ್ರಮುಖ ಕಾರಣವಾಗಿದೆ. ಎಲ್ಲಾ ಮತಗಳನ್ನು ಸಮಾನವಾಗಿ ಪರಿಗಣಿಸುವುದರೊಂದಿಗೆ ವಿವಿಧ ಮತಾನುಯಾಯಿಗಳಿಗೆ ಅವರವರ ಸ್ವಂತ ನಂಬಿಕೆಯ ಪ್ರಕಾರ ಬದುಕಲು ಎಲ್ಲಾ ಸ್ವಾತಂತ್ರ್ಯವನ್ನು ಅವರು ನೀಡಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಕಲೆ-ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರಗಳು ಗಮನಾರ್ಹವಾದ ಬೆಳವಣಿಗೆಯನ್ನು

ಹೊಂದಿದ್ದವು. ಅಸಾಧಾರಣವಾದ ಪಾಂಡಿತ್ಯ ಇದ್ದ ಅವರು 'ಆಮುಕ್ತಮಾಲ್ಯದ', 'ಜಾಂಬವತಿಕಲ್ಯಾಣ' ಎಂಬೀ ಕೃತಿಗಳನ್ನು ರಚಿಸಿದ್ದಾರೆ. ತೆಲುಗು, ಕನ್ನಡ, ತಮಿಳು ಸಾಹಿತ್ಯಗಳನ್ನು ಪ್ರೋತ್ಸಾಹಿಸಿದ್ದಾರೆ. 'ಅಷ್ಟದಿಗ್ಗಜರು' ಎಂದು ಕರೆಯಲ್ಪಡುವ ಪಂಡಿತರು ಕೃಷ್ಣದೇವರಾಯನ ಆಸ್ಥಾನವನ್ನು ಅಲಂಕರಿಸಿದ್ದರು.

ಅಕ್ಬರ ಮತ್ತು ಕೃಷ್ಣದೇವರಾಯರ ಧಾರ್ಮಿಕ ನೀತಿಗಳನ್ನು ಹೋಲಿಸಿ ಟಿಪ್ಪಣಿ ತಯಾರಿಸಿರಿ.

## ಆಡಳಿತ ವ್ಯವಸ್ಥೆ

ವಿಜಯನಗರ ಆಡಳಿತದಲ್ಲಿಯೂ ರಾಜಾಡಳಿತವೇ ಅಸ್ತಿತ್ವದಲ್ಲಿತ್ತು. ಆಡಳಿತ ಸೌಕರ್ಯಕ್ಕಾಗಿ ರಾಜ್ಯವನ್ನು ಮಂಡಲಗಳು(ಪ್ರವೀನ್ಸ್‌ಗಳು), ನಾಡುಗಳು(ಜಿಲ್ಲೆಗಳು), ಸ್ಥಳಗಳು(ಉಪ ಜಿಲ್ಲೆಗಳು), ಗ್ರಾಮಗಳು ಹೀಗೆ ವಿಭಜಿಸಲಾಗಿತ್ತು. ರಾಜನಿಗೆ ಸಹಾಯ ಮಾಡಲು ಮಂತ್ರಿಮಂಡಲವಿತ್ತು. ಮಂತ್ರಿಗಳನ್ನು ಹಿಂಬಡ್ತಿಗೊಳಿಸಲು ಹಾಗೂ ಶಿಕ್ಷೆಗೆ ಒಳಪಡಿಸಲು ರಾಜನಿಗೆ ಅಧಿಕಾರವಿತ್ತು. ನ್ಯಾಯ ನೀತಿ ನಿರ್ವಹಣೆಗಾಗಿ ವಿವಿಧ ಸ್ಥಳಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿತ್ತು. ರಾಜನು ಮೇಲ್ಮನವಿ ಅಧಿಕಾರಿ ಆಗಿದ್ದನು. ಸಣ್ಣಪುಟ್ಟ ತಪ್ಪುಗಳು ಮತ್ತು ವೃತ್ತಿಪರವಾದ ವಿವಾದಗಳನ್ನು ಗ್ರಾಮಗಳಲ್ಲಿರುವ ನ್ಯಾಯಾಲಯಗಳು ಪರಿಹರಿಸುತ್ತಿದ್ದವು.

ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ನಾಯಕರು ಮತ್ತು ಅಮರನಾಯಕರು ಪ್ರಧಾನ ಸ್ಥಾನವನ್ನು ವಹಿಸಿದ್ದರು. ಸೈನ್ಯದ ಉನ್ನತ ಅಧಿಕಾರಿಗಳನ್ನು 'ಅಮರನಾಯಕರು' ಎಂದು ಕರೆಯುತ್ತಿದ್ದರು. ರಾಜರುಗಳು ಇವರಿಗೆ ಭೂಪ್ರದೇಶಗಳನ್ನು ನೀಡಿದ್ದರು. ಈ ಪ್ರದೇಶಗಳು 'ಅಮರ' ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಅಮರದ ಆಡಳಿತವನ್ನು ಅಮರ ನಾಯಕರು ನಡೆಸುತ್ತಿದ್ದರು. ಅಮರ ನಾಯಕರು ಈ ಪ್ರದೇಶಗಳಿಂದ ತೆರಿಗೆ ಸಂಗ್ರಹಿಸುವ ಹಕ್ಕನ್ನು ಹೊಂದಿದ್ದರು. ಅಮರ ನಾಯಕರು ರಾಜನಿಗೆ ನಿಗದಿತ ಮೊತ್ತವನ್ನು ಪಾವತಿಸಿದ್ದರು. ಅವರು ನಿರ್ದಿಷ್ಟ ಸಂಖ್ಯೆಯ ಕಾಲಾಳುಗಳು, ಕುದುರೆಗಳು ಮತ್ತು ಆನೆಗಳನ್ನು ಹೊಂದಿದ್ದರು. ಈ ಪದ್ಧತಿಯನ್ನು 'ಅಮರ ನಾಯಕ ಪದ್ಧತಿ' ಎಂದು ಕರೆಯುತ್ತಿದ್ದರು.

ಮನ್ಸ್‌ಬ್ದಾರಿ - ಅಮರ ನಾಯಕ ಸಂಪ್ರದಾಯವನ್ನು ಹೋಲಿಸಿ ಪಟ್ಟಿ ಮಾಡಿರಿ.

## ಸಾಮಾಜಿಕ - ಆರ್ಥಿಕ ಸ್ಥಿತಿ

ವಿಜಯನಗರ ಸಮಾಜವು ವಿವಿಧ ಜಾತಿ ಮತ್ತು ಮತಗಳನ್ನು ಒಳಗೊಂಡಿತ್ತು. ಬ್ರಾಹ್ಮಣರು ಸಮಾಜದಲ್ಲಿ ಪ್ರಾಬಲ್ಯವನ್ನು ಹೊಂದಿದ್ದರು. ದೇವಾಲಯಗಳಿಗೆ ಮಂಜೂರಾದ ಜಮೀನುಗಳ ಆದಾಯಕ್ಕೆ ಇವರು ಹಕ್ಕುದಾರರಾಗಿದ್ದರು. ದೇವಾಲಯಗಳ ಪೂಜಾದಿ ಧಾರ್ಮಿಕ ವಿಧಿ ವಿಧಾನಗಳ ನಾಯಕತ್ವವನ್ನು ಬ್ರಾಹ್ಮಣರು ವಹಿಸಿದ್ದರು. ಸಮಾಜದ ಇತರ ವಿಭಾಗಗಳು ಪ್ರಧಾನವಾಗಿ ಕೃಷಿ, ವ್ಯಾಪಾರ ಮತ್ತು ಕರಕುಶಲ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ಪ್ರಧಾನವಾಗಿ ತೊಡಗಿಸಿಕೊಂಡಿದ್ದರು. ಅರಮನೆಯ ರಾಜಕೀಯ ಲೆಕ್ಕ ಪತ್ರಗಳನ್ನು ತಯಾರಿಸಲು ಹಾಗೂ ವೃಂದಾವನಗಳನ್ನು ಅಲಂಕರಿಸಲು ಸ್ತ್ರೀಯರ ಸೇವೆಯನ್ನು ಉಪಯೋಗಿಸುತ್ತಿದ್ದರು. ಶ್ರೀಮಂತರೆಡೆಯಲ್ಲಿ ಬಹು ಪತ್ನಿತ್ವವು ರೂಢಿಯಲ್ಲಿತ್ತು. ಬಾಲ್ಯ ವಿವಾಹ, ಸತಿ ಪದ್ಧತಿ ಇತ್ಯಾದಿಗಳು ಸಮಾಜದಲ್ಲಿ ಕಂಡುಬರುತ್ತಿದ್ದವು.

‘ಮುಂದೆ ಸಾಗುವಾಗ ನಿಮ್ಮ ಮುಂದೆ ವಿಶಾಲವೂ ಮನೋಹರವೂ ಆದ ಒಂದು ಬೀದಿ ಇದೆ... ಈ ಬೀದಿಯಲ್ಲಿ ಅನೇಕ ವ್ಯಾಪಾರಿಗಳು ವಾಸಿಸುತ್ತಿದ್ದಾರೆ. ಅಲ್ಲಿ ನಿಮಗೆ ಮುತ್ತು, ರತ್ನ, ಮಾಣಿಕ್ಯ, ಹವಳ, ಬಟ್ಟೆಬರೆ ಇತ್ಯಾದಿ ವಸ್ತುಗಳು ಮಾರಾಟಕ್ಕೆ ಇಟ್ಟಿರುವುದನ್ನು ಕಾಣಬಹುದು. ಅಲ್ಲಿ ಕುದುರೆಗಳು, ಕಿತ್ತಳೆ, ದ್ರಾಕ್ಷಿ, ಮರ... ಇತ್ಯಾದಿಗಳನ್ನೆಲ್ಲಾ ಮಾರುತ್ತಾರೆ.’



**- ಡೊಮಿಂಗೊ ಫಯಾಸ್**

(ವಿಜಯನಗರವನ್ನು ಸಂದರ್ಶಿಸಿದ ಪೋರ್ಚುಗೀಸ್ ಯಾತ್ರಿಕ)

ಮೇಲೆ ಕೊಟ್ಟಿರುವ ಪ್ರವಾಸ ಟಿಪ್ಪಣಿಯನ್ನು ಓದಿದಿರಲ್ಲವೇ.

ರಾಜ್ಯವನ್ನು ಸಂದರ್ಶಿಸಿದ ಅನೇಕ ಯಾತ್ರಿಕರು ವಿಜಯನಗರದ ಪ್ರೌಢಿಮೆಯನ್ನು ದಾಖಲಿಸಿದ್ದಾರೆ. ಕೃಷಿಯು ಜನರ ಪ್ರಧಾನ ಕಸುಬಾಗಿತ್ತು. ರೇಷ್ಮೆ, ಹತ್ತಿ ವಸ್ತ್ರಗಳನ್ನು ಸಾಮಾನ್ಯವಾಗಿ ಅವರು ಉಪಯೋಗಿಸುತ್ತಿದ್ದರು. ವಿಜಯನಗರದ ಸುತ್ತಲಿರುವ ಬಂಜರು ಭೂಮಿಗೆ ನೀರಾವರಿ ವ್ಯವಸ್ಥೆಯನ್ನು ಒದಗಿಸಿದ್ದರು. 15ನೇ ಶತಮಾನದಲ್ಲಿ ನಿರ್ಮಿಸಿದ ಕಮಲಾಪುರ ಕೆರೆಯೂ ಹಿರಿಯ ಕಾಲುವೆಯೂ ತುಂಗಭದ್ರಾ ನದಿಗೆ ಅಡ್ಡವಾಗಿ ಕಟ್ಟಿದ್ದ ಅಣೆಕಟ್ಟು ಕೃಷಿ ಕ್ಷೇತ್ರವನ್ನು ಸಂಪನ್ನಗೊಳಿಸಿತು.

ಭೂಮಿಯನ್ನು ಅಳತೆ ಮಾಡಿ ಗುಣಮಟ್ಟಕ್ಕೆ ಅನುಸಾರವಾಗಿ ತೆರಿಗೆಯನ್ನು ನಿಶ್ಚಯಿಸಿದರು. ಭೂತೆರಿಗೆಯ ಹೊರತಾಗಿ ವೃತ್ತಿ ತೆರಿಗೆ, ಮನೆ ತೆರಿಗೆ, ವಿವಿಧ ರೀತಿಯ ಪರವಾನಿಗೆ ಶುಲ್ಕ ಮತ್ತು ನ್ಯಾಯಾಲಯ ವಿಧಿಸಿದ ಶಿಕ್ಷೆಗೆ ಅನುಸರಿಸಿದ ದಂಡ ಮೊದಲಾದವುಗಳಿಂದ ಬಂದ ಹಣವು ಸರಕಾರದ ಪ್ರಧಾನ ಆದಾಯವಾಗಿತ್ತು.

ವಿಜಯ ನಗರವು ಒಂದು ದೊಡ್ಡ ವ್ಯಾಪಾರ ಕೇಂದ್ರವಾಗಿ ಅಭಿವೃದ್ಧಿ ಹೊಂದಿತ್ತು. ಭಾರತ ಮತ್ತು ಪ್ರಪಂಚದ ವಿವಿಧ ಭಾಗಗಳಿಂದ ವ್ಯಾಪಾರಿಗಳು ಪ್ರಸಿದ್ಧವಾದ ವಿಜಯನಗರಕ್ಕೆ ಬಂದು ಸೇರುತ್ತಿದ್ದರು. ಆಡಳಿತಾಧಿಕಾರಿಗಳು ವಿದೇಶ ವ್ಯಾಪಾರಕ್ಕೆ ತುಂಬಾ ಪ್ರೋತ್ಸಾಹವನ್ನು ನೀಡಿದ್ದರು. ಪೋರ್ಚುಗೀಸರು ಮತ್ತು ಅರಬರು ವಿದೇಶಿ ವ್ಯಾಪಾರದ ಮೇಲೆ ಏಕ ಸ್ವಾಮ್ಯ ಹೊಂದಿದ್ದರು. ಚೀನಾ ಮತ್ತು ಶ್ರೀಲಂಕಾ ರಾಜ್ಯಗಳೊಂದಿಗೂ ವ್ಯಾಪಾರವು ನಡೆಯುತ್ತಿತ್ತು. ಮುಖ್ಯವಾಗಿ ಅರಬರು ಅರೇಬಿಯಾ ಮತ್ತು ಮಧ್ಯ ಏಷ್ಯಾದಿಂದ ತಂದ ಕುದುರೆಗಳ ವ್ಯಾಪಾರವನ್ನು ನಡೆಸುತ್ತಿದ್ದರು.

ಕುದುರೆಗಳು ವ್ಯಾಪಾರದ ಪ್ರಮುಖ ವಸ್ತುವಾಗಿದ್ದವು. ಕುದುರೆಗಳ ವ್ಯಾಪಾರಗಳಲ್ಲಿ ತೊಡಗಿದ್ದ ಸ್ಥಳೀಯ ವ್ಯಾಪಾರಿಗಳನ್ನು ‘ಕುದುರೆ ಚೆಟ್ಟಿಗಳು’ ಎಂದು ಕರೆಯುತ್ತಿದ್ದರು. ಕಾಲ ಕ್ರಮೇಣ ಅರಬಿಗಳನ್ನು ಹಿಂದೆ ತಳ್ಳಿ ಪೋರ್ಚುಗೀಸರು ಈ ವ್ಯಾಪಾರದ ನಿಯಂತ್ರಣವನ್ನು ಕೈಗೆತ್ತಿಕೊಂಡರು. ವ್ಯಾಪಾರದಿಂದ ಬಂದ ಆದಾಯವು ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಿತ್ತು. ನಗರದಿಂದ ಲಭಿಸಿದ ಚೀನಿ ಮಣ್ಣಿನ ಪಾತ್ರೆಗಳು ಚೀನಾದೊಂದಿಗಿದ್ದ ವ್ಯಾಪಾರ ಸಂಬಂಧವನ್ನು ಸೂಚಿಸುತ್ತದೆ.

## ಸಂಸ್ಕೃತಿ



*ಚಿತ್ರ 1.12*
*ಹಸಾರ ರಾಮ ದೇವಾಲಯ, ಹಂಪಿ*



*ಚಿತ್ರ 1.13*
*ವಿಠಲ ಸ್ವಾಮಿ ದೇವಾಲಯ, ಹಂಪಿ*

ವಿಜಯನಗರ ಕಾಲಘಟ್ಟದಲ್ಲಿ ಸಾಂಸ್ಕೃತಿಕ ವಲಯವು ಹೆಚ್ಚಿನ ಪ್ರಗತಿಯನ್ನು ಸಾಧಿಸಿತ್ತು. ವೇದಗಳು ಮತ್ತು ಶಾಸ್ತ್ರಗಳ ಅಧ್ಯಯನಕ್ಕಾಗಿ ಅನೇಕ ಪಾಠ ಶಾಲೆಗಳನ್ನು ಸ್ಥಾಪಿಸಲಾಯಿತು. ವಿಜಯನಗರದ ಕಾಲದಲ್ಲಿ ಕಲೆ, ವಾಸ್ತುಕಲೆ, ಶಿಲ್ಪಕಲೆ, ಸಾಹಿತ್ಯ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಭೂತಪೂರ್ವವಾದ ಬೆಳವಣಿಗೆಯು ಉಂಟಾಯಿತು. ಕೃಷ್ಣದೇವರಾಯನಂತಹ ರಾಜರುಗಳು ಕಲೆ ಮತ್ತು ಸಾಹಿತ್ಯದ ಪೋಷಕರಾಗಿದ್ದರು. ಆ ಕಾಲದಲ್ಲಿ ಹೆಚ್ಚಾಗಿ 'ದ್ರಾವಿಡ ಶೈಲಿ'ಯು ಪ್ರಾಬಲ್ಯದಲ್ಲಿತ್ತು. ಗೋಪುರಗಳು ಎಂದು ಕರೆಯಲ್ಪಟ್ಟಿದ್ದ ಬ್ರಹದಾಕಾರದ ದೇವಾಲಯ ದ್ವಾರಗಳು ವಿಜಯನಗರ ಶಿಲ್ಪಕಲೆಯ ಮತ್ತೊಂದು ವೈಶಿಷ್ಟ್ಯವಾಗಿದೆ.



*ಚಿತ್ರ 1.14*
*ವಿರೂಪಾಕ್ಷ ದೇವಾಲಯ, ಹಂಪಿ*



*ಚಿತ್ರ 1.15*
*ಲೋಟಸ್ ಮಹಲ್, ಹಂಪಿ*

ಸಾಹಿತ್ಯ ಕ್ಷೇತ್ರವು ಈ ಕಾಲಘಟ್ಟದಲ್ಲಿ ಬಹಳ ಪ್ರಗತಿಯನ್ನು ಹೊಂದಿತ್ತು. ತೆಲುಗು ಸಾಹಿತ್ಯವು ಅತ್ಯಂತ ಹೆಚ್ಚು ಅಭಿವೃದ್ಧಿ ಹೊಂದಿತ್ತು. ಈ ಅವಧಿಯಲ್ಲಿ ಅನೇಕ ಸಂಸ್ಕೃತ ಕೃತಿಗಳನ್ನು ವಿವಿಧ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲಾಗಿದೆ.

## ಮುಂದುವರಿದ ಚಟುವಟಿಕೆ

- ವಿಜಯನಗರ ಆಡಳಿತ ಕಾಲದ ಸಾಂಸ್ಕೃತಿಕ ಕೊಡುಗೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಒಂದು ಡಿಜಿಟಲ್ ಆಲ್ಬಮ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.
- ಅಕ್ಬರ್ ಮತ್ತು ಕೃಷ್ಣದೇವರಾಯರ ಕಾಲಘಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉಂಟಾದ ಸಾಧನೆಗಳು ಮಾದರಿಯಾಗಿದ್ದವು. ಕೊಟ್ಟಿರುವ ಸೂಚನೆಗಳ ಆಧಾರದಲ್ಲಿ ಇವರ ಕೊಡುಗೆಗಳನ್ನು ಹೋಲಿಕೆ ಮಾಡಿ ಸೆಮಿನಾರ್ ನಡೆಸಿರಿ.

  **ಸೂಚನೆಗಳು**

  - ಆಡಳಿತ ರೀತಿ
  - ಸಂಸ್ಕೃತಿ
  - ಸಂಪತ್ತು
  - ನ್ಯಾಯ ನೀತಿ

- ಮೊಘಲ್, ವಿಜಯನಗರ ಆಡಳಿತ ಸಂಪ್ರದಾಯಗಳ ಸಾಮಾನ್ಯ ಅಂಶಗಳನ್ನು ಹೋಲಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಮೊಘಲ್ ಆಡಳಿತ | ವಿಜಯನಗರ ಆಡಳಿತ |
|---|---|
| • ರಾಜಾಡಳಿತ | • ರಾಜಾಡಳಿತ |
| • | • |
| • | • |
| • | • |
| • | • |

- ಮೊಘಲ್ ಆಡಳಿತದ ಕಾಲದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉಂಟಾದ ಸಮನ್ವಯಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಪ್ರಸ್ತುತಪಡಿಸಿರಿ.



2

# ಮಧ್ಯಕಾಲ ಭಾರತ : ಸಾಂಸ್ಕೃತಿಕ ಚಳುವಳಿಗಳು

**ತಮಿಳು ಸಾಲು**

ಕೋನೇರಿ ವಾಳುಂ ಕೂರುಕ್ಕಾಯಿ ಪಿರಪ್ಪೇನೆ
ತಿರುವೆಂಕಟ ಚೂನಯಿಲ್ ಮೀನಾಯಿ ಪಿರಕ್ಕುಮ್
ವೆಂಕಟತ್ ಚೆಂಬಕಮಾಯಿ ನಿರ್ಕುಂ
ವೆಂಕಟಮಲೈಮೇಲ್ ತಂಬಹಮಾಯಿ
ಕೋಯಿಲಿನ್ ವಾಸಲಿಲ್ ಪಡಿಯಾಯಿ ಕಿಡಂದುಂ.

ಕುಲಶೇಖರ ಆಳ್ವಾರ್
'ಪೆರುಮಾಳ್ ತಿರುಮೊಯ್ಝಿ'

**ಭಾಷಾಂತರ**

ತಿರುವೆಂಕಟಗಿರಿಯಲ್ಲಿ ಒಂದು ಪಾರಿವಾಳವಾಗಿ,
ಅಲ್ಲಿನ ಕೆರೆಯಲ್ಲಿ ಒಂದು ಮೀನಾಗಿ, ಒಂದು
ಸಂಪಿಗೆಯಾಗಿ, ಗಿರಿಯ ಒಂದು ಕಂಬವಾಗಿ
ಆಲಯದ ಒಂದು ಮೆಟ್ಟಿಲಾಗಿಯಾದರೂ
ಜನಿಸಿದರೆ ಸಾಕು.

ಒಂಬತ್ತನೇ ಶತಮಾನದಲ್ಲಿ ಕೇರಳದಲ್ಲಿ ಜನಿಸಿದ್ದ ಕುಲಶೇಖರ ಆಳ್ವಾರ್ ಎಂಬ ಭಕ್ತನಾದ ಕವಿ ರಚಿಸಿದ 'ಪೆರುಮಾಳ್ ತಿರುಮೊಯ್ಝಿ' ಎಂಬ ಕೃತಿಯ ಒಂದು ಭಾಗವನ್ನು ಮೇಲೆ ನೀಡಲಾಗಿದೆ.

ಈ ಸಾಲುಗಳಿಂದ ನಿಮಗೆ ತಿಳಿಯುವ ಆಶಯವೇನು?

ಭಕ್ತಿ ಎಂದರೆ ದೇವರಿಗೆ ಸಂಪೂರ್ಣವಾಗಿ ಜೀವನವನ್ನು ಸಮರ್ಪಿಸುವುದು ಎಂದು ಅರ್ಥ. ಭಕ್ತಿಯನ್ನು ಆಧಾರವಾಗಿರಿಸಿ ಬೆಳೆದು ಬಂದ ಆಶಯಗಳು ಮತ್ತು ಚಟುವಟಿಕೆಗಳನ್ನು ಭಕ್ತಿ ಚಳುವಳಿ ಎಂದು ಕರೆಯುತ್ತಾರೆ.


ಮಧ್ಯಕಾಲ ಘಟ್ಟದಲ್ಲಿ ಭಾರತದಲ್ಲಿ ನೆಲೆ ನಿಂತಿದ್ದ ಸಂಪ್ರದಾಯವಾದಿ ದೃಷ್ಟಿಕೋನಗಳು ಮತ್ತು ಜಾತಿ ವ್ಯವಸ್ಥೆಗಳು ಜನರೆಡೆಯಲ್ಲಿ ತಾರತಮ್ಯವನ್ನು ಸೃಷ್ಟಿಸಿತ್ತು. ಸಾಮಾಜಿಕ ಅಸಮಾನತೆಯನ್ನು ಅನುಭವಿಸಿದ್ದ ಜನರು ಭಕ್ತಿ ಚಳುವಳಿಯೆಡೆಗೆ ಆಕರ್ಷಿತರಾದರು. ಕ್ರಮೇಣ, ವ್ಯತ್ಯಸ್ತ ಕಾಲಗಳಲ್ಲಿ ಭಾರತದಲ್ಲಿ ವಿವಿಧ

ST-503-4-SOC. SCI. (K)-7-VOL-1

ಪಂಥಗಳು ಮತ್ತು ಆಚರಣೆಗಳ ಸಮನ್ವಯ ಉಂಟಾಯಿತು. ಈ ರೀತಿ ಭಾರತದಾದ್ಯಂತ ಪಸರಿಸಿದ ಭಕ್ತಿ-ಸೂಫಿ ಚಳುವಳಿಗಳ ಕುರಿತು ನಾವು ಈ ಅಧ್ಯಾಯದಲ್ಲಿ ಚರ್ಚಿಸಲಿದ್ದೇವೆ.

## ದಕ್ಷಿಣ ಭಾರತದ ಭಕ್ತಿ ಚಳುವಳಿ

ಇಷ್ಟ ದೇವತೆಗಳೊಂದಿಗಿರುವ ಧೃಡವಾದ ಭಕ್ತಿಯನ್ನು ಪ್ರಕಟಪಡಿಸಲು ಗೀತೆಗಳನ್ನು ರಚನೆ ಮಾಡುತ್ತಿದ್ದ ಭಕ್ತ ಕವಿಗಳು ದಕ್ಷಿಣ ಭಾರತದಲ್ಲಿ ಜನಿಸಿದ್ದರು. ಈ ಭಕ್ತ ಕವಿಗಳು, ಆಳ್ವಾರರು ಎಂದು ಕರೆಯಲ್ಪಡುವ ವಿಷ್ಣು ಭಕ್ತರೂ ನಾಯನಾರರು ಎಂದು ಕರೆಯಲ್ಪಡುವ ಶಿವಭಕ್ತರೂ ಆಗಿದ್ದರು. ಸಿ.ಇ. 7 ಮತ್ತು 12ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಈ ಚಳುವಳಿಗಳ ವೈಶಿಷ್ಟ್ಯತೆಗಳನ್ನು ನೋಡೋಣ....




ತಮಿಳುನಾಡಿನಲ್ಲಿ ಭಕ್ತಿ ಚಳುವಳಿಯು ಒಂದು ಜನಪ್ರಿಯ ಚಳುವಳಿಯಾಗಿ ರೂಪುಗೊಂಡಿತು. ಆಳ್ವಾರರು ಮತ್ತು ನಾಯನಾರರು ಪ್ರಾದೇಶಿಕ ಭಾಷೆಗಳಲ್ಲಿ ಭಕ್ತಿಪ್ರಧಾನವಾದ ಹಾಡುಗಳನ್ನು ಹಾಡುತ್ತಾ ದೇಶ ಸಂಚಾರ ನಡೆಸಿದುದರ ಕಾರಣ ಭಕ್ತಿ ಚಳುವಳಿಯು ಪ್ರಚಾರವಾಯಿತು. ಅನಾಚಾರಗಳು ಮತ್ತು ಅಸಮಾನತೆಗಳು ಪ್ರಬಲವಾಗಿದ್ದ ಆ ಕಾಲದಲ್ಲಿ ಭಕ್ತಿ ಕವಿಗಳ ರಚನೆಗಳು ಜನಸಾಮಾನ್ಯರನ್ನು ಹೆಚ್ಚು ಆಕರ್ಷಿಸಿತು. ಸಮಾಜದಲ್ಲಿ ನೆಲೆ ನಿಂತಿದ್ದ ಅರ್ಥಶೂನ್ಯವಾದ ಆಚಾರಗಳು ಪ್ರಶ್ನಿಸಲ್ಪಟ್ಟವು. ಜಾತಿ ಭೇದವಿಲ್ಲದ, ಸಮಾಜದ ಎಲ್ಲಾ ವಿಭಾಗದ ಜನರು ಭಕ್ತಿ ಚಳುವಳಿಯೆಡೆಗೆ ಆಕರ್ಷಿತರಾದರು. ಆಳ್ವಾರರ ಮತ್ತು ನಾಯನಾರರ ರಚನೆಗಳು ಹಿಂದೂ ಧರ್ಮವನ್ನು ಹೆಚ್ಚು ಜನಪ್ರಿಯಗೊಳಿಸಿದವು.

ಆಳ್ವಾರರ ರಚನೆಗಳು 'ನಾಲಾಯಿರ ದಿವ್ಯ ಪ್ರಬಂಧಂ' ಎಂದೂ ನಾಯನಾರರ ರಚನೆಗಳು 'ತಿರುಮುರೈಗಳ್' ಎಂದು ಗುರುತಿಸಲ್ಪಟ್ಟಿದೆ. ಈ ಕಾಲದಲ್ಲಿ ಅನೇಕ ದೇವಾಲಯಗಳೂ ನಿರ್ಮಾಣಗೊಂಡವು.



*ಚಿತ್ರ 2.1*
*ಸಿ.ಇ. 1700 ರಲ್ಲಿ ತಮಿಳುನಾಡಿನ ಒಂದು ಶಿವ ಕ್ಷೇತ್ರದಲ್ಲಿ ಸಿಕ್ಕಿದ ತೇವಾರಂ ಎಂಬ ಕೃತಿಯ ಹಸ್ತಾಕ್ಷರ*

## ಭಕ್ತಿ ಚಳುವಳಿಯ ಪ್ರಧಾನ ಕವಿಗಳು





ದಕ್ಷಿಣ ಭಾರತದ ಭಕ್ತಿ ಚಳುವಳಿಯು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವೆಲ್ಲ ಬದಲಾವಣೆಗಳನ್ನು ಮಾಡಿವೆ? ಟಿಪ್ಪಣಿ ತಯಾರಿಸಿರಿ.

ಭಕ್ತಿ ಚಳುವಳಿಯು ಕ್ರಮೇಣ ಭಾರತದ ವಿವಿಧ ಭಾಗಗಳಿಗೆ ಪಸರಿಸಲು ಆರಂಭವಾಯಿತು. ವಿವಿಧ ಪ್ರದೇಶಗಳ ಭಕ್ತಿ ಚಳುವಳಿಯ ಪ್ರಚಾರಕರನ್ನು ನಾವು ಪರಿಚಯಿಸಿಕೊಳ್ಳೋಣ.

## ಬಸವಣ್ಣ : ಕನ್ನಡ ನಾಡಿನ ಮಾನವ ಸ್ನೇಹಿ

ಬಸವಣ್ಣನವರು ರೂಪಿಸಿದ 'ಅನುಭವ ಮಂಟಪ' ಎಂಬ ಚರ್ಚಾ ವೇದಿಕೆಯಲ್ಲಿ ನಡೆದ ಒಂದು ಚರ್ಚೆಯ ಚಿತ್ರವನ್ನು ಕೆಳಗೆ ನೀಡಲಾಗಿದೆ. ಚಿತ್ರವನ್ನು ಗಮನಿಸಿರಿ.




*ಚಿತ್ರ 2.2*
*ಬಸವಣ್ಣನವರು ಅನುಭವ ಮಂಟಪದಲ್ಲಿ ಜನರೊಂದಿಗೆ ಚರ್ಚೆ ನಡೆಸುವುದು.*
*(ಚಿತ್ರ ಕಲಾವಿದನ ಭಾವನೆಯಲ್ಲಿ)*

### ಅನುಭವ ಮಂಟಪ



ಅನುಭವ ಮಂಟಪವು 12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಆಧ್ಯಾತ್ಮಿಕ ಚರ್ಚಾ ವೇದಿಕೆಯಾಗಿದೆ. ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಇವರು ಅನುಭವ ಮಂಟಪದಲ್ಲಿ ಚರ್ಚೆಗಳಿಗೆ ನೇತೃತ್ವ ನೀಡುತ್ತಿದ್ದರು. ಜಾತಿ, ಲಿಂಗ ಭೇದವಿಲ್ಲದೆ ಎಲ್ಲರಿಗೂ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶ ಲಭಿಸಿತ್ತು.ಆಧ್ಯಾತ್ಮಿಕ ಚರ್ಚೆಗಳಿಗೂ ಜ್ಞಾನ ನವೀಕರಣಕ್ಕೂ ಜನರು ಅನುಭವ ಮಂಟಪದಲ್ಲಿ ಬಂದು ಸೇರುತ್ತಿದ್ದರು. ಚರ್ಚೆಗಳಲ್ಲಿ ಮೂಡಿಬಂದ ಆಶಯಗಳನ್ನು 'ವಚನಗಳು' ಎಂಬ ಸಾಹಿತ್ಯ ರಚನೆಯ ಹೆಸರಿನಲ್ಲಿ ಜನರಿಗೆ ಹಂಚಿದರು.

ಇದರಿಂದ ಆ ಕಾಲದ ಸಾಮಾಜಿಕ ವ್ಯವಸ್ಥೆಯ ಕುರಿತು ನೀವು ಏನೆಲ್ಲಾ ತಿಳಿದುಕೊಂಡಿದ್ದೀರಿ ಎಂದು ಬರೆಯಿರಿ.

- ಜಾತಿ ಭೇದಗಳು ನೆಲೆ ನಿಂತಿತ್ತು.
- 
- 

ಬಸವಣ್ಣನವರು 12ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಜೀವಿಸಿದ್ದ ತತ್ವಜ್ಞಾನಿ, ಸಮಾಜ ಸುಧಾರಕ ಮತ್ತು ಕವಿ ಆಗಿದ್ದರು. ಸಮಾಜದಲ್ಲಿ ನೆಲೆ ನಿಂತಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಅಸಮಾನತೆಗಳನ್ನು ಜನರಿಗೆ ತಿಳಿಸಿಕೊಡಲು ತೀರ್ಮಾನಿಸಿದರು ಮತ್ತು ಅವುಗಳನ್ನು ಸಮಾಜದಿಂದ ತೊಡೆದು ಹಾಕಲು ಪ್ರಯತ್ನಿಸಿದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನೀತಿ ಎಂಬಿವುಗಳಿಗೆ ಒತ್ತುಕೊಡುವ ದೃಷ್ಟಿಕೋನವನ್ನು ಬಸವಣ್ಣನವರು ಮುಂದಿಟ್ಟರು. ಅವರು ಸ್ಥಾಪಿಸಿದ ವೀರಶೈವ ಚಳುವಳಿಯ ಮೂಲಕ ಈ ಆಶಯಗಳನ್ನು ಒಟ್ಟುಗೂಡಿಸಿದರು.

ವೀರಶೈವ ಚಳುವಳಿಯ ಪ್ರಧಾನ ಚಟುವಟಿಕೆಗಳನ್ನು ಕೆಳಗೆ ನೀಡಲಾಗಿದೆ.

- ಬ್ರಾಹ್ಮಣ ಮೇಧಾವಿತ್ವ ಮತ್ತು ವೇದಗಳ ಔಚಿತ್ಯಗಳನ್ನು ಪ್ರಶ್ನಿಸಲಾಯಿತು.
- ಜಾತಿಭೇದ ಮತ್ತು ಸ್ತ್ರೀ ಅಸಮಾನತೆಗೆ ಎದುರಾಗಿ ಜನರಲ್ಲಿ ಅರಿವು ಮೂಡಿಸಿದರು.
- ಏಕ ದೇವೋಪಾಸನೆಯನ್ನು ಪ್ರೋತ್ಸಾಹಿಸಿದರು..
- ವೃತ್ತಿ ಮತ್ತು ದುಡಿಮೆಯ ಮಹತ್ವವನ್ನು ಜನರಿಗೆ ಅರ್ಥೈಸಿದರು.
- ಬಾಲ್ಯ ವಿವಾಹವನ್ನು ವಿರೋಧಿಸಿದರು ಮತ್ತು ಪ್ರಾಯ ಪೂರ್ತಿಯಾದವರ ವಿವಾಹ ಮತ್ತು ವಿಧವಾ ಪುನರ್ವಿವಾಹ ಇತ್ಯಾದಿಗಳನ್ನು ಪ್ರೋತ್ಸಾಹಿಸಿದರು.



*ಚಿತ್ರ 2.3*
*ಕರ್ನಾಟಕದ ಬಸವ ಕಲ್ಯಾಣದಲ್ಲಿ ಸ್ಥಾಪಿಸಿರುವ ಬಸವಣ್ಣನವರ ಪ್ರತಿಮೆ.*

**ಮಾನವ ಸ್ನೇಹವನ್ನು ಮತ್ತು ಸಮಾನತೆಯನ್ನು ಎತ್ತಿ ಹಿಡಿದ ಬಸವಣ್ಣನವರ ಸಂದೇಶಗಳು.**

- ಚಿಂತನೆ ಮತ್ತು ಕಾಯಕವು ಉತ್ತಮವಾದರೆ ರಾಷ್ಟ್ರವು ಅಭಿವೃದ್ಧಿಯನ್ನು ಹೊಂದುವುದು.
- ಯಾವುದೇ ಜಾತಿಯಲ್ಲಿ ಹುಟ್ಟಿದರೂ ಮನುಷ್ಯರೆಲ್ಲರಿಗೂ ಸಮಾನ ಹಕ್ಕುಗಳಿವೆ.
- ದೇವರ ಆರಾಧನೆಗೆ ಮಧ್ಯವರ್ತಿಗಳ ಅಗತ್ಯವಿಲ್ಲ.
- ಪುನರ್ಜನ್ಮವಿಲ್ಲ, ಈ ಜನ್ಮದಲ್ಲಿಯೇ ಧನ್ಯತೆಯನ್ನು ಕಾಣಿರಿ.

**ವೀರಶೈವ ಚಳುವಳಿಯು ಜಾತಿ ಭೇದ ಮತ್ತು ಅಸಮಾನತೆಯನ್ನು ಪ್ರಶ್ನಿಸಿತು. ಈ ಹೇಳಿಕೆಯನ್ನು ವಿಶ್ಲೇಷಿಸಿರಿ.**

## ಕಬೀರ್ : ಮಾನವ ಮೈತ್ರಿಯ ಪ್ರಚಾರಕ


ಈ ಸಾಲುಗಳನ್ನು ಓದಿರಿ...

**ಅಲ್ಲಾಹು, ರಾಮ, ಕರೀಂ, ಕೇಶವ, ಹರಿ, ಹಶ್ರತ್ ಎಂಬಂತೆ**
**ದೇವರುಗಳಿಗೆ ಅನೇಕ ಹೆಸರುಗಳು.**
**ಚಿನ್ನವನ್ನು ಕರಗಿಸಿ ಬಳೆ, ಉಂಗುರಗಳನ್ನು ತಯಾರಿಸಿದರೆ ಚಿನ್ನ ಚಿನ್ನವೇ ಅಲ್ಲವೇ?**
**ವ್ಯತ್ಯಾಸಗಳು ನಾವು ನಿರ್ಮಿಸುವ ಪದಗಳಲ್ಲಿ ಮಾತ್ರವಲ್ಲವೇ?**

ನೀವು ಕಂಡುಹಿಡಿದ ಆಶಯಗಳನ್ನು ಹೇಳಿರಿ....

15ನೇ ಶತಮಾನದ ಉತ್ತರ ಭಾರತ (ಇಂದಿನ ಉತ್ತರ ಪ್ರದೇಶ)ದಲ್ಲಿ ಜೀವಿಸಿದ್ದ ಭಕ್ತಿ ಚಳುವಳಿಯ ಪ್ರಚಾರಕನಾಗಿದ್ದ ಕಬೀರ್ ಬರೆದ ಸಾಲುಗಳಿವು.


‘ದೋಹ’ಗಳು ಎಂದು ಕರೆಯಲ್ಪಡುತ್ತಿದ್ದ ಈ ರೀತಿಯ ಕೀರ್ತನೆಗಳ ಮೂಲಕ ಕಬೀರ್ ತನ್ನ ಆಶಯಗಳನ್ನು ಪ್ರಚಾರ ಮಾಡಿದರು. ಜನಸಾಮಾನ್ಯರಿಗೆ ಅರ್ಥವಾಗಲು ಸರಳವಾದ ಭಾಷೆಯಲ್ಲಿ ಕೀರ್ತನೆಗಳನ್ನು ರಚನೆ ಮಾಡಿರುವುದರಿಂದ ಕಬೀರ್‌ನ ‘ದೋಹ’ಗಳು ಜನರನ್ನು ಬಹಳ ಆಕರ್ಷಿಸಿದವು.



ಚಿತ್ರ 2.4
ಕಬೀರರು ನೇಯ್ಗೆಯಲ್ಲಿ ತಲ್ಲೀನರಾಗಿರುವುದು
(ಜೈಪುರ ವಸ್ತು ಸಂಗ್ರಹಾಲಯದ ಸಂಗ್ರಹದಿಂದ)

ಕಬೀರ್‌ದಾಸ್ ಹಿಂದು - ಮುಸ್ಲಿಂ ಸಹೋದರತೆಗಾಗಿ ದುಡಿದ ವ್ಯಕ್ತಿಯಾಗಿದ್ದರು. ಹಿಂದೂ ಮತ್ತು ಮುಸ್ಲಿಂ ಒಂದೇ ಮಣ್ಣಿನಿಂದ ನಿರ್ಮಿಸಿದ ಪಾತ್ರೆಗಳಾಗಿವೆ ಎಂದು ನೆನಪಿಸಿದರು. ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಪೂಜೆಗಳು, ಮರಣಾನಂತರದ ಆಚರಣೆಗಳು, ವಿಗ್ರಹಾರಾಧನೆ ಇತ್ಯಾದಿಗಳು ಅರ್ಥಶೂನ್ಯವೆಂದು ವಾದಿಸಿದರು. ಜಾತಿ, ಮತ, ವರ್ಣ, ಕುಟುಂಬ ಅಂತಸ್ತು, ಸಂಪತ್ತು ಇತ್ಯಾದಿಗಳ ಆಧಾರದಲ್ಲಿರುವ ಎಲ್ಲಾ ರೀತಿಯ ಭೇದ ಭಾವಗಳನ್ನು ಕಬೀರ್ ಅವರು ವಿಮರ್ಶಿಸಿದರು. ಭಕ್ತಿ - ಸೂಫಿ ಆಶಯಗಳು ಕಬೀರ್ ಅವರ ಚಟುವಟಿಕೆಗಳಿಗೆ ಹೆಚ್ಚು ಪ್ರೇರಣೆ ನೀಡಿತು. ಮತ ಸಂಪ್ರದಾಯಗಳನ್ನು ಅವರು ಪೂರ್ಣವಾಗಿ ನಿರಾಕರಿಸಿದರು. ಮತಗಳ ಬಾಹ್ಯ ಆರಾಧನಾ ಕ್ರಮಗಳನ್ನು ಅವರು ಅವಗಣಿಸಿದರು. ರೂಪವಿಲ್ಲದ ದೇವರಲ್ಲಿ ನಂಬಿಕೆ ಇರಿಸಿದ ಕಬೀರ್, ಭಕ್ತಿಯು ಮೋಕ್ಷಕ್ಕಿರುವ ದಾರಿಯಾಗಿದೆ ಎಂದು ಪ್ರಚಾರ ಮಾಡಿದರು.

ತನ್ನ ಆಶಯಗಳನ್ನು ಪ್ರಚಾರ ಮಾಡುವುದಕ್ಕಾಗಿ ಅವರು ಶಿಷ್ಯರೊಂದಿಗೆ ದೇಶ ಸಂಚಾರ ಮಾಡಿದರು. ಆ ಸಂದರ್ಭದಲ್ಲಿ ಉಂಟಾದ ಕೆಲವು ಅನುಭವಗಳನ್ನು ಓದಿರಿ...



ಚಿತ್ರ 2.5
ಕಬೀರರು ಮತ್ತು ಶಿಷ್ಯರು ಗ್ರಾಮ ಮುಖ್ಯಸ್ಥರೊಂದಿಗೆ

ಒಮ್ಮೆ ದುಃಖಿತನಾಗಿದ್ದ ಒಂದು ಗ್ರಾಮದ ಮುಖ್ಯಸ್ಥನೊಡನೆ ಕಬೀರ್ ಕಾರಣವನ್ನು ಕೇಳಿದರು. ಅವರು ಹೇಳಿದರು: “ಕರ್ಮಫಲ ಅಲ್ಲದೆ ಮತ್ತೇನು ಹೇಳಲಿ? ಸಿಡುಬು ರೋಗದಿಂದ ಜನರು ಸಾಯುತ್ತಿದ್ದಾರೆ. ಪರಿಹಾರಕ್ಕಾಗಿ ಮಂತ್ರವಾದ ಮಾಡಬೇಕು”. ಕಬೀರ್ ಜೋರಾಗಿ ನಗುತ್ತಾ ಹೀಗೆ ಹೇಳಿದರು “ರೋಗ ನಿವಾರಣೆಗೆ ಮಂತ್ರವಾದವೋ? ಮಂತ್ರವಾದದಿಂದ ಇದನ್ನು ನಿವಾರಿಸಲು ಸಾಧ್ಯವಿಲ್ಲ. ಚಿಕಿತ್ಸೆಯಿಂದ ಮಾತ್ರ ರೋಗ ನಿವಾರಣೆಯಾದೀತು”.

ಮತ್ತೊಮ್ಮೆ ಕಬೀರ್ ಮತ್ತು ಅವರ ಅನುಯಾಯಿಗಳಿಗೆ ಜನರು ಉಡುಗೊರೆಯನ್ನು ನೀಡಲು ಆರಂಭಿಸಿದರು. ಆಗ ಅವರು ಹೇಳಿದರು: “ನಾವು ನೇಯ್ಗೆಗಾರರು, ಮರ ಕಡಿಯುವವರು, ಕೃಷಿಕರು, ಚಮ್ಮಾರರು ಎಲ್ಲಾ ಆಗಿದ್ದೇವೆ. ನಾವು ಕಸುಬು ಮಾಡಿ ಬದುಕುವವರು. ನಮಗೇನೂ ಉಡುಗೊರೆ ಬೇಡ”.

ಕಬೀರರ 'ದೋಹ' ಮತ್ತು ಕಥೆಗಳ ಸಂದರ್ಭವನ್ನು ಓದಿದ್ದೀರಲ್ಲವೇ? ನೀವು ಕಂಡುಕೊಂಡ ವಿಷಯಗಳನ್ನು ಸೇರಿಸಿ ಬರೆಯಿರಿ.

- ಜನರು ದೇವರನ್ನು ಹಲವು ಹೆಸರುಗಳಿಂದ ಕರೆಯುತ್ತಾರೆ.
- ಕಬೀರರು ಜನರನ್ನು ಮೂಢನಂಬಿಕೆಗಳ ವಿರುದ್ಧ ಚಿಂತಿಸಲು ಪ್ರೇರೇಪಿಸಿದರು.
- 
- 

**ಜನರೆಡೆಯಲ್ಲಿ ಸಮಾನತೆಯ ಚಿಂತನೆ ಮತ್ತು ಮತಸೌಹಾರ್ದತೆ ಬೆಳೆದು ಬರಲು ಕಬೀರರ ಆಶಯಗಳು ಎಷ್ಟು ಮಾತ್ರ ಸಹಾಯಕವಾಯಿತು? ಚರ್ಚಿಸಿರಿ.**

## ಗುರು ನಾನಕ್ : ಪ್ರೀತಿ ಮತ್ತು ಸಹೋದರತೆ

ಗುರುನಾನಕರು ಮತ್ತು ಬಾಯಿ ಮರ್ಧಾನರು ಒಮ್ಮೆ ಸಜ್ಜನ್ ತಗ್ನ ಛತ್ರದಲ್ಲಿ ವಿಶ್ರಾಂತಿ ಪಡೆಯಲು ಬಂದರು. ಅಲ್ಲಿಗೆ ಬರುವವರನ್ನು ದರೋಡೆ ಮಾಡುವ ಸ್ವಭಾವ ಅವರಿಗೆ ಇತ್ತು. ಇದನ್ನು ಅರಿತ ಗುರುನಾನಕ್ ರಾತ್ರಿ ಅಲ್ಲಿ ನಿದ್ರಿಸಲು ತಯಾರಾಗಲಿಲ್ಲ. ಬದಲಾಗಿ ಅವರು ಗುರುನಾನಕ್ ರಚಿಸಿದ ಪ್ರಾರ್ಥನಾ ಗೀತೆಗಳಾದ 'ಷಾಬಾದ್' ಹಾಡಲು ಪ್ರಾರಂಭಿಸಿದರು. ಅದು ಇನ್ನೊಬ್ಬರ ಸಂಪತ್ತನ್ನು ದರೋಡೆ ಮಾಡುವುದು ಅನ್ಯಾಯವಾಗಿದೆ ಎಂಬ ಅರ್ಥ ಬರುವ ಸಾಲುಗಳಾಗಿತ್ತು. ಆ ಪದ್ಯದ ಸಾಲುಗಳನ್ನು ಕೇಳಿದಾಗ ಸಜ್ಜನ್ ತಗ್ಗೆ ತನ್ನ ತಪ್ಪಿನ ಅರಿವಾಗಿ ಅವರು ಗುರುವಿನೊಡನೆ ಕ್ಷಮೆ ಕೇಳಿದರು. ಕಳ್ಳತನ ಮಾಡಿದ ಸಂಪತ್ತನ್ನೆಲ್ಲಾ ಬಡವರಿಗೆ ದಾನ ಮಾಡಲು ಮತ್ತು ಸತ್ಯವಂತನಾಗಿ ಬದುಕಲು ಅವನಿಗೆ ಗುರುನಾನಕ್ ಉಪದೇಶಿಸಿದರು. ನಂತರ ಸಜ್ಜನ್ ಛತ್ರಕ್ಕೆ ಬರುವ ಜನರಿಗೆ ಸಹಾಯಗಳನ್ನು ನೀಡಿ ಬದುಕಲು ಆರಂಭಿಸಿದರು.



*ಚಿತ್ರ 2.6*
*ಗುರುನಾನಕ್ ಮತ್ತು ಬಾಯಿ ಮರ್ಧಾನರು*

ಈ ಕಥೆಯಿಂದ ನಿಮಗೆ ಯಾವೆಲ್ಲಾ ಆಶಯಗಳು ಲಭಿಸಿತು?

- 
- 
- 

ಗುರುನಾನಕರು 15ನೇ ಶತಮಾನದಲ್ಲಿ ಪಂಜಾಬಿನ ಶೇಖ್‌ಪುರದ ತಲ್ವಂಡಿ (ಈಗಿನ ಪಾಕಿಸ್ತಾನ) ಗ್ರಾಮದಲ್ಲಿ ಜನಿಸಿದರು. ವಿವಿಧ ಮತಗಳ ಆಶಯಗಳನ್ನು ಸಮನ್ವಯಗೊಳಿಸಲು ಗುರುನಾನಕ್ ಶ್ರಮಿಸಿದರು. ತನ್ನ ಆಶಯಗಳನ್ನು ಪ್ರಚಾರ ಮಾಡಲು ಅವರು ಭಾರತದ ಹೊರಗೂ ಸಂಚರಿಸಿದರು.




ಚಿತ್ರ 2.7
ಅಮೃತಸರದ ಬಾಬಾಅಡಲ್ ಗುರುದ್ವಾರದ ಗುರುನಾನಕರ ಬಿತ್ತಿಚಿತ್ರ

ಮತಗಳ ಅರ್ಥಶೂನ್ಯವಾದ ಅನುಷ್ಠಾನಗಳನ್ನು ಗುರುನಾನಕ್ ವಿರೋಧಿಸಿದರು. ಏಕದೇವೋಪಾಸನೆ ಎಂಬ ಸಂದೇಶವನ್ನು ಜನರಿಗೆ ತಲುಪಿಸಲು ಅವರು ಪ್ರಯತ್ನಿಸಿದರು. ಸಮಾನತೆ, ಸಹೋದರತೆ, ಸ್ನೇಹ, ಒಳಿತು, ಮತ ಸಹಿಷ್ಣುತೆ ಎಂಬಿತ್ಯಾದಿ ಆಶಯಗಳನ್ನು ಪ್ರೋತ್ಸಾಹಿಸಿದರು. ಜಾತಿ-ಭೇದ, ವಿಗ್ರಹಾರಾಧನೆ, ತೀರ್ಥಯಾತ್ರೆ ಮೊದಲಾದವುಗಳನ್ನು ನಿರಾಕರಿಸಿದರು. ಆರ್ಥಿಕ ಅಸಮಾನತೆಯನ್ನುಪ್ರಶ್ನಿಸಿದರು. ಮಾದಕದ್ರವ್ಯ ವಿಮುಕ್ತಿಗೆ ಜನರನ್ನು ಪ್ರೇರೇಪಿಸಿದರು. ಎಲ್ಲಾ ವಿಭಾಗದ ಜನರಿಗೂ ಒಟ್ಟಿಗೆ ಕುಳಿತು ಆಹಾರ ಸೇವಿಸಲು ಸಾಧ್ಯವಾಗುವ 'ಲಂಗಾರ್' ಅಥವಾ ಸಾರ್ವಜನಿಕ ಅಡುಗೆ ಕೋಣೆಯ ಮಹತ್ವವನ್ನು ತಿಳಿಯಪಡಿಸಿದರು. ಅವರ ಆಶಯಗಳು ಮುಂದಿನ ದಿನಗಳಲ್ಲಿ ಸಿಖ್ ಮತದ ರೂಪೀಕರಣಕ್ಕೆ ದಾರಿ ಮಾಡಿತು.

**ಮತ ಸಹಿಷ್ಣುತೆ, ಸಾರ್ವಜನಿಕರೊಂದಿಗೆ ಸಹೋದರತೆ ಎಂಬೀ ಆಶಯಗಳನ್ನು ಪ್ರಚಾರ ಪಡಿಸಲು ಗುರುನಾನಕ್ ಸ್ವೀಕರಿಸಿದ ಮಾರ್ಗಗಳು ಯಾವುವು ಎಂದು ಟಿಪ್ಪಣಿ ಬರೆಯಿರಿ.**

ಕಬೀರ್ ಮತ್ತು ಗುರುನಾನಕ್ ಅವರ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳು ಮಧ್ಯಕಾಲೀನ ಭಾರತದಲ್ಲಿ ಸಾಂಸ್ಕೃತಿಕ ಸಮನ್ವಯಕ್ಕೆ ದಾರಿ ಮಾಡಿ ಕೊಟ್ಟಿತು.



*ಗುರು ಗ್ರಂಥ ಸಾಹೇಬ ಹಸ್ತಪ್ರತಿ ಪ್ರತಿ, ಸಿ.ಇ. 1704*

*ಸಿಖ್ ಮತದ ಪವಿತ್ರ ಗ್ರಂಥ 'ಆದಿ ಗ್ರಂಥ'ವಾಗಿದೆ (ಗುರು ಗ್ರಂಥ ಸಾಹೇಬ್). ಗುರುನಾನಕ್ ಅವರಿಂದ ಪ್ರಾರಂಭವಾದ ಸಿಖ್ ಗುರುಗಳ ರಚನೆಗಳು 'ಆದಿ ಗ್ರಂಥ'ದ ವಿಷಯ ವಸ್ತುವಾಗಿದೆ.*
*ಏಕದೇವೋಪಾಸನೆಯ ಮಹತ್ವ*
*ಜಾತಿ - ಲಿಂಗ - ವಂಶ ತಾರತಮ್ಯಗಳಿಗೆ ವಿರುದ್ಧವಾದ ಚಿಂತನೆಗಳು ಇದರಲ್ಲಿ ಒಳಗೊಂಡಿದೆ.*
*ಜೈನ ಧರ್ಮ, ಬೌದ್ಧ ಧರ್ಮ, ಇಸ್ಲಾಂ ಧರ್ಮ ಮೊದಲಾದ ಮತಗಳ ಆಶಯಗಳು 'ಆದಿ ಗ್ರಂಥ'ದಲ್ಲಿ ಒಳಗೊಂಡಿದೆ.*

## ಭಕ್ತಿ ಚಳುವಳಿಯಲ್ಲಿ ಸ್ತ್ರೀ ಸಾನಿಧ್ಯ (ಉಪಸ್ಥಿತಿ)

ಮಧ್ಯಕಾಲಘಟ್ಟದ ಸಮಾಜದಲ್ಲಿ ಸ್ತ್ರೀಯರಿಗೆ ಸಾಮಾನ್ಯವಾಗಿ ಅಂಗೀಕಾರ ಮತ್ತು ಪರಿಗಣನೆ ಕಡಿಮೆಯಾಗಿತ್ತು. ಆರಾಧನಾ ಸ್ವಾತಂತ್ರ್ಯದಲ್ಲಿಯೂ ಪರಿಸ್ಥಿತಿಗಳು ಭಿನ್ನವಾಗಿರಲಿಲ್ಲ. ಭಕ್ತಿ ಚಳುವಳಿಯ ಆರಂಭದೊಂದಿಗೆ ಇಷ್ಟ ದೇವರನ್ನು ಆರಾಧಿಸುವುದಕ್ಕಾಗಿ ಧಾರಾಳ ಸ್ತ್ರೀಯರು ಕೀರ್ತನೆಗಳನ್ನು ಮತ್ತು ಹಾಡುಗಳನ್ನು ರಚಿಸಲು ಹಾಗೂ ಹಾಡಲು ತಯಾರಾದರು.



*ಚಿತ್ರ 2.8*
*ಮೀರಾಬಾಯಿ - ಹಿಮಾಚಲ ಪ್ರದೇಶದ ಕಾನ್‌ಗಾ ವರ್ಣಚಿತ್ರ*

ಮೀರಾಬಾಯಿಯು ರಾಜಸ್ಥಾನದ ಚಿತ್ತೂರಿನಲ್ಲಿ ಜನಿಸಿ ಜೀವಿಸಿದ್ದ ರಜಪೂತ ರಾಜಕುಮಾರಿಯಾಗಿದ್ದರು. ಅವರು ಜೀವನದ ಸುಖ ಸೌಕರ್ಯಗಳನ್ನೆಲ್ಲ ತ್ಯಜಿಸಿ ಕೃಷ್ಣ ಭಕ್ತಿಯಲ್ಲಿ ಮುಳುಗಿದರು. ಮೀರಾಬಾಯಿ ರಚಿಸಿದ ಕೃಷ್ಣ ಭಜನೆಗಳು ತುಂಬಾ ಪ್ರಸಿದ್ಧವಾಗಿವೆ.

ಕಾರೈಕ್ಕಲ್ ಅಮ್ಮಯಾರ್ ಮತ್ತು ಆಂಡಾಳ್ ಎಂಬವರು ತಮಿಳುನಾಡಿನಲ್ಲಿ ಪ್ರಸಿದ್ಧ ಭಕ್ತಿ ಕವಯತ್ರಿಯರಾಗಿದ್ದರು. ಇವರು ತಮ್ಮ ಇಷ್ಟದೇವರೊಂದಿಗಿನ ಅಪಾರವಾದ ಭಕ್ತಿಯನ್ನು ಸೂಚಿಸುವ ಕೀರ್ತನೆಗಳನ್ನು ರಚಿಸಿದ್ದರು.

ಅಕ್ಕಮಹಾದೇವಿಯು ವೀರಶೈವ ಚಳುವಳಿಯ ಪ್ರಮುಖರಾಗಿದ್ದರು. ಮಹಿಳೆಯರು ಎದುರಿಸುವ ಸಾಮಾಜಿಕ, ಆಧ್ಯಾತ್ಮಿಕವಾದ ಶೋಷಣೆಗೆ ಎದುರಾಗಿ ನಡೆದ ಚರ್ಚೆಗಳಿಗೆ ಅವರು ನೇತೃತ್ವ ನೀಡಿದರು.

ಮಹಾರಾಷ್ಟ್ರದ ಬಹಿನಾ ಬಾಯಿ, ಸೋಯಿರಾ ಬಾಯಿ, ಕಾಶ್ಮೀರದ ಲಾಲ್ ದೇದ್ ಮೊದಲಾದವರು ಭಕ್ತಿ ಚಳುವಳಿಯ ಬೆಳವಣಿಗೆಗೆ ಕೊಡುಗೆ ನೀಡಿದವರಾಗಿದ್ದಾರೆ.

**ಭಕ್ತಿ ಚಳುವಳಿಯ ಬೆಳವಣಿಗೆಯಲ್ಲಿ ಮೀರಾಬಾಯಿ, ಅಕ್ಕಮಹಾದೇವಿ ಮೊದಲಾದವರ ಪಾತ್ರ ಎಷ್ಟರಮಟ್ಟಿಗೆ ಸಹಕಾರಿಯಾಗಿದೆ ಎಂದು ಚರ್ಚಿಸಿರಿ.**

## ಭಕ್ತಿ ಚಳುವಳಿಯ ಪರಿಣಾಮಗಳು

ಸಂಗೀತ ಮತ್ತು ಭಕ್ತಿಯ ಮೂಲಕ ಇಷ್ಟ ದೇವರಿಗೆ ತನ್ನನ್ನು ಸ್ವಯಂ ಅರ್ಪಿಸಿಕೊಳ್ಳು ಎಂಬ ಉದ್ದೇಶದಿಂದ ಭಕ್ತಿ ಚಳುವಳಿ ರೂಪುಗೊಂಡಿದೆ. ಆದರೆ ಮುಂದೆ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಗತಿಪರವಾದ ಬದಲಾವಣೆಗಳನ್ನು ತರಲು ಭಕ್ತಿ ಚಳುವಳಿಗೆ ಸಾಧ್ಯವಾಯಿತು.

ಭಕ್ತಿ ಚಳುವಳಿಯ ಹೆಚ್ಚಿನ ಭಕ್ತಿ ಕವಿಗಳು 'ಕೆಳಗಿನ ಜಾತಿಯವರು' ಎಂದು ಹೇಳುವ ಕಡೆಗಣಿಸಲ್ಪಟ್ಟವರಿಂದ ಬಂದವರಾಗಿದ್ದರು. ಇವರು ಜಾತಿ ವ್ಯವಸ್ಥೆಯನ್ನೂ, ಬ್ರಾಹ್ಮಣರಿಗೆ ಲಭಿಸಿದ್ದ ಪ್ರತ್ಯೇಕ ಸ್ಥಾನಮಾನಗಳನ್ನು ಪ್ರಶ್ನಿಸಿದರು. ಅದರ ಪರಿಣಾಮವಾಗಿ ಸಾಮಾಜಿಕ ಸಮಾನತೆ ಎಂಬ ಆಶಯವು ರೂಪುಗೊಳ್ಳಲು ಸಾಧ್ಯವಾಯಿತು. ಅನುಭವ ಮಂಟಪದ ಚರ್ಚೆಗಳಲ್ಲಿ ಸ್ತ್ರೀಯರಿಗೆ ಭಾಗವಹಿಸಲು ಅವಕಾಶ ಲಭಿಸಿತ್ತು.

ST-503-5-SOC. SCI. (K)-7-VOL-1

ಅವರ ಅಭಿಪ್ರಾಯಗಳು ಮನ್ನಣೆಯನ್ನು ಗಳಿಸಿದವು. ಸ್ತ್ರೀ ಪುರುಷರ ನಡುವಿನ ಸಮಾನತೆಯ ಕಲ್ಪನೆಯ ಬಗ್ಗೆ ಯೋಚಿಸುವಂತೆ ಮಾಡಿತ್ತು. ದುಡಿಮೆಯ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಸಾಧ್ಯವಾದುದು ಭಕ್ತಿ ಚಳುವಳಿಯ ಪ್ರತ್ಯೇಕತೆಯಾಗಿದೆ.

## ಸೂಫಿ ಚಳುವಳಿ



ದೆಹಲಿಯ ಸುಲ್ತಾನನಾಗಿದ್ದ ಜಲಾಲುದ್ದೀನ್ ಖಿಲ್ಜಿಯು ಶೇಕ್ ನಿಜಾಮುದ್ದೀನ್ ಔಲಿಯ ಅವರನ್ನು ಭೇಟಿಯಾಗುವ ಬಯಕೆಯನ್ನು ಅಮೀರ್ ಖುಸ್ರುವಿನಲ್ಲಿ ವ್ಯಕ್ತಪಡಿಸಿದರು. ಆದರೆ ಔಲಿಯ ಈ ಭೇಟಿಯ ಬಗ್ಗೆ ತಿಳಿಯಬಾರದು. ತಿಳಿದರೆ, ಒಪ್ಪಿಗೆ ನೀಡಲಿಕ್ಕಿಲ್ಲ ಎಂದು ಸುಲ್ತಾನರಿಗೆ ಗೊತ್ತು. ಆದರೆ ಖುಸ್ರು ಈ ವಿಷಯವನ್ನು ಔಲಿಯಾಗೆ ಹೇಳಿದನು. ರಾಜರು-ಗಳನ್ನು ಭೇಟಿಯಾಗಲು ಇಷ್ಟಪಡದ ಔಲಿಯ ಭೇಟಿಯ ದಿನದಂದು ದೂರ ಯಾತ್ರೆ ಕೈಗೊಂಡರು. ಖಾನ್ ಗಾಹಿಗೆ ತಲುಪಿದ ರಾಜ ಶೇಖ್‌ನನ್ನು ಕಾಣಲಾಗದೆ ಖುಸ್ರುವಿನೊಂದಿಗೆ ಕೋಪಗೊಂಡನು. “ನೀವು ಸುಲ್ತಾನನ್ನು ವಂಚಿಸಿರುವಿರಲ್ಲವೇ?” ಖುಸ್ರು ಉತ್ತರಿಸಿದರು “ರಾಜನನ್ನು ವಂಚಿಸಿದರೆ ನನ್ನ ಈ ಲೋಕದ ಜೀವನ ಮಾತ್ರವೇ ಕೊನೆಗೊಳ್ಳುವುದು ಆದರೆ ನಾನು ಗುರುಗಳಿಗೆ ಮೋಸ ಮಾಡಿದರೆ ನಾನು ಮರಣಾನಂತರದ ಜೀವನವನ್ನೂ ಕಳೆದುಕೊಳ್ಳುತ್ತೇನೆ”.

ಸಾವಿಗೆ ಹೆದರದ ಖುಸ್ರು ತನ್ನ ಸೂಫಿ ಗುರುವಾದ ನಿಜಾಮುದ್ದೀನ್ ಔಲಿಯವರ ಅಸಮಾಧಾನಕ್ಕೆ ಹೆದರುತ್ತಿದ್ದರು ಎಂಬುದಲ್ಲವೇ ಈ ಘಟನೆ **ಹೇಳುವುದು**? ಇತರ ಯಾವ ವಿಷಯಗಳನ್ನು ತಿಳಿಯುವಿರಿ?

- 
- 

ದೇವರ ಸಮೀಪಕ್ಕೆ ತಮ್ಮನ್ನು ಕೊಂಡೊಯ್ಯಲು ಇರುವ ಮಾರ್ಗವಾಗಿ ಭಕ್ತಿಯನ್ನು ಸ್ವೀಕರಿಸಿದವರಾಗಿದ್ದರು ಸೂಫಿಗಳು. ಅದಕ್ಕಿರುವ ಒಂದು ದಾರಿ ಭಕ್ತಿಗಾನ ಆಲಾಪನೆ ಎಂಬುದನ್ನು ಸೂಫಿಗಳು ಭಾವಿಸಿದ್ದರು. ಜನಸಾಮಾನ್ಯರೆಡೆಯಲ್ಲಿ ಸಂಚರಿಸಿ ಅವರು ಸೂಫಿ ತತ್ವಗಳನ್ನು ಪ್ರಚಾರಪಡಿಸಿದರು. ಏಕದೇವ ವಿಶ್ವಾಸ, ಸಹೋದರತೆ, ಮನುಷ್ಯ ಸ್ನೇಹ, ದೇವರಲ್ಲಿರುವ ಸಮರ್ಪಣಾ ಭಾವ ಎಂಬಿತ್ಯಾದಿ ಆಶಯಗಳಿಗೆ ಪ್ರಾಧಾನ್ಯತೆ ನೀಡಿದರು.



### ಸೂಫಿಸಂ

‘ಸೂಫಿಸಂ’ ಎಂಬ ಪದವು ಕಂಬಳಿ ಎಂಬ ಅರ್ಥ ಬರುವ ‘ಸುಫ್’ (Suf) ಎಂಬ ಪದದಿಂದ ಅಥವಾ ಶುದ್ಧಿ ಎಂಬ ಅರ್ಥ ಬರುವ ‘ಸಫಿ’ (Safi) ಎಂಬ ಪದದಿಂದ ಬಂದಿರಬಹುದಾಗಿದೆ ಎಂದು ಪಂಡಿತರು ಅಭಿಪ್ರಾಯಪಡುತ್ತಾರೆ.

Sufis of Sindh: Motilal Jotwani. p.1

ಸೂಫಿಸಂ ಎನ್ನುವುದು ಮಧ್ಯ ಏಷ್ಯಾ ಪ್ರದೇಶಗಳಲ್ಲಿ ರೂಪೀಕೃತವಾದ ಇಸ್ಲಾಮಿಕ ಭಕ್ತಿ ಚಳುವಳಿಯಾಗಿದೆ. ಈ ಪ್ರದೇಶದ ಆಡಳಿತಾಧಿಕಾರಿಗಳು ಸಂಪತ್ತು, ಅಧಿಕಾರ, ಆಡಂಬರ ಜೀವನ ಮೊದಲಾದ ಲೌಕಿಕವಾದ

ವಿಷಯಗಳಲ್ಲಿ ಹೆಚ್ಚು ಗಮನಹರಿಸಲು ಆರಂಭಿಸಿದರು. ಈ ರೀತಿಯ ಬೆಳವಣಿಗೆಗೆದುರಾಗಿ ಸೂಫಿ ಚಳುವಳಿ ಹುಟ್ಟಿಕೊಂಡಿತು. 12ನೇ ಶತಮಾನದಲ್ಲಿ ಸೂಫಿ ಚಳುವಳಿ ಭಾರತವನ್ನು ತಲುಪಿತು. ಸಿಲ್ಸ್ಲಾಗಳು ಎಂದು ಕರೆಯಲ್ಪಡುವ 12 ಸೂಫಿ ವಿಭಾಗಗಳಲ್ಲಿ ಚಿಸ್ತಿ, ಸುಹ್ರವರ್ದಿ ಎಂಬ ಸಿಲ್ಸ್ಲಾಗಳು ಭಾರತಕ್ಕೆ ಬಂದು ತಲುಪಿತು.



*ಚಿತ್ರ 2.9*
*ನಿಜಾಮುದ್ದೀನ್ ಔಲಿಯರವರ ದರ್ಗಾದ ಮುಂದೆ ನಡೆಯುತ್ತಿರುವ ಖವ್ವಾಲಿ*

ಸೂಫಿ ಗುರುವರ್ಯರು ಆಧ್ಯಾತ್ಮಿಕ ಜೀವನಕ್ಕೆ ಪ್ರಾಧಾನ್ಯತೆಯನ್ನು ನೀಡಿ ಆಡಂಬರ ಜೀವನದಿಂದ ದೂರ ಸರಿದವರಾಗಿದ್ದಾರೆ. ಸೂಫಿ ಗುರುವನ್ನು ಪೀರ್ (ಶೇಖ್) ಎಂದೂ ಅನುಯಾಯಿಗಳನ್ನು ಮೂರಿದ್ ಎಂದು ಕರೆಯುತ್ತಿದ್ದರು.

ಸೂಫಿಗಳ ವಾಸ ಸ್ಥಳವಾಗಿದ್ದ ಕಾನ್ ಗಾಹುಗಳು ಆ ಕಾಲದ ಸಾಮಾಜಿಕ ಕೇಂದ್ರಗಳು ಆಗಿದ್ದವು. ಖವ್ವಾಲಿ(Qawwali)ಗಳು ಸೂಫಿ ಕೇಂದ್ರಗಳಲ್ಲಿ 'ಸಮ' ಎಂಬ ಪ್ರತ್ಯೇಕ ಗಾನಾಲಾಪನ ಶೈಲಿಯಲ್ಲಿ ಹಾಡುವ ಭಕ್ತಿಗೀತೆಗಳಾಗಿವೆ. ಸುಲ್ತಾನತ್, ಮೊಘಲ್ ಕಾಲಘಟ್ಟದಲ್ಲಿ ವಿವಿಧ ಮತ ಧರ್ಮಗಳಲ್ಲಿ ಐಕ್ಯತೆಯನ್ನು ಉಂಟು ಮಾಡಲು ಸೂಫಿಗಳಿಗೆ ಸಾಧ್ಯವಾಯಿತು.

ಭಾರತದ ಪ್ರಧಾನ ಸೂಫಿವರ್ಯರು ಹಾಗೂ ಅವರಿಗೆ ಸಂಬಂಧಪಟ್ಟ ಪ್ರದೇಶಗಳು ಕೆಳಗೆ ನೀಡಲಾಗಿದೆ.

| ಸೂಫಿವರ್ಯರು | ಪ್ರದೇಶಗಳು |
|---|---|
| ಶೇಕ್ ಶಿಹಾಬುದ್ದಿನ್ ಸುಹ್ರವರ್ದಿ | ಸಿಲ್ ಹಟ್ |
| ಶೇಕ್ ನಿಜಾಮುದ್ದೀನ್ ಔಲಿಯ | ದೆಹಲಿ |
| ಕ್ವಾಜಾ ಮುಯಿನುದ್ದೀನ್ ಚಿಸ್ತಿ | ಅಜ್ಮೀರ್ |



**ಸೂಫಿ ಚಳುವಳಿಗಳಿಗೆ ಸಂಬಂಧಪಟ್ಟು ಒಂದು ಫ್ಲಿಪ್ ಪುಸ್ತಕ ತಯಾರಿಸಲು ಅಗತ್ಯವಿರುವ ಮಾಹಿತಿಗಳನ್ನು ಫ್ಲಿಪ್ ಪೇಜ್ ಮಾದರಿಯಲ್ಲಿ ತಯಾರಿಸಿರಿ.**

| | |
|---|---|
| ಶೇಕ್ ನಿಜಾಮುದ್ದೀನ್ ಔಲಿಯ | ದೆಹಲಿ |
| ಖ್ವಾಜಾ ಮುಯಿನುದ್ದೀನ್ ಚಿಸ್ತಿ | ಅಜ್ಮೀರ್ |



**ಸೂಫಿ ಚಳುವಳಿಗಳಿಗೆ ಸಂಬಂಧಪಟ್ಟು ಒಂದು ಫ್ಲಿಪ್ ಪುಸ್ತಕ ತಯಾರಿಸಲು ಅಗತ್ಯವಿರುವ ಮಾಹಿತಿಗಳನ್ನು ಫ್ಲಿಪ್ ಪೇಜ್ ಮಾದರಿಯಲ್ಲಿ ತಯಾರಿಸಿರಿ.**

ಸೂಫಿಗಳು ದೇವರಿಗೆ ಹತ್ತಿರವಾಗಲು ಭಕ್ತಿಯನ್ನು ಮೋಕ್ಷದ ಮಾರ್ಗವಾಗಿ ಸ್ವೀಕರಿಸಿದವರು.

ದೇವರಿಗೆ ಹತ್ತಿರವಾಗಲಿರುವ ಮಾರ್ಗ ಭಕ್ತಿಗಾನಾಲಾಪನೆಯೆಂದು ಸೂಫಿವರ್ಯರು ನಂಬಿದ್ದರು.

## ಪ್ರಾದೇಶಿಕ ಭಾಷೆಗಳ ಬೆಳವಣಿಗೆ

ಭಕ್ತಿ - ಸೂಫಿ ಪ್ರಚಾರಕರು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸ್ಥಳೀಯ ಭಾಷೆಗಳಲ್ಲಿ ಆಶಯ ಪ್ರಚಾರವನ್ನು ನಡೆಸಿದರು. ಇದು ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಕಾರಣವಾಯಿತು. ತಮಿಳು, ಪಂಜಾಬಿ, ಬಂಗಾಳಿ, ಮರಾಠಿ, ತೆಲುಗು, ಕನ್ನಡ, ಮಲಯಾಳಂ ಮುಂತಾದ ಭಾಷೆಗಳಲ್ಲಿ ಅನೇಕ ಭಕ್ತಿ ಗೀತೆಗಳನ್ನು ರಚಿಸಲಾಗಿದೆ. ಅಲ್ಲದೆ ಸ್ಥಳೀಯ ಭಾಷೆಗಳಲ್ಲಿ ಅನೇಕ ಸಾಹಿತ್ಯ ಕೃತಿಗಳು ರಚಿಸಲ್ಪಟ್ಟವು. ಉರ್ದು ಭಾಷೆಯು ಪರ್ಶಿಯನ್ ಮತ್ತು ಹಿಂದಿ ಭಾಷೆಯ ಸಂಯೋಜನೆಯಾಗಿದೆ. ಇದು ಭಾರತದ ಸಾಂಸ್ಕೃತಿಕ ಸಾಮರಸ್ಯಕ್ಕೆ ಉದಾಹರಣೆಯಾಗಿದೆ. ಅಮೀರ್ ಖುಸ್ರು ಈ ಕಾಲದ ಉರ್ದು ಭಾಷೆಯ ಅತ್ಯಂತ ಪ್ರಮುಖ ಬರಹಗಾರರಾಗಿದ್ದರು. ಕಬೀರನ ದೋಹಗಳು ಹಿಂದಿ ಭಾಷೆಯನ್ನು ಶ್ರೀಮಂತಗೊಳಿಸಿದವು. 'ಮಹಾಭಾರತ', 'ರಾಮಾಯಣ' ಮತ್ತು ಇತರ ಕೃತಿಗಳನ್ನು ವಿವಿಧ ಭಾಷೆಗಳಿಗೆ ಅನುವಾದಿಸಲಾಗಿದೆ. ಇದು ಭಾಷೆ ಮತ್ತು ಸಾಹಿತ್ಯದ ಉನ್ನತಿಗೆ ಕಾರಣವಾಯಿತು.

### ಪ್ರಾದೇಶಿಕ ಭಾಷೆಗಳಲ್ಲಿ ಉಂಟಾದ ಪ್ರಧಾನ ಸಾಹಿತ್ಯ ಕೃತಿಗಳು ಮತ್ತು ಲೇಖಕರು


| ಸ್ಥಳೀಯ ಭಾಷೆ | ಕೃತಿಗಳು | ರಚನೆಗಾರರು |
|---|---|---|
| ತಮಿಳು | ನಾಲಾಯಿರ ದಿವ್ಯಪ್ರಬಂಧಂ<br>ತಿರುಮುರೈಗಳ್ | ಆಳ್ವಾರರ್ (ವೈಷ್ಣವರು)<br>ನಾಯನಾರರು (ಶೈವರು) |
| ಕನ್ನಡ | ವಚನ ಸಾಹಿತ್ಯ | ಬಸವಣ್ಣ, ಅಕ್ಕಮಹಾದೇವಿ,<br>ಅಲ್ಲಮಪ್ರಭು |
| ತೆಲುಗು | ಮಹಾಭಾರತ ಅನುವಾದ | ನನ್ನಯ್ಯ, ತಿಕ್ಕಣ್ಣ, ಯರಪ್ರಗದ |
| ಬಂಗಾಳಿ | ಗೀತ ಗೋವಿಂದ | ಜಯದೇವನ್ |
| ಹಿಂದಿ | ಪದ್ಮಾವತ್ | ಮಾಲಿಕ್ ಮಹಮ್ಮದ್ ಜೈಸಿ |
| ಮಲಯಾಳಂ | ಜ್ಞಾನ ಪಾನ<br>ಆಧ್ಯಾತ್ಮ ರಾಮಾಯಣ ಕಿಳಿಪ್ಪಾಟ್ಟ್<br>ಮೊಹಿಯುದ್ದೀನ್ ಮಾಲ | ಪೂಂತಾನಂ<br>ತುಂಜತ್ ರಾಮಾನುಜನ್ ಎಯ್ಯುತಚ್ಚನ್<br>ಖಾಸಿ ಮುಹಮ್ಮದ್ |




**ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಭಕ್ತಿ ಚಳುವಳಿಯು ಹೇಗೆ ಸಹಾಯಕ ಮಾಡಿತು? ಟಿಪ್ಪಣಿ ತಯಾರಿಸಿರಿ.**

### ಭಕ್ತಿ - ಸೂಫಿ ಚಳುವಳಿಗಳ ಪ್ರಭಾವ

ಭಕ್ತಿ - ಸೂಫಿ ಚಳುವಳಿಗಳ ಪರಿಣಾಮವಾಗಿ ಸಮಾಜದಲ್ಲಿ ಯಾವ ಯಾವ ಬದಲಾವಣೆಗಳು ಸಂಭವಿಸಿವೆ? ಕೊಟ್ಟಿರುವ ವಿವರಣೆಯನ್ನು ಗಮನಿಸಿರಿ...



ಮಧ್ಯಕಾಲೀನ ಭಾರತೀಯ ಸಮಾಜದಲ್ಲಿ ಸಾಮಾನ್ಯವಾಗಿ ತೀವ್ರವಾದ ಮೇಲು ಕೀಳು ಮತ್ತು ಸಾಮಾಜಿಕ ಅಸಮಾನತೆಗಳು ಇದ್ದವು. ಹಿಂದಿನ ಅಧ್ಯಾಯದಲ್ಲಿ ಅಂದಿನ ಕಾಲದ ರಾಜಕೀಯ ಮತ್ತು ಸಾಮಾಜಿಕ




*ಚಿತ್ರ 2.10*
*ಮಧ್ಯಕಾಲ ಭಾರತದಲ್ಲಿ ಜೀವಿಸಿದ್ದ ಪ್ರಧಾನ ಭಕ್ತಿ-ಸೂಫಿ ಪ್ರಚಾರಕರು*



# 3
# ಸಂವಿಧಾನ : ಮಾರ್ಗವೂ ಮಾರ್ಗದರ್ಶಿಯೂ



*ಚಿತ್ರ 3.1*

"ಭಾರತವನ್ನು ಎಲ್ಲಾ ಬಿಕ್ಕಟ್ಟುಗಳಿಂದಲೂ ಪರರ ಆಶ್ರಯಗಳಿಂದಲೂ ಮುಕ್ತಗೊಳಿಸುವ ಸಂವಿಧಾನಕ್ಕಾಗಿ ನಾನು ಪ್ರಯತ್ನಿಸುತ್ತೇನೆ. ಕಡುಬಡವರಿಗೂ ದೇಶವನ್ನು ರೂಪಿಸುವಲ್ಲಿ ಸಮರ್ಥವಾಗಿ ಧ್ವನಿಗೂಡಿಸಲು ಸಾಧ್ಯವಾಗಬೇಕು ಮತ್ತು ಈ ದೇಶವು ಅವರದೆಂದು ಅವರಿಗೆ ಅನಿಸಬೇಕು. ಮೇಲು ಕೀಳುಗಳೆಂಬ ಭೇದವಿಲ್ಲದೆ ಎಲ್ಲಾ ಸಮುದಾಯದವರು ಅತ್ಯಂತ ಸೌಹಾರ್ದದಿಂದ ಬದುಕುವ ಭಾರತಕ್ಕಾಗಿ ನನ್ನ ಪ್ರಯತ್ನ. ಅಸ್ಪೃಶ್ಯತೆ ಮತ್ತು ಮಾದಕ ವಸ್ತುಗಳೆಂಬ ಶಾಪದಿಂದ ಮುಕ್ತವಾದ ಭಾರತ. ಪುರುಷರು ಅನುಭವಿಸುವ ಹಕ್ಕುಗಳು ಅದೇ ರೀತಿಯಲ್ಲಿ ಸ್ತ್ರೀಯರಿಗೂ ದೊರೆಯುವ ಭಾರತ".

**-ಮಹಾತ್ಮಾಗಾಂಧಿ**

('ಯಂಗ್ ಇಂಡಿಯ' - 1931)

ಮೇಲಿನ ಉಲ್ಲೇಖವನ್ನು ಓದಿದಿರಲ್ಲವೇ?

ನಾವು ಸಂವಿಧಾನದ ಕುರಿತು ಆಲೋಚಿಸಲು ತೊಡಗಿದ್ದು ಸ್ವಾತಂತ್ರ್ಯ ಲಭಿಸಿದ ಬಳಿಕವೇ?

ಗಾಂಧೀಜಿಯವರು ಭವಿಷ್ಯದ ಭಾರತದ ಸಂವಿಧಾನದಲ್ಲಿ ಯಾವೆಲ್ಲಾ ಆಶಯಗಳಿರಬೇಕೆಂದು ಬಯಸಿದರು?

- ಪರಮಾಧಿಕಾರ
- ಸಮಾನತೆ
- ಸಹೋದರತೆ
- ಲಿಂಗನೀತಿ
-
-


## ಸಂವಿಧಾನ : ಸ್ವಾತಂತ್ರ್ಯ ಹೋರಾಟಗಾರರ ಕನಸು

1857ರ ಮೊದಲ ಸ್ವಾತಂತ್ರ್ಯ ಹೋರಾಟವು ಬ್ರಿಟಿಷ್ ಆಧಿಪತ್ಯದ ವಿರುದ್ಧ ಬೆಳೆದು ಬಂದ ಪ್ರಥಮ ಜನಪರ ಹೋರಾಟವಾಗಿತ್ತು. ಸೈನಿಕರು, ಬುಡಕಟ್ಟು ಜನಾಂಗದವರು, ರಾಜರುಗಳು, ಶ್ರೀಮಂತರು, ಕೃಷಿಕರು ಮೊದಲಾದ ವಿವಿಧ ವಿಭಾಗದ ಜನರು ಈ ಹೋರಾಟದಲ್ಲಿ ಭಾಗವಹಿಸಿದರು. ಮತ ಸೌಹಾರ್ದತೆಗೆ ಒತ್ತು ನೀಡುವ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವಲ್ಲಿ ಈ ಹೋರಾಟವು ಸಹಾಯಕವಾಯಿತು. ರಾಷ್ಟ್ರೀಯ ಪ್ರಜ್ಞೆ ಬಲಗೊಳ್ಳುವುದರೊಂದಿಗೆ ವಿದೇಶಿ ಆಧಿಪತ್ಯದ ವಿರುದ್ಧ ಭಾರತದ ವಿವಿಧ ಭಾಗಗಳಲ್ಲಿ ಅನೇಕ ಪ್ರಾದೇಶಿಕ ಸಂಘಟನೆಗಳು ರೂಪುಗೊಂಡವು. ಇಂಡಿಯನ್ ಅಸೋಸಿಯೇಷನ್, ಮದ್ರಾಸ್ ನೇಟಿವ್ ಅಸೋಸಿಯೇಷನ್, ಪುಣೆ ಸಾರ್ವಜನಿಕ ಸಭಾ ಮೊದಲಾದವುಗಳು ಕೆಲವು ಉದಾಹರಣೆಗಳಾಗಿವೆ. 1885ರಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ರೂಪೀಕರಣದ ಮೂಲಕ ರಾಷ್ಟ್ರಮಟ್ಟದ ಒಂದು ಸಂಘಟನೆಯಾಗಿ ಅದು ಬದಲಾಯಿತು. ಇದು ಪ್ರಾದೇಶಿಕ ಸಂಘಟನೆಗಳಿಂದ ಭಿನ್ನವಾಗಿದೆ. ಅದರೊಂದಿಗೆ ರಾಷ್ಟ್ರಮಟ್ಟದಲ್ಲಿ ಬ್ರಿಟಿಷರ ವಿರುದ್ಧದ ಆಂದೋಲನಗಳಿಗೆ ಒಂದು ಸಂಘಟಿತ ರೂಪ ದೊರೆಯಿತು. ಭಾರತದ ವಿವಿಧ ಜನ ವಿಭಾಗಗಳ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರುವುದು, ಜಾತಿ ಮತ ಪ್ರಾದೇಶಿಕ ಚಿಂತನೆಗಳಿಗೆ ಮೀರಿ ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಬೆಳೆಸುವುದು ಮೊದಲಾದವುಗಳು ಈ ಸಂಸ್ಥೆಯ ಪ್ರಧಾನ ಉದ್ದೇಶಗಳಾಗಿದ್ದವು.

ವಿದೇಶಿ ಆಡಳಿತವನ್ನು ಕೊನೆಗೊಳಿಸುವುದು ಮಾತ್ರವಲ್ಲದೆ ಉತ್ತಮವಾದ ಸಾಮಾಜಿಕ, ರಾಜಕೀಯ ಜೀವನವು ಪ್ರತಿಯೊಬ್ಬ ಭಾರತೀಯನಿಗೂ ಲಭ್ಯವಾಗಿದೆ ಎಂದು ಖಚಿತಗೊಳಿಸುವುದು ಸ್ವಾತಂತ್ರ್ಯ ಚಳುವಳಿಯ ಪ್ರಧಾನ ಉದ್ದೇಶಗಳಲ್ಲಿ ಒಂದಾಗಿತ್ತು. ಹೋರಾಟದ ಪ್ರತಿಯೊಂದು ಹಂತದಲ್ಲೂ ಮಂದಗಾಮಿ-ತೀವ್ರಗಾಮಿ ರಾಷ್ಟ್ರೀಯತೆ ಸೇರಿದಂತೆ ನಾಯಕರಿಗೆ ವಿಭಿನ್ನ ದೃಷ್ಟಿಕೋನಗಳಿದ್ದರೂ ಕೆಲವು ಮೂಲಭೂತವಾದ ಆಶಯಗಳು ಹಾಗೂ ಮೌಲ್ಯಗಳನ್ನು ಎತ್ತಿ ಹಿಡಿಯುವ ಮೂಲಕ ಸ್ವಾತಂತ್ರ್ಯ ಚಳುವಳಿಯು ಮುಂದುವರಿಯಿತು.

ಗಾಂಧೀಜಿಯವರ ಆಗಮನದೊಂದಿಗೆ ಸ್ವಾತಂತ್ರ್ಯ ಹೋರಾಟವು ಜನಪರ ಚಳುವಳಿಯಾಗಿ ಬದಲಾಯಿತು. ಗಾಂಧೀಜಿಯವರ ಪ್ರಭಾವವು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಪ್ರಜಾಪ್ರಭುತ್ವ ಎಂಬ ಬೇಡಿಕೆಯನ್ನು ಪ್ರಬಲಗೊಳಿಸಿತು. ರಾಷ್ಟ್ರೀಯ ಚಳುವಳಿಯು ಮುಂದಿಟ್ಟ ಸ್ವಾತಂತ್ರ್ಯ, ಸಾಮಾಜಿಕ ನೀತಿಯಲ್ಲಿ ಆಧಾರಿತವಾದ ಸಮತ್ವ, ಸಹೋದರತೆ, ಮತಸೌಹಾರ್ದ ಎಂಬೀ ಆಶಯಗಳು ಹಾಗೂ ಮೌಲ್ಯಗಳು ನಮ್ಮ ಸಂವಿಧಾನದ ಅಡಿಪಾಯವಾಗಬೇಕು ಎಂದು ನಾಯಕರು ಬಯಸಿದರು. ಇದು ನಮ್ಮ ಸಂವಿಧಾನ ರಚನೆಯ ಮೇಲೆ ಪ್ರಭಾವ ಬೀರಿದ ಪ್ರಧಾನ ದೃಷ್ಟಿಕೋನವಾಗಿದೆ.

ಕೆಳಗೆ ನೀಡಿರುವ ಚಿತ್ರವನ್ನು ಅವಲೋಕಿಸಿ ನಿಮ್ಮ ನಿಗಮನಗಳನ್ನು ಬರೆಯಿರಿ.





*ಚಿತ್ರ 3.2*

- ವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯ ನೀಡಬೇಕು.
- ಪೌರ ಹಕ್ಕುಗಳನ್ನು ಖಾತರಿಪಡಿಸಬೇಕು.
- ಎಲ್ಲಾ ಮತಗಳಿಗೂ ಸಮಾನವಾದ ಪ್ರಾಧಾನ್ಯವನ್ನು ನೀಡಬೇಕು.
- ಸಾಮಾಜಿಕ ನ್ಯಾಯವನ್ನು ಖಚಿತಪಡಿಸಬೇಕು.
- ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸಬೇಕು.
- 
- 

ಭಾರತದ ಸಂವಿಧಾನ ರಚನೆಗೆ ನಮ್ಮ ಸ್ವಾತಂತ್ರ್ಯ ಹೋರಾಟವೇ ಅಡಿಪಾಯವಾಗಿದೆ. ಹೇಗೆ? ವಿಶದೀಕರಿಸಿರಿ.

## ಸಂವಿಧಾನದ ಪೂರ್ವಜರು





*ಚಿತ್ರ 3.3*

ನಿಮಗೂ ಈ ರೀತಿಯ ಸಂಶಯ ಇಲ್ಲವೇ?

1935 ರಲ್ಲಿ ಬ್ರಿಟಿಷರು ಅಂಗೀಕರಿಸಿದ ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟ್ ಎಂಬ ನಿಯಮ ಸಂಹಿತೆಯು ನಮ್ಮ ದೇಶವು ಗಣರಾಜ್ಯವಾಗಿ ಬದಲಾಗುವವರೆಗೆ ಮುಂದುವರಿಯಿತು. 1950 ಜನವರಿ 26ರಂದು ನಮ್ಮ ಸಂವಿಧಾನವು ಜಾರಿಗೆ ಬಂತು. ನಮ್ಮ ಸಂವಿಧಾನದ ಹಲವು ಆಶಯಗಳು ಹಾಗೂ ವ್ಯವಸ್ಥೆಗಳನ್ನು ಈ ನಿಯಮದಿಂದ ಆಯ್ದುಕೊಳ್ಳಲಾಗಿದೆ.


ಕೆಳಗೆ ನೀಡಿರುವ ಚಿತ್ರವನ್ನು ನಿರೀಕ್ಷಿಸಿ ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟಿನ (1935) ವಿಶೇಷತೆಗಳನ್ನು ಕಂಡುಕೊಳ್ಳಿರಿ.




## ಸಂವಿಧಾನ : ನಿರ್ಮಾಣದೆಡೆಗೆ

ಸ್ವತಂತ್ರ ಭಾರತಕ್ಕೆ ಒಂದು ನಿಯಮ ಸಂಹಿತೆಯನ್ನು ರೂಪಿಸುವುದು 1946ರಲ್ಲಿ ಅಧಿಕಾರ ಹಸ್ತಾಂತರದ ವಿಷಯವನ್ನು ಚರ್ಚಿಸಲು ಭಾರತಕ್ಕೆ ಭೇಟಿ ನೀಡಿದ ಕ್ಯಾಬಿನೆಟ್ ಮಿಶನಿನ ನಿರ್ದೇಶಗಳಲ್ಲಿ ಒಂದಾಗಿತ್ತು. ಈ ಉದ್ದೇಶವನ್ನಿಟ್ಟುಕೊಂಡು ಸಂವಿಧಾನ ರಚನಾ ಸಭೆಯನ್ನು ರಚಿಸಲಾಯಿತು.

## ಸಂವಿಧಾನ ರಚನಾ ಸಭೆ : ವಿಶೇಷತೆಗಳು






*ಚಿತ್ರ 3.4*

**ಡಾ | ಬಿ.ಆರ್. ಅಂಬೇಡ್ಕರ್**

### ಲೋಪ ದೋಷಗಳಿಲ್ಲದ ಸಂವಿಧಾನಕ್ಕಾಗಿ...

ಜಗತ್ತಿನಲ್ಲಿ ಅತ್ಯುತ್ತಮವಾದ ಸಂವಿಧಾನವು ನಮ್ಮದಾಗಬೇಕೆಂಬ ಬಯಕೆಯು ಅದನ್ನು ಬರೆದು ತಯಾರಿಸಲು ನೇಮಿಸಲ್ಪಟ್ಟ ಸಂವಿಧಾನ ರಚನಾ ಸಭೆಗಿತ್ತು. ನಮ್ಮ ಸಂವಿಧಾನದ ಮುಖ್ಯ ಶಿಲ್ಪಿಯಾದ ಡಾ | ಬಿ.ಆರ್ ಅಂಬೇಡ್ಕರ್ ಅವರು ಅರುವತ್ತರಷ್ಟು ರಾಷ್ಟ್ರಗಳ ಸಂವಿಧಾನಗಳನ್ನು ಸಮಗ್ರವಾದ ಅಧ್ಯಯನಕ್ಕೆ ಒಳಪಡಿಸಿದರು. ಇತರ ರಾಷ್ಟ್ರಗಳಲ್ಲಿ ರೂಪಿತವಾದ ಸಂವಿಧಾನದ ಉತ್ತಮ ಅಂಶಗಳನ್ನು ನಮ್ಮ ಸಂವಿಧಾನಕ್ಕೆ ಸೇರಿಸುವುದು ಅವರ ಉದ್ದೇಶವಾಗಿತ್ತು. ಭಾರತದ ವೈವಿಧ್ಯತೆ, ಚಾರಿತ್ರಿಕ ಪರಂಪರೆ, ಸಂಸ್ಕೃತಿ ಮೊದಲಾದ ವಿಷಯಗಳನ್ನು ಪರಿಗಣಿಸಿ ವಿದೇಶಿ ಸಂವಿಧಾನದಲ್ಲಿರುವ ಆಶಯಗಳನ್ನು ಕೂಡ ಸ್ವೀಕರಿಸಲಾಯಿತು.

## ವಿಶೇಷತೆಗಳು ಹಲವು...

ಭಾರತದ ಸಂವಿಧಾನವು ಜಗತ್ತಿನಲ್ಲೇ ಅತ್ಯಂತ ದೊಡ್ಡ ಲಿಖಿತ ಸಂವಿಧಾನವಾಗಿದೆ.1950 ಜನವರಿ 26ರಂದು ಜಾರಿಗೆ ಬಂದ ಸಂವಿಧಾನದಲ್ಲಿ 22 ಭಾಗಗಳು 395 ವಿಧಿಗಳು (ಆರ್ಟಿಕಲ್) ಹಾಗೂ 8 ಅನುಸೂಚಿಗಳು (ಶೆಡ್ಯುಲ್) ಇದ್ದವು.

ನಮ್ಮ ಸಂವಿಧಾನದ ವಿಶೇಷತೆಗಳು ಯಾವುವು?

**ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಆಡಳಿತ**

ದೇಶದ ಆಡಳಿತಾಧಿಕಾರಿಗಳನ್ನು ಶಾಸನ ಸಭೆಗಳು ನಿಯಂತ್ರಿಸುತ್ತವೆ.

**ಪರಮಾಧಿಕಾರ ಜನರಿಗೆ**

ರಾಷ್ಟ್ರದ ಎಲ್ಲಾ ಅಧಿಕಾರಗಳು ಜನರಿಂದಾಗಿ ರೂಪಿಸಲ್ಪಟ್ಟವುಗಳಾಗಿವೆ.

**ಮೂಲಭೂತ ಹಕ್ಕುಗಳು**

ಪ್ರತಿಯೊಬ್ಬ ವ್ಯಕ್ತಿಗೂ ರಾಷ್ಟ್ರವು ಖಚಿತಪಡಿಸಬೇಕಾದ ಕೆಲವು ಮೂಲಭೂತ ಹಕ್ಕುಗಳು.

**ಮೂಲಭೂತ ಕರ್ತವ್ಯಗಳು**

ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರ ಹಾಗೂ ಸಮಾಜಕ್ಕೆ ಪಾಲಿಸಬೇಕಾದ ಕೆಲವು ಕರ್ತವ್ಯಗಳಿವೆ.

**ನಿರ್ದೇಶಕ ತತ್ವಗಳು**

ಸಾಮಾಜಿಕ, ಆರ್ಥಿಕ ಹಕ್ಕುಗಳನ್ನು ಖಚಿತಪಡಿಸಲು ರಾಷ್ಟ್ರಕ್ಕೆ ನೀಡಿರುವ ನಿರ್ದೇಶನಗಳು.

**ಕಾನೂನಿನ ಆಡಳಿತ**

ಎಲ್ಲಾ ಪೌರರು ಕಾನೂನಿಗೆ ವಿಧೇಯರು. ಯಾರೂ ಕಾನೂನಿಗೆ ಅತೀತರಲ್ಲ.

**ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು**

ನಿಶ್ಚಿತ ಪ್ರಾಯ ಪೂರ್ತಿಯಾದ ಎಲ್ಲರಿಗೂ ಮತದಾನ ಮಾಡುವುದಕ್ಕಿರುವ ಹಕ್ಕು.

**ಸ್ವತಂತ್ರವೂ ನಿಷ್ಪಕ್ಷವೂ ಆದ ನ್ಯಾಯಾಂಗ ವ್ಯವಸ್ಥೆ**

ಶಾಸಕಾಂಗ ಮತ್ತು ಕಾರ್ಯಾಂಗದ ನಿಯಂತ್ರಣಗಳಿಂದ ಸ್ವತಂತ್ರವಾಗಿರುವ ನ್ಯಾಯಾಂಗ ವ್ಯವಸ್ಥೆ.

**ಸಂಯುಕ್ತ ವ್ಯವಸ್ಥೆ (Federalism)**

ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯಗಳಿಗೆ ವಿಭಜಿಸುವ ವ್ಯವಸ್ಥೆ.

**ಏಕಪೌರತ್ವ**

ದೇಶದಲ್ಲಿರುವುದು ಒಂದೇ ಪೌರತ್ವ ; ರಾಜ್ಯಗಳಿಗೆ ಪ್ರತ್ಯೇಕ ಪೌರತ್ವವಿಲ್ಲ.

**ಸಂವಿಧಾನದ ವಿಶೇಷತೆಗಳ ಕುರಿತಾಗಿ ತರಗತಿಯಲ್ಲಿ ಒಂದು ಚರ್ಚೆಯನ್ನು ಆಯೋಜಿಸಿರಿ.**

ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ ಅವುಗಳಲ್ಲಿ ಸರಿಯಾದುವುಗಳ ಮುಂದೆ 🙂 ಎಂದು ತಪ್ಪಾದವುಗಳ ಮುಂದೆ ☹ ಎಂದು ಚಿತ್ರಿಸಿರಿ.

| | |
|---|---|
| ನಮ್ಮ ನ್ಯಾಯಾಲಯಗಳು ಸರಕಾರಗಳ ಕೈಕೆಳಗೆ ಕಾರ್ಯಾಚರಿಸುತ್ತವೆ. | |
| ರಾಜ್ಯ ಸರಕಾರಗಳಿಗಾಗಿ ಕೆಲವು ನಿರ್ದಿಷ್ಟ ಅಧಿಕಾರಗಳಿವೆ. | |
| 18 ವರ್ಷ ಪೂರ್ತಿಯಾದ ಎಲ್ಲರಿಗೂ ಮತದಾನದ ಹಕ್ಕು ಇದೆ. | |
| ಯಾರೂ ಕಾನೂನುಗಳಿಗೆ ಅತೀತರಲ್ಲ. | |
| ಭಾರತದಲ್ಲಿ ಒಂದೇ ವ್ಯಕ್ತಿಗೆ ರಾಷ್ಟ್ರದ ಪೌರತ್ವದ ಹೊರತಾಗಿ ರಾಜ್ಯ ಪೌರತ್ವವೂ ಇರುವುದು. | |
| ಪ್ರಜಾಪ್ರಭುತ್ವದಲ್ಲಿ ಜನರೇ ಪರಮಾಧಿಕಾರಿಗಳಾಗಿದ್ದಾರೆ. | |
| ಹಕ್ಕುಗಳಿರುವಂತೆ ನಮಗೆ ಕರ್ತವ್ಯಗಳೂ ಇವೆ. | |
| ನಮ್ಮ ಆಡಳಿತಾಧಿಕಾರಿಗಳ ಮೇಲೆ ಯಾರಿಗೂ ನಿಯಂತ್ರಣವಿಲ್ಲ. | |

## ಕಾನೂನುಗಳ ಮೂಲ

ನಮ್ಮ ಸಂವಿಧಾನವು ರಾಷ್ಟ್ರದ ಮೂಲಭೂತ ನಿಯಮ ಸಂಹಿತೆಯಾಗಿದೆ. ಸಂವಿಧಾನದ ವ್ಯವಸ್ಥೆಗಳಿಗನುಸಾರವಾಗಿ ಮಾತ್ರವೇ ಕೇಂದ್ರ - ರಾಜ್ಯ ಸರಕಾರಗಳಿಗೆ ಯಾವುದೇ ಶಾಸನಗಳನ್ನು ರೂಪಿಸಲು ಸಾಧ್ಯ. ಸರಕಾರಗಳಿಗೆ ಕಾನೂನುಗಳನ್ನು ರಚಿಸಲು ಮತ್ತು ಜಾರಿಗೊಳಿಸಲು ಸಾಧ್ಯವಾಗುವ ರೀತಿಯಲ್ಲಿರುವ ಚೌಕಟ್ಟುಗಳನ್ನೂ ಸಂವಿಧಾನವು ನಿರ್ವಚಿಸಿದೆ. ಕಾನೂನಿನ ವ್ಯವಸ್ಥೆ ಹಾಗು ಕಾನೂನಿನ ಮೂಲವೆಂಬ ರೀತಿಯಲ್ಲಿ ಪರಮೋನ್ನತ ಸ್ಥಾನವು ಸಂವಿಧಾನಕ್ಕಿದೆ.

ರಾಷ್ಟ್ರೀಯ ಭದ್ರತೆಯ ಕಾಯಿದೆ

ವನ - ವನ್ಯಜೀವಿ ಸಂರಕ್ಷಣಾ ಕಾಯಿದೆ

ಬಾಲಕಾರ್ಮಿಕ ನಿಷೇಧ ಕಾಯಿದೆ

ದುರಂತ ನಿವಾರಣ ಕಾಯಿದೆ

ಆಹಾರ ಭದ್ರತಾ ಕಾಯಿದೆ

ಭೂ ಸುಧಾರಣಾ ಕಾಯಿದೆ

ಮಾಹಿತಿ ಹಕ್ಕು ಕಾಯಿದೆ

ಬಾಲನೀತಿ ಕಾಯಿದೆ

ಭ್ರಷ್ಟಾಚಾರ ನಿಯಂತ್ರಣ ಕಾಯಿದೆ

ಕಾರ್ಮಿಕ ಕಾಯಿದೆ

ಶಿಕ್ಷಣ ಹಕ್ಕು ಕಾಯಿದೆ

ಪರಿಸರ ಸಂರಕ್ಷಣಾ ಕಾಯಿದೆ

ಮೇಲೆ ಸೂಚಿಸಿರುವ ಎಲ್ಲಾ ಕಾಯಿದೆಗಳು ಸಂವಿಧಾನಾತ್ಮಕವಾಗಿ ನಿರ್ಮಿಸಲ್ಪಟ್ಟವುಗಳಾಗಿವೆ.

ಕೊಲಾಷ್ ನಲ್ಲಿರುವ ಕಾಯಿದೆಗಳಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿರುವುದು ಯಾವುವು? ಪಟ್ಟಿ ಮಾಡಿರಿ.

- ಬಾಲಕಾರ್ಮಿಕ ನಿಷೇಧ ಕಾಯಿದೆ
- 
- 

ಮಕ್ಕಳ ಹಕ್ಕುಗಳಿಗಾಗಿ ನಮ್ಮ ದೇಶವು ಹೆಚ್ಚಿನ ಪ್ರಾಧಾನ್ಯವನ್ನು ನೀಡುವುದು ಯಾಕಾಗಿರಬಹುದು? ಚರ್ಚಿಸಿರಿ.




*ಚಿತ್ರ 3.5*
*ಆಕರ : ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣಾ ಕಮಿಷನ್*

ಮಕ್ಕಳ ವಿರುದ್ಧ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ತಡೆಯಲು ಹಾಗೂ ಅಪರಾಧಿಗಳಿಗೆ ಸೂಕ್ತವಾದ ಶಿಕ್ಷೆಯನ್ನು ಖಚಿತಪಡಿಸುವುದು 1989ರ ಮಕ್ಕಳ ಹಕ್ಕು ಕಾಯಿದೆಯ ಉದ್ದೇಶವಾಗಿದೆ. ಭಾರತದ ಸಂವಿಧಾನವು ಖಚಿತಪಡಿಸುವ ಹಕ್ಕುಗಳನ್ನು ಲಿಂಗ ಭೇದವಿಲ್ಲದೆ ಜಾರಿಗೊಳಿಸಲು ಬಾಲ ಸೌಹಾರ್ದ ರೀತಿಗಳನ್ನು ಒಳಗೊಂಡು ಜಾರಿಗೆ ಬಂದ ಈ ಕಾಯಿದೆಯು ಪೋಕ್ಸೊ ಆಕ್ಟ್ - 2012 (Protection of Children from Sexual Offences Act 2012) ಆಗಿದೆ. ಈ ಕಾಯಿದೆಯು 18 ವರ್ಷಕ್ಕಿಂತ ಕೆಳಗಿನವರನ್ನು ಮಗು ಎಂದು ಪರಿಗಣಿಸುವುದು.

ಈ ಕಾಯಿದೆಯ ಕುರಿತು ನೀವು ಕೇಳಿರುವಿರಾ?

ಸಮಾಜದಲ್ಲಿ ಪ್ರತಿಯೋರ್ವ ಮಗುವಿಗೂ ನಿರ್ಭಯವಾಗಿ ಹಾಗೂ ಸುರಕ್ಷಿತವಾಗಿ ಜೀವನ ನಡೆಸುವುದಕ್ಕಿರುವ ಹಕ್ಕು ಇದೆ. ಮುಜುಗರವನ್ನುಂಟುಮಾಡುವ ಸುರಕ್ಷಿತವಲ್ಲದ ಸ್ಪರ್ಶ, ನೋಟ, ವರ್ತನೆ ಮೊದಲಾದವುಗಳು ಯಾವುದೇ ವ್ಯಕ್ತಿಗಳಿಂದ ಉಂಟಾದರೂ ಅವುಗಳನ್ನು ತಿಳಿಯಲು ಸಾಧ್ಯವಾಗಬೇಕು. ಈ ವಿಧದ ವರ್ತನೆಗಳನ್ನು 'ಬೇಡ' ಎಂದು ಹೇಳಲು, ದೂರ ಮಾಡಲು, ಅಧಿಕಾರಿಗಳಿಗೆ ದೂರು ನೀಡಲೂ ಬೇಕಾದ ತಿಳುವಳಿಕೆ ಇರಬೇಕು. ಲೈಂಗಿಕ ದೌರ್ಜನ್ಯದ ಅಪರಾಧಗಳು ಉಂಟಾದರೆ ಅವುಗಳನ್ನು ದಾಖಲಿಸಬೇಕಾದದ್ದು (ವಿಧಿ 19 ರ ಪ್ರಕಾರ) ಸ್ಪೆಷಲ್ ಜುವೆನಲ್ ಪೊಲೀಸ್ ಯೂನಿಟ್ ಅಥವಾ ಸ್ಥಳೀಯ ಪೊಲೀಸ್ ಆಗಿದೆ ಎಂದು ಕಾನೂನು ವಿವರಿಸುತ್ತದೆ. ಪೊಕ್ಸೊ ಅಪರಾಧಗಳನ್ನು ನಿಭಾಯಿಸುವ ಅಧಿಕಾರಿಗಳನ್ನು ಚೈಲ್ಡ್ ವೆಲ್ಫೇರ್ ಪೊಲೀಸ್ ಆಫೀಸರ್ (CWPO) ಎಂದು ಕರೆಯಲಾಗುತ್ತದೆ.

ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣಾ ಕಮಿಷನ್ ಪೋಕ್ಸೊ ಕಾನೂನಿನ 44ನೇ ಕಲಂ ಪ್ರಕಾರ ನಿರೀಕ್ಷಣಾ ವ್ಯವಸ್ಥೆಯನ್ನು (POCSO Monitoring Cell) ಆಯೋಜಿಸಿದೆ.

ಪೋಕ್ಸೊ ಪ್ರಕರಣಗಳಲ್ಲಿ ಅಪರಾಧಿಗಳಾಗುವ ಪ್ರತಿಯೊಬ್ಬ ವ್ಯಕ್ತಿಗೂ ಕಠಿಣ ಶಿಕ್ಷೆ ಲಭಿಸುವ ವ್ಯವಸ್ಥೆಗಳು ಈ ಕಾನೂನಿನಲ್ಲಿವೆ.



ಅಪರಾಧದ ಸಾಧ್ಯತೆಗಳನ್ನು ಕಂಡುಕೊಂಡು ಪ್ರತಿಭಟಿಸಲು ಹಾಗು ಅದರಿಂದ ಪಾರಾಗಲಿರುವ ಚಟುವಟಿಕೆಗಳ ಕುರಿತು ತರಗತಿಯಲ್ಲಿ ಚರ್ಚಿಸಿ ಜಾಗೃತಿ ಮೂಡಿಸಲು ಕಿರು ಟಿಪ್ಪಣಿಗಳನ್ನು ತಯಾರಿಸಿರಿ.

### ಸಂವಿಧಾನದ ಆಶಯಗಳು

ಕಾನೂನಿನ ವ್ಯವಸ್ಥೆ, ಕಾನೂನಿನ ಮೂಲ ಎಂಬಿವುಗಳಲ್ಲದೆ ಇತರ ಯಾವೆಲ್ಲಾ ಕಾರ್ಯಗಳನ್ನು ಸಂವಿಧಾನವು ನಿರ್ವಹಿಸುತ್ತದೆ ಎಂದು ಪರಿಶೋಧಿಸುವ.




ಚಿತ್ರ 3.6

**ಫಲಕಗಳನ್ನು ಬರೆಯುವ**

> ಸಂವಿಧಾನದ ಆಶಯಗಳನ್ನು ಸೂಚಿಸುವ ಸಂದೇಶಗಳುಳ್ಳ ಫಲಕಗಳನ್ನು ಸೇರಿಸಿ ಗಣರಾಜ್ಯ ದಿನದ ರ್‍ಯಾಲಿಗಾಗಿ ತಯಾರಿಸಿರಿ.




*ಚಿತ್ರಗಳು 3.7*

ST-503-7-SOC. SCI. (K)-7-VOL-1

## ಬದಲಾಯಿಸಿಯೂ ತಿದ್ದುಪಡಿ ಮಾಡಿಯೂ ಮುಂದಕ್ಕೆ

ಚಿತ್ರವನ್ನು ನಿರೀಕ್ಷಿಸಿ ಈ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿದು ಬರೆಯಿರಿ.




*ಚಿತ್ರಗಳು 3.8*

- 1976 ರಲ್ಲಿ ಯಾವೆಲ್ಲಾ ಆಶಯಗಳನ್ನು ಸಂವಿಧಾನದಲ್ಲಿ ಹೊಸದಾಗಿ ಸೇರಿಸಲಾಯಿತು?
- ಭಾರತದ ಸಂವಿಧಾನವು ಜಾರಿಗೆ ಬಂದ ವರ್ಷ ಯಾವುದು?
- ಸಂವಿಧಾನದ ಪ್ರಥಮ ತಿದ್ದುಪಡಿ ಯಾವುದು? ಯಾವ ವರ್ಷ?
- ರಾಷ್ಟ್ರದಲ್ಲಿ ಆಸ್ತಿಯ ಹಕ್ಕು ಮೂಲಭೂತ ಹಕ್ಕಾಗಿ ಎಷ್ಟು ವರ್ಷದವರೆಗೆ ನೆಲೆ ನಿಂತಿತ್ತು?
- ಭಾರತದಲ್ಲಿ ಶಿಕ್ಷಣವು ಮೂಲಭೂತ ಹಕ್ಕಾಗಿದೆಯೇ? ಯಾವ ವರ್ಷದಿಂದ?
- ಭಾರತದ ಸಂವಿಧಾನವನ್ನು ಇದುವರೆಗೆ ಎಷ್ಟು ಬಾರಿ ತಿದ್ದುಪಡಿ ಮಾಡಲಾಗಿದೆ?

ನಮ್ಮ ಸಂವಿಧಾನದಲ್ಲಿ ಕಾಲಕ್ಕೆ ಅನುಗುಣವಾಗಿ ಬದಲಾವಣೆಗಳನ್ನು ತರಬಹುದಾಗಿವೆ. ಬದಲಾಗುತ್ತಿರುವ ಸಾಮಾಜಿಕ ಅಗತ್ಯಗಳನ್ನು ಪರಿಗಣಿಸಿ ಸಂವಿಧಾನದಲ್ಲಿ ಬದಲಾವಣೆಗಳನ್ನು ಉಂಟುಮಾಡುವ ಪ್ರಕ್ರಿಯೆಯು ಸಂವಿಧಾನದ ತಿದ್ದುಪಡಿಯಾಗಿದೆ. ಹೇಗೆಲ್ಲಾ ತಿದ್ದುಪಡಿಗಳನ್ನು ಮಾಡಬಹುದು ಎಂದು ಸಂವಿಧಾನದಲ್ಲಿ ವಿವರಿಸಲಾಗಿದೆ. 368ನೇ ಕಾಯಿದೆ ಪ್ರಕಾರ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರವು ಪಾರ್ಲಿಮೆಂಟಿಗಿದೆ. ಆದರೆ, ಸಂವಿಧಾನದ ಮೂಲತತ್ವವನ್ನು ತಿದ್ದುಪಡಿ ಮಾಡಲು ಸಾಧ್ಯವಿಲ್ಲ.


ಚಿತ್ರ 3.9

**ಅಡಿಪಾಯವನ್ನು ಅಲುಗಾಡಿಸಬಾರದು!**

ಕಾಸರಗೋಡಿನ ಎಡನೀರು ಮಠಾಧಿಪತಿಯಾಗಿದ್ದ ಕೇಶವಾನಂದ ಭಾರತಿಯವರು 1973ರಲ್ಲಿ ಕೇರಳ ಸರಕಾರದ ವಿರುದ್ಧವಾಗಿ ಸಲ್ಲಿಸಿದ ವ್ಯಾಜ್ಯದಲ್ಲಿ ಸಂವಿಧಾನದ ಮೂಲತತ್ವದಲ್ಲಿ ಯಾವುದೇ ಬದಲಾವಣೆಯನ್ನು ಉಂಟುಮಾಡಬಾರದು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತು.

**ಶಿಕ್ಷಣ : ಮೂಲಭೂತ ಹಕ್ಕು**

2002 ರಲ್ಲಿ ನಡೆದ ಸಂವಿಧಾನದ 86ನೇ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಅಂಗೀಕರಿಸಲಾಯಿತು. ಈ ವ್ಯವಸ್ಥೆಗಳು ಸಂವಿಧಾನದ 21 (ಎ) ಕಾಯಿದೆಯಲ್ಲಿ ಸೇರಿಸಲಾಗಿದೆ. ಈ ತಿದ್ದುಪಡಿ ಪ್ರಕಾರ 2009 ಅಗಸ್ಟ್ 4 ರಂದು 'ಶಿಕ್ಷಣ ಹಕ್ಕು ನಿಯಮ 2009' ಜಾರಿಗೆ ಬಂತು. ಈ ಕಾನೂನು 6 ರಿಂದ 14 ವರುಷ ಪ್ರಾಯವಿರುವ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಖಾತರಿಪಡಿಸುತ್ತದೆ.

**ಕಿರು ಸಂವಿಧಾನ**



1976ರ 42ನೇ ತಿದ್ದುಪಡಿಯ ಮೂಲಕ ಜಾತ್ಯತೀತತೆ, ಸಮಾಜವಾದ, ಅಖಂಡತೆ ಎಂಬೀ ಪದಗಳನ್ನು ಸಂವಿಧಾನದ ಮುನ್ನುಡಿಯಲ್ಲಿ ಸೇರಿಸಲಾಯಿತು. ಇದಲ್ಲದೆ ಇನ್ನು ಕೆಲವು ಬದಲಾವಣೆಗಳನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಮಾಡಲಾಗಿದೆ. ಅನೇಕ ಪ್ರಧಾನವಾದ ಬದಲಾವಣೆಗಳನ್ನು ಉಂಟು ಮಾಡಿದ ಕಾರಣ ಈ ತಿದ್ದುಪಡಿಯನ್ನು ಕಿರು ಸಂವಿಧಾನ (Mini Constitution) ಎಂದು ಕರೆಯಲಾಗುತ್ತದೆ.

**ಸಂವಿಧಾನದ ಪ್ರಧಾನವಾದ ಕೆಲವು ತಿದ್ದುಪಡಿಗಳನ್ನು ಸೇರಿಸಿಕೊಂಡು ಒಂದು ಕಾಲರೇಖೆಯನ್ನು ತಯಾರಿಸಿರಿ.**

### ಕಾನೂನುಗಳನ್ನು ಜಾರಿಗೊಳಿಸಿದಾಗ...

**ದೇಶದಲ್ಲಿ ಇನ್ನೂ ಜಾರಿಗೊಳ್ಳದ ಭೂ ಸುಧಾರಣೆ**

**ವರದಕ್ಷಿಣೆ ನಿಷೇಧ ಕಾನೂನು ಕಾಗದದಲ್ಲಿ ಮಾತ್ರ**

**ಮದ್ಯಪಾನ ವಿಪತ್ತು : ಕಾನೂನಿಂದ ಮಾತ್ರ ತಡೆಯಲು ಸಾಧ್ಯವಿಲ್ಲ**

**ಮಕ್ಕಳ ಹಕ್ಕು ನಿಯಮವನ್ನು ಕಠಿಣಗೊಳಿಸಬೇಕೆಂದು ಒತ್ತಾಯ**

ಮೇಲೆ ನೀಡಿರುವ ವಾರ್ತಾ ಶೀರ್ಷಿಕೆಗಳನ್ನು ಓದಿದಿರಲ್ಲವೇ? ಯಾವೆಲ್ಲಾ ವಿಷಯಗಳನ್ನು ನಿಮಗೆ ತಿಳಿಯಲು ಸಾಧ್ಯವಾಯಿತು?

ಕಾನೂನುಗಳನ್ನು ಜಾರಿಗೊಳಿಸುವಾಗ ಎದುರಿಸಬೇಕಾಗುವ ಅನೇಕ ಸವಾಲುಗಳನ್ನು ಇಲ್ಲಿ ಸೂಚಿಸಲಾಗಿದೆ. ಇದಕ್ಕಿರುವ ಕಾರಣಗಳೇನಾಗಿರಬಹುದು?

- ಜನರ ವಿಭಿನ್ನ ಆಸಕ್ತಿ.
- ಜನಹಿತವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸದ ಕಾನೂನು
- ಕಾನೂನುಗಳ ಕುರಿತಾದ ತಿಳುವಳಿಕೆ ಇಲ್ಲದಿರುವುದು.
-

ನಮ್ಮದು ವಿಭಿನ್ನ ಆಸಕ್ತಿಗಳನ್ನು ಹೊಂದಿದ ಸಮಾಜವಾಗಿದೆ. ಆದರೂ ಕಾನೂನುಗಳನ್ನು ಪಾಲಿಸಲು ಎಲ್ಲರೂ ಸಂವಿಧಾನದ ಪ್ರಕಾರ ಜವಾಬ್ದಾರರು. ಹೊಸ ಕಾನೂನುಗಳನ್ನು ನಿರ್ಮಾಣ ಮಾಡುವಾಗ ಅವುಗಳ ವಿರುದ್ಧ ಅಭಿಪ್ರಾಯಗಳು ಹಾಗೂ ಹೋರಾಟಗಳು ಉಂಟಾಗುವ ಸಾಧ್ಯತೆಗಳಿವೆ. ಇದು ಪ್ರಜಾಪ್ರಭುತ್ವ ಸಮಾಜದಲ್ಲಿ ಸಾಮಾನ್ಯವಾಗಿದೆ. ಹೀಗೆ ಉಂಟಾಗುವ ವಿರೋಧಗಳನ್ನು ಸಂವಿಧಾನಾತ್ಮಕ ಹಾಗೂ ಪ್ರಜಾಪ್ರಭುತ್ವ ರೀತಿಯಲ್ಲಿ ಸಮೀಪಿಸಬೇಕು.

ವೈವಿಧ್ಯಗಳು ಹಾಗು ವೈರುಧ್ಯಗಳಿಂದ ಕೂಡಿರುವ ನಮ್ಮ ಸಮಾಜದಲ್ಲಿ ಸಂವಿಧಾನವು ಮುಂದಿಡುವ ಮೌಲ್ಯಗಳನ್ನು ಪೌರ ಸಮಾಜ ಸ್ವೀಕರಿಸಿದರೆ ಮಾತ್ರವೇ ಭಾರತವನ್ನು ಪರಮಾಧಿಕಾರ, ಸಮತ್ವ, ಜಾತ್ಯತೀತ, ಪ್ರಜಾಪ್ರಭುತ್ವ ಗಣರಾಜ್ಯವನ್ನಾಗಿಸಲು ಸಾಧ್ಯವಾಗಬಹುದು.

## ಮುಂದುವರಿದ ಚಟುವಟಿಕೆಗಳು

- ಕಾನೂನುಗಳಿಗೆ ಸಂಬಂಧಿಸಿದ ವಾರ್ತೆಗಳ ಶೀರ್ಷಿಕೆಗಳು ಹಾಗೂ ಚಿತ್ರಗಳನ್ನು ಸಂಗ್ರಹಿಸಿ ಕೊಲೇಷ್ ತಯಾರಿಸಿರಿ.
- 'ಸಂವಿಧಾನದ ವಿಶೇಷತೆಗಳು' ಎಂಬ ವಿಷಯದ ಬಗ್ಗೆ ತರಗತಿಯಲ್ಲಿ ಒಂದು ವಿಚಾರಗೋಷ್ಠಿ ನಡೆಸಿರಿ.
- ಭಾರತದ ಸಂವಿಧಾನದ ಆಶಯಗಳ ಆಧಾರದಲ್ಲಿ ನಿಮ್ಮ ತರಗತಿಗಾಗಿ ಒಂದು ಸಂವಿಧಾನವನ್ನು ರಚಿಸಿರಿ.
- 'ಮಕ್ಕಳ ಸುರಕ್ಷೆ ಮತ್ತು ಪೋಕ್ಸೊ ಕಾನೂನು' ಎಂಬ ವಿಷಯದ ಕುರಿತು ಕಾನೂನು ತಜ್ಞರ ಸಹಾಯದೊಂದಿಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿರಿ.



4

# ಅನ್ಯಾಯದಿಂದ ನ್ಯಾಯದೆಡೆಗೆ



*ಚಿತ್ರ 4.1*

"ನಾನು ರಾಮೇಶ್ವರಂ ಎಲಿಮೆಂಟರಿ ಶಾಲೆಯಲ್ಲಿ ಐದನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ಒಂದು ದಿನ ಹೊಸ ಅಧ್ಯಾಪಕರೊಬ್ಬರು ನನ್ನ ತರಗತಿಗೆ ಬಂದರು. ಒಬ್ಬ ಮುಸಲ್ಮಾನ ಎಂದು ಗುರುತಿಸಲು ಸಾಧ್ಯವಾಗುವಂತೆ ಟೋಪಿ ಧರಿಸಿದ್ದ ನಾನು ಯಾವಾಗಲೂ ಮುಂದಿನ ಸಾಲಿನಲ್ಲಿ ಜನಿವಾರ ಧರಿಸಿರುವ ರಾಮನಾಥ ಶಾಸ್ತ್ರಿಯ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದೆ. ಹಿಂದು ಪುರೋಹಿತರ ಮಗನೊಬ್ಬ ಮುಸ್ಲಿಂ ಹುಡುಗನೊಂದಿಗೆ ಕುಳಿತುಕೊಳ್ಳುವುದನ್ನು ಅವರಿಗೆ ಸಹಿಸಲು ಸಾಧ್ಯವಾಗಲಿಲ್ಲ. ತಾನು ಅರಿತುಕೊಂಡಿದ್ದ ಸಾಮಾಜಿಕ ವ್ಯವಸ್ಥೆಯ ಪ್ರಕಾರ ಅವರು ನನ್ನನ್ನು ಎಬ್ಬಿಸಿ ಹಿಂದಿನ ಸಾಲಿಗೆ ಹೋಗಿ ಕುಳಿತುಕೊಳ್ಳುವಂತೆ ಆದೇಶಿಸಿದರು. ನನಗೆ ಬಹಳ ದುಃಖವಾಯಿತು. ರಾಮ ಶಾಸ್ತ್ರಿಯವರಿಗೂ ಬೇಸರವಾಯಿತು. ಹಿಂದಿನ ಸಾಲಿನಲ್ಲಿ ನಾನು ಕುಳಿತುಕೊಳ್ಳಲು ಹೋದಾಗ ಅವರ ಗದ್ಗದಿತ ಮುಖವು ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ಶಾಲೆ ಬಿಟ್ಟು ಮನೆಗೆ ಬಂದಾಗ ನಾವಿಬ್ಬರೂ ತಂದೆ-ತಾಯಿಯರಲ್ಲಿ ಅಂದು ನಡೆದ ಘಟನೆಯನ್ನು ತಿಳಿಸಿದೆವು. ಲಕ್ಷ್ಮಣ ಶಾಸ್ತ್ರಿಗಳು ಆ ಶಿಕ್ಷಕನನ್ನು ಬರ ಹೇಳಿದರು. ತದನಂತರ ನಮ್ಮ ಸಮ್ಮುಖದಲ್ಲಿ "ಮುಗ್ಧ ಮಕ್ಕಳ ಮನಸ್ಸಿನಲ್ಲಿ ಸಾಮಾಜಿಕ ಅಸಮಾನತೆ ಮತ್ತು ಅಸಹಿಷ್ಣುತೆಯ ವಿಷ ಬೀಜವನ್ನು ಬಿತ್ತಬೇಡಿ... ಎಂದು ಹೇಳಿದರು. ತನ್ನಿಂದಾದ ತಪ್ಪಿಗೆ ಆ ಅಧ್ಯಾಪಕರು ಪಶ್ಚಾತಾಪಪಟ್ಟರು ಮಾತ್ರವಲ್ಲದೆ ಲಕ್ಷ್ಮಣ ಶಾಸ್ತ್ರಿಯವರು ನೀಡಿದ ಸಂದೇಶದ ಸ್ಫೂರ್ತಿಯಿಂದ ಅವರಲ್ಲಿ ಪೂರ್ಣವಾದ ಪರಿವರ್ತನೆ ಉಂಟಾಯಿತು".

**'ಅಗ್ನಿಯ ರೆಕ್ಕೆಗಳು'** - ಡಾ. ಎ.ಪಿ.ಜೆ ಅಬ್ದುಲ್ ಕಲಾಂ

ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರ ಬಾಲ್ಯಕಾಲದ ಒಂದು ಅನುಭವವನ್ನು ಪರಿಚಯಿಸಿಕೊಂಡಿರಲ್ಲವೇ?

ಸಮಾಜದಲ್ಲಿ ಕೆಲವು ವಿಭಾಗಗಳಿಗೆ ಅರ್ಹ ಪರಿಗಣನೆಯನ್ನು ನೀಡದೆ ದೂರವಿರಿಸಿದ್ದರು ಎಂಬುದನ್ನು ಎ.ಪಿ. ಜೆ. ಅಬ್ದುಲ್ ಕಲಾಂ ಅವರ ಈ ಅನುಭವವು ಸೂಚಿಸುತ್ತದೆ. ಸಮಾಜದ ಮುಖ್ಯವಾಹಿನಿಯಿಂದ ವ್ಯಕ್ತಿಗಳನ್ನು ದೂರವಿರಿಸುವುದು, ಸಾಮಾಜಿಕ ಅಸಮಾನತೆ, ಅವಕಾಶಗಳ ನಿಷೇಧ, ಸಾಮಾಜಿಕ ತಾರತಮ್ಯ ಮೊದಲಾದ ಪ್ರವೃತ್ತಿಗಳನ್ನು ಅನೀತಿ ಎನ್ನುತ್ತೇವೆ. ಪೂರ್ವಾಗ್ರಹಪೀಡಿತವಾಗಿ ಕೆಲವು ಸಾಮಾಜಿಕ ಗುಂಪುಗಳನ್ನು ಅವರ ಜಾತಿ, ಧರ್ಮ, ಮತ ಅಥವಾ ಪಂಗಡಗಳ ಕಾರಣದಿಂದ ದೂರವಿಡಲಾಗಿತ್ತು. ಸಾಮರ್ಥ್ಯಗಳಿದ್ದರೂ ಉದ್ಯೋಗ, ವಿದ್ಯಾಭ್ಯಾಸ ಹಾಗೂ ಅವಕಾಶಗಳನ್ನು ನಿಷೇಧಿಸುವುದು, ಅವಕಾಶಗಳಿದ್ದರೂ ನೀಡದಿರುವುದು, ವ್ಯಕ್ತಿ ಎಂಬ ನೆಲೆಯಲ್ಲಿ ನೀಡಬೇಕಾದ ಪರಿಗಣನೆಯನ್ನು ನೀಡದಿರುವಂತಹ ಚಟುವಟಿಕೆಗಳ ಮೂಲಕ ಕೆಲವು ಸಾಮಾಜಿಕ ವಿಭಾಗಗಳನ್ನು ಮೂಲೆಗುಂಪು ಮಾಡಲಾಗಿತ್ತು. ಸಾಮಾಜಿಕ ನ್ಯಾಯವನ್ನು ಪಡೆಯುವುದಕ್ಕಾಗಿ ನೇತೃತ್ವ ನೀಡಿದ ಪ್ರಧಾನ ವ್ಯಕ್ತಿಗಳು ಹಾಗೂ ಘಟನೆಗಳ ಕುರಿತು ಈ ಪಾಠ ಭಾಗದಲ್ಲಿ ಚರ್ಚಿಸಲಾಗುವುದು.

ಅಂಚು, ಬದಿ, ಕಡೆಗಣಿಸು ಮೊದಲಾದ ಪದಗಳು ನಿಮಗೆ ಪರಿಚಯವಿದೆಯಲ್ಲವೇ? ಯಾವೆಲ್ಲಾ ಸಂದರ್ಭಗಳಲ್ಲಿ ಈ ಶಬ್ಧಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುವುದು?

- 
- 
- 
- 

ಸಮಾನ ಪರಿಗಣನೆ ಲಭಿಸಬೇಕಾದ ಸಂದರ್ಭಗಳಿಂದ ಕೆಲವು ವಿಭಾಗಗಳನ್ನು ಹೊರಗಿಡುವ ಪ್ರಕ್ರಿಯೆಯನ್ನು ಬದಿಗೆ ಸರಿಸುವುದು(Marginalisation) ಎಂದು ಕರೆಯುತ್ತಾರೆ.

ಸಮಾಜದಲ್ಲಿ ಹಲವು ಕಾರಣಗಳಿಂದ ಬದಿಗೆ ಸರಿಸುವಿಕೆಯು ನಡೆಯುತ್ತದೆ.





*ಚಿತ್ರಗಳು 4.2*

ಚಿತ್ರಗಳನ್ನು ನಿರೀಕ್ಷಿಸಿದಿರಲ್ಲವೇ? ಈ ಚಿತ್ರಗಳಲ್ಲಿ ಕಾಣುವ ಸನ್ನಿವೇಶಗಳು ಯಾವುವು?

- ಪ್ರಕೃತಿ ವಿಕೋಪ
-
-
-

ಪ್ರಕೃತಿ ದುರಂತಗಳು, ಮನುಷ್ಯ ನಿರ್ಮಿತ ದುರಂತಗಳು (Natural and Man made Disasters) ಮೊದಲಾದವುಗಳಿಂದಾಗಿ ಸ್ವಂತವಾಗಿದ್ದ ಸೊತ್ತುಗಳೆಲ್ಲವು ನಷ್ಟವಾದಾಗ ಬದಿಗೆ ಸರಿಸುವಿಕೆ ಉಂಟಾಗುತ್ತದೆ. ನೆರೆ, ಭೂಕಂಪ, ಗುಡ್ಡಜರಿತ, ಕಡಲ್ಕೊರೆತ ಮೊದಲಾದ ಪ್ರಾಕೃತಿಕ ದುರಂತಗಳಿಂದಲೂ ಯುದ್ಧ ಅಪಘಾತಗಳು, ಕಾರ್ಖಾನೆಗಳಲ್ಲಿನ ದುರಂತಗಳು ಮೊದಲಾದ ಮನುಷ್ಯ ನಿರ್ಮಿತ ದುರಂತಗಳ ಮೂಲಕವೂ ಕೆಲವರು ಬದಿಗೆ ಸರಿಸಲ್ಪಡುತ್ತಾರೆ.

ಜಾತಿ-ಮತ-ಗೋತ್ರ-ಲಿಂಗ ಸ್ಥಾನಮಾನಗಳಲ್ಲಿನ ವ್ಯತ್ಯಾಸಗಳ ಆಧಾರದ ಮೇಲೆ ಕೆಲವರನ್ನು ಉದ್ದೇಶಪೂರ್ವಕವಾಗಿ ಹೊರಗಿರಿಸುವ ಮೂಲಕ(Exclusion) ಬದಿಗೆ ಸರಿಸುವಿಕೆಯು ನಡೆಯುತ್ತದೆ. ವಿದ್ಯಾಭ್ಯಾಸಕ್ಕಿರುವ ಅವಕಾಶ ನಿಷೇಧವು ಇದಕ್ಕೆ ಉದಾಹರಣೆಯಾಗಿದೆ.



**ಬದಿಗೆ ಸರಿಸುವಿಕೆಗಿರುವ ಇತರ ಕಾರಣಗಳನ್ನು ಕಂಡುಕೊಂಡು ವಿವಿಧ ರೀತಿಯ ಬದಿಗೆ ಸರಿಸುವಿಕೆಯ ಕುರಿತು ಒಂದು ಚರ್ಚೆಯನ್ನು ಆಯೋಜಿಸಿರಿ.**

ಚರ್ಚಾ ಸೂಚಕಗಳು

- ದೂರವಿರಿಸುವುದು
- ಒಕ್ಕಲೆಬ್ಬಿಸುವುದು
- ಪ್ರಾಕೃತಿಕ ದುರಂತ
- ಮನುಷ್ಯ ನಿರ್ಮಿತ ದುರಂತಗಳು

## ಸಮಾಜದಲ್ಲಿ ಯಾರೆಲ್ಲಾ ಬದಿಗೆ ಸರಿಸುವಿಕೆಗೆ ಗುರಿಯಾಗುತ್ತಾರೆ?

ಸಮಾಜದಲ್ಲಿ ಬದಿಗೆ ಸರಿಸುವಿಕೆಗೆ ಮತ್ತು ಬೇಧ ಭಾವಗಳಿಗೆ ಗುರಿಯಾಗುವ ಅನೇಕ ವಿಭಾಗಗಳಿವೆ. ಸ್ತ್ರೀಯರು, ತೃತೀಯ ಲಿಂಗಿಗಳು (ಟ್ರಾನ್ಸ್‌ಜೆಂಡರ್ಸ್), ದಲಿತರು, ಬುಡಕಟ್ಟು ವಿಭಾಗದವರು, ಅಲ್ಪಸಂಖ್ಯಾತರು, ನಿರ್ಗತಿಕರು, ನಿರಾಶ್ರಿತರು, ವಿಶೇಷಚೇತನರು, ಜೈಲು ವಿಮೋಚಿತರು ಮೊದಲಾದವರು ಇದಕ್ಕೆ ಉದಾಹರಣೆಯಾಗಿದ್ದಾರೆ.

ಇದರಲ್ಲಿರುವ ಪ್ರತಿಯೊಂದು ವಿಭಾಗದವರಿಗೂ ಬದಿಗೆ ಸರಿಸುವಿಕೆಯ ವಿರುದ್ಧ ನಡೆಸಿದ ಹೋರಾಟದ ದೊಡ್ಡ ಹಿನ್ನೆಲೆ ಇದೆ.

### ಊರುಟ್ಟಂಬಲಂ ನಲ್ಲಿರುವ ಸರ್ಕಾರಿ ಯು.ಪಿ ಶಾಲೆ ಇನ್ನು ಮುಂದೆ ಅಯ್ಯಂಕಾಳಿ - ಪಂಚಮಿ ಸ್ಮಾರಕ ವಿದ್ಯಾಲಯ



*ಚಿತ್ರ 4.3*
**ಮಹಾತ್ಮ ಅಯ್ಯಂಕಾಳಿ**

ತಿರುವನಂತಪುರ : ಊರುಟ್ಟಂಬಲಂ ಸರ್ಕಾರಿ ಯು.ಪಿ ಶಾಲೆಯು ಇಂದಿನಿಂದ ಅಯ್ಯಂಕಾಳಿ - ಪಂಚಮಿ ಸ್ಮಾರಕ ಸರಕಾರಿ ಯು.ಪಿ ಶಾಲೆಯೆಂದು ಕರೆಯಲ್ಪಡುವುದು. 'ಕುಡಿಪಳ್ಳಿಕೂಡಂ' ಆಗಿದ್ದ ಊರುಟ್ಟಂಬಲಂ ಸರಕಾರಿ ಯು.ಪಿ ಶಾಲೆಯಲ್ಲಿ ಇತಿಹಾಸವನ್ನೇ ಬದಲಾಯಿಸಿದ ಹೋರಾಟಕ್ಕೆ ಅಯ್ಯಂಕಾಳಿಯವರು ನಾಂದಿಹಾಡಿದರು. ಶಾಲೆಯಲ್ಲಿ ಪಂಚಮಿ ಎಂಬ ದಲಿತ ಬಾಲಕಿಯನ್ನು ಕಲಿಯಲು ಬಿಡದಿರುವುದನ್ನು ವಿರೋಧಿಸಿ ಅಯ್ಯಂಕಾಳಿಯವರು ಪಂಚಮಿಯನ್ನು ಕೈಹಿಡಿದು ಶಾಲೆಗೆ ಕರೆತಂದು ತರಗತಿಯಲ್ಲಿ ಕುಳಿತುಕೊಳ್ಳುವಂತೆ ಮಾಡಿದರು. ಪಂಚಮಿ ಶಾಲೆಗೆ ಪ್ರವೇಶಿಸಿದನ್ನು ವಿರೋಧಿಸಿ ಜಮೀನ್ದಾರರು ಶಾಲೆಗೆ ಬೆಂಕಿ ಇಟ್ಟರು. ಅರ್ಧ ಸುಟ್ಟ ಬೆಂಚು ಸೇರಿದಂತೆ ಶಾಲೆಯ ಅವಶೇಷಗಳು ಶಾಲೆಯ ಮ್ಯೂಸಿಯಂನಲ್ಲಿ ಇಂದೂ ಕಾಣಸಿಗುತ್ತವೆ.





ಮೇಲಿನ ವಾರ್ತೆಯನ್ನು ಗಮನಿಸಿದಿರಲ್ಲವೇ?

ಕೆಳ ಜಾತಿ ಎಂದು ಪರಿಗಣಿಸಲ್ಪಟ್ಟವರಿಗೆ ಮೇಲುಜಾತಿ ಎಂದು ತಿಳಿಯಲ್ಪಟ್ಟವರು ಚಾರಿತ್ರಿಕವಾಗಿ ಶೈಕ್ಷಣಿಕ ಹಕ್ಕುಗಳನ್ನು ನಿಷೇಧಿಸಿದ್ದರು. ಶಿಕ್ಷಣ ನಿಷೇಧಿಸಲ್ಪಟ್ಟವರಿಗೆ ಸಮಾನ ಶಿಕ್ಷಣ ಹಕ್ಕುಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಮಹಾತ್ಮ ಅಯ್ಯಂಕಾಳಿ ಶ್ರಮಿಸಿದರು. ಶಿಕ್ಷಣವು ಸಾಮಾಜಿಕ ಪರಿವರ್ತನೆಗಾಗಿರುವ ಮಾರ್ಗವಾಗಿದೆ ಎಂದು ಕಂಡುಕೊಂಡದ್ದು ಅಯ್ಯಂಕಾಳಿಯವರ ಕಾರ್ಯ ವೈಖರಿಯ ಮಹತ್ವವಾಗಿದೆ.

ಮಹಾತ್ಮ ಅಯ್ಯಂಕಾಳಿ ಜಾತಿ ಆಧಾರಿತವಾಗಿರುವ ಬದಿಗೆ ಸರಿಸುವಿಕೆಯ ವಿರುದ್ಧ ನಡೆಸಿದ ಹೋರಾಟಗಳ ಕುರಿತು ತಿಳಿದುಕೊಂಡಿರಲ್ಲವೇ?

ದಲಿತ ವಿಭಾಗದವರಿಗೆ ವಾಹನಗಳಲ್ಲಿ ಸಂಚರಿಸಲು, ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸಲು, ಉತ್ತಮ ಬಟ್ಟೆ ಧರಿಸಲು ಹಾಗೂ ಶಿಕ್ಷಣ ಪಡೆಯಲು ಅವಕಾಶವಿಲ್ಲದಿದ್ದ ಕಾಲವು ಹಿಂದೆ ನೆಲೆನಿಂತಿತ್ತು. ಮೂಲಭೂತ ಸೌಕರ್ಯಗಳು, ಅಭಿಮಾನ, ಸಮಾನತೆ, ಸ್ವಾತಂತ್ರ್ಯ ಮೊದವಾದವುಗಳೆಲ್ಲವೂ ಇವರಿಗೆ ನಿರಾಕರಿಸಲ್ಪಟ್ಟಿದ್ದವು. ಜಾತಿಯ ಆಧಾರದಲ್ಲಿ ಈ ರೀತಿಯ ಭೇದಭಾವವು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಇದನ್ನು

ತಡೆಗಟ್ಟಲು ಬೇಕಾಗಿರುವುದು ವಿದ್ಯಾಭ್ಯಾಸ ಎಂಬುದು ಬದಿಗೆ ಸರಿಸಲ್ಪಟ್ಟವರ ಜನತೆಯ ಒಳಿತಿಗಾಗಿ ದುಡಿದ ಮಹಾನ್ ವ್ಯಕ್ತಿಗಳ ನಿಲುವಾಗಿದೆ. 'ವಿದ್ಯೆಯಿಂದ ಪ್ರಬುದ್ಧರಾಗಿ' ಎಂಬ ಸಂದೇಶವನ್ನು ನೀಡಿದ ಶ್ರೀ ನಾರಾಯಣ ಗುರು ಹಾಗು ಇತರ ನವೋತ್ಥಾನ ನಾಯಕರು ಆಧುನಿಕ ಶಿಕ್ಷಣದ ಪ್ರಚಾರಕ್ಕೆ ಒತ್ತು ನೀಡಿ ಬದಿಗೆ ಸರಿಸುವುದನ್ನು ವಿರೋಧಿಸಿ ಹೋರಾಟ ನಡೆಸಿದರು. ಕುರಿಯಕೋಸ್ ಎಲಿಯಾಸ್ ಚಾವರ, ಅಯ್ಯಾ ವೈಕುಂಠ ಸ್ವಾಮಿಗಳು, ಚಟ್ಟಂಬಿ ಸ್ವಾಮಿಗಳು, ವಕ್ಕಂ ಅಬ್ದುಲ್ ಖಾದರ್ ಮೌಲವಿ, ಪೊಯ್ಗಯಿಲ್ ಯೋಹನಾನ್, ಪಂಡಿತ್ ಕೆ.ಪಿ ಕರುಪ್ಪನ್, ದಾಕ್ಷಾಯಣಿ ವೇಲಾಯುಧನ್ ಮೊದಲಾದವರ ಚಟುವಟಿಕೆಗಳು ಇದಕ್ಕೆ ಉದಾಹರಣೆಗಳಾಗಿವೆ.


ಶ್ರೀ ನಾರಾಯಣ ಗುರು


ಕುರಿಯಕೋಸ್ ಎಲಿಯಾಸ್ ಚಾವರ


ಅಯ್ಯಾ ವೈಕುಂಠ ಸ್ವಾಮಿಗಳು


ಚಟ್ಟಂಬಿ ಸ್ವಾಮಿಗಳು


ವಕ್ಕಂ ಅಬ್ದುಲ್ ಖಾದರ್ ಮೌಲವಿ


ಪೊಯ್ಗಯಿಲ್ ಯೋಹನಾನ್


ಪಂಡಿತ್ ಕೆ.ಪಿ ಕರುಪ್ಪನ್


ದಾಕ್ಷಾಯಣಿ ವೇಲಾಯುಧನ್

*ಚಿತ್ರಗಳು 4.4*

**ಜ್ಯೋತಿರಾವ್ ಫುಲೆ** (1827 - 1890)

ದಲಿತ ಎಂಬುದು ಜಾತಿ ಮತ ಶೋಷಣೆಗೆ ಗುರಿಯಾದ ಸಮಾಜವನ್ನು ಕರೆಯುವ ಪದವಾಗಿದೆ. ಸಾಮಾಜಿಕ ಪರಿವರ್ತನೆಗಳಿಗೆ ನೇತೃತ್ವ ನೀಡಿದ್ದ ಜ್ಯೋತಿರಾವ್ ಫುಲೆಯವರು ಈ ಪದವನ್ನು ಪ್ರಥಮವಾಗಿ ಬಳಕೆ ಮಾಡಿದರು. ಜ್ಯೋತಿರಾವ್ ಫುಲೆಯವರು ಮಹಿಳೆಯರು ಹಾಗೂ ದಲಿತರ ವಿದ್ಯಾಭ್ಯಾಸಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು.


*ಚಿತ್ರ 4.5*

**ಸಾವಿತ್ರಿ ಭಾಯಿ ಫುಲೆ** (1831 - 1897)

ಭಾರತದ ಪುಣೆಯಲ್ಲಿ ಪ್ರಪ್ರಥಮವಾಗಿ ಹೆಣ್ಣು ಮಕ್ಕಳಿಗಾಗಿ ಸ್ಥಾಪಿಸಿದ ವಿದ್ಯಾಲಯದ ಮುಖ್ಯೋಪಾಧ್ಯಾಯರಾಗಿದ್ದರು. ಅವರು ಕೃಷಿಕರಿಗೆ ಮತ್ತು ಕಾರ್ಮಿಕರಿಗಾಗಿ ರಾತ್ರಿ ಕಾಲ ಪಾಠಶಾಲೆಗಳನ್ನು ಸ್ಥಾಪಿಸಿದರು. ಶಿಕ್ಷಣ ವಲಯದಲ್ಲಿ ಅವರ ಸಮಗ್ರ ಕೊಡುಗೆಗಳನ್ನು ಪರಿಗಣಿಸಿ ಪುಣೆ ವಿಶ್ವವಿದ್ಯಾನಿಲಯವನ್ನು ಸಾವಿತ್ರಿ ಭಾಯಿ ಫುಲೆ ವಿಶ್ವವಿದ್ಯಾನಿಲಯವೆಂದು ಮರುನಾಮಕರಣ ಮಾಡಲಾಗಿದೆ.


*ಚಿತ್ರ 4.6*



ಚಿತ್ರ 4.7

**ಪೆರಿಯಾರ್ ಇ.ವಿ ರಾಮಸ್ವಾಮಿ ನಾಯ್ಕರ್** (1879 - 1973)

ಸ್ವಾಭಿಮಾನ ಚಳುವಳಿಯ ಸ್ಥಾಪಕರಾದ ಇವರು ಭಾರತದ ಪ್ರಮುಖ ಜಾತಿ ವಿರುದ್ಧ ಹೋರಾಟದ ನಾಯಕರುಗಳಲ್ಲಿ ಒಬ್ಬರಾಗಿದ್ದಾರೆ. ಸಮಾಜ ಸುಧಾರಕರಾದ ಇವರು ಬ್ರಾಹ್ಮಣಾಧಿಪತ್ಯ ಆಧಾರಿತವಾದ ಸಾಮಾಜಿಕ ಭೇದ ಭಾವಗಳನ್ನು ವಿರೋಧಿಸಿದರು. ಪೆರಿಯಾರ್ ಇ. ವಿ. ರಾಮಸ್ವಾಮಿ ನಾಯ್ಕರ್ ಸ್ತ್ರೀಯರ ವಿದ್ಯಾಭ್ಯಾಸದ ಪ್ರಾಧಾನ್ಯವನ್ನು ತಿಳಿದು ಕಾರ್ಯನಿರ್ವಹಿಸಿದ ವ್ಯಕ್ತಿಯಾಗಿದ್ದಾರೆ.

ಬುಡಕಟ್ಟು ಜನತೆಯು ಕೂಡ ದಲಿತರಂತೆ ಸಾಮಾಜಿಕವಾಗಿ ಕಡೆಗಣನೆಗೆ ತುತ್ತಾದ ಇನ್ನೊಂದು ವಿಭಾಗದವರಾಗಿದ್ದಾರೆ. ಪ್ರಾಚೀನ ಕಾಲದಿಂದಲೇ ಕೆಲವು ಪ್ರತ್ಯೇಕ ಭೌಗೋಳಿಕ ವಲಯಗಳಲ್ಲಿ ಒಗ್ಗಟ್ಟಿನಿಂದ ಒಟ್ಟಾಗಿ ವಾಸವಾಗಿದ್ದರು. ಸ್ವಂತವಾದ ಜ್ಞಾನ ನಿರ್ಮಾಣ ಮಾತ್ರವಲ್ಲದೆ ಅವುಗಳನ್ನು ಬಳಸಿಕೊಂಡು ಜೀವನ ನಡೆಸುತ್ತಾರೆ. ಬುಡಕಟ್ಟು ಜನರು ತಮ್ಮ ಜೀವನಶೈಲಿಯೊಂದಿಗೆ ಕಲೆ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಂದೊಡಗೂಡಿ ಜೀವಿಸುವವರಾಗಿದ್ದಾರೆ. ಬುಡಕಟ್ಟು ಜನತೆಯ ಸಾಂಸ್ಕೃತಿಕ ಕೊಡುಗೆಗಳು ಹಿಂದಿನ ಕಾಲಗಳಿಗಿಂತಲೂ ಇಂದಿನ ಸಮಾಜದಲ್ಲಿ ಹೆಚ್ಚಿನ ಮನ್ನಣೆ ಪಡೆದಿವೆ. ಪ್ರಕೃತಿಯನ್ನು ಆಶ್ರಯಿಸಿ ಬುಡಕಟ್ಟುಗಳು ವಾಸವಾಗಿದ್ದ ಪ್ರದೇಶಗಳ ಸಂಪನ್ಮೂಲಗಳಲ್ಲಿನ ಸಂಪೂರ್ಣ ಅಧಿಕಾರ ಇವರಿಗೆ ಇತ್ತು. ಇದು ಕ್ರಮೇಣ ನಷ್ಟವಾಗುವುದರೊಂದಿಗೆ ಈ ಸಮಾಜವು ಕಡೆಗಣನೆಗೆ ಗುರಿಯಾಯಿತು.



ಚಿತ್ರ 4.8

**ವೆರಿಯರ್ ಎಲ್‌ವಿನ್** (1902 - 1964)

ಇವರು ಭಾರತೀಯ ನರವಂಶಶಾಸ್ತ್ರದಲ್ಲಿ ಪ್ರಧಾನ ಕೊಡುಗೆಗಳನ್ನು ನೀಡಿರುವ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಬುಡಕಟ್ಟು ಜನತೆಯ ಸ್ವಂತಿಗೆಯ ಜೀವನ ವಿಧಾನವನ್ನು ಸಂರಕ್ಷಿಸುವುದಕ್ಕಾಗಿ ದುಡಿದ ಇವರು ಬುಡಕಟ್ಟು ಜನರ ಕುರಿತಾಗಿರುವ ಭಾರತದ ಧೋರಣೆಗಳನ್ನು ರೂಪಿಸುವಲ್ಲಿ ಬಹಳಷ್ಟು ಪ್ರಭಾವ ಬೀರಿದ ವ್ಯಕ್ತಿಯಾಗಿದ್ದಾರೆ.

ಸಮಾಜದ ಮುಖ್ಯ ವಿಭಾಗದವರು ಉತ್ಪಾದಿಸುವ ಜ್ಞಾನ, ಕಲೆ, ಸಂಸ್ಕೃತಿಗಳೇ ಮೊದಲಾದವುಗಳು ಮಾತ್ರ ಉತ್ತಮ ಮೌಲ್ಯವಿರುವವುಗಳೆಂಬ ತಿಳುವಳಿಕೆಯು ಅನೇಕ ಕಾಲಗಳಿಂದ ನೆಲೆನಿಂತಿತ್ತು. ಆದರೆ ಬುಡಕಟ್ಟು ಜನರು ಕಲೆ, ಭಾಷೆ, ಸಾಹಿತ್ಯ, ವೈದ್ಯಕೀಯ, ಕೃಷಿ ಮೊದಲಾದ ವಲಯಗಳಲ್ಲಿ ಪ್ರಕೃತಿಯನ್ನು ಬಹಳ ಹತ್ತಿರದಿಂದ ಅರಿತು ಗಳಿಸಿದ ಶ್ರೇಷ್ಠ ಜ್ಞಾನವೂ ಜನಪದ ತಿಳುವಳಿಕೆಯೂ ಸ್ವಂತವಾಗಿ ಇರುವವರಾಗಿದ್ದಾರೆ. ತಮ್ಮದೇ ಆದ ಸಂಗೀತ ಪರಂಪರೆಯುಳ್ಳ ಅನೇಕ ಬುಡಕಟ್ಟು ವಿಭಾಗದವರಿದ್ದಾರೆ.



ಚಿತ್ರ 4.9

**ಡಾ.ಎ ಅಯ್ಯಪ್ಪನ್** (1905 - 1988)

ಇವರು ತ್ರಿಶೂರು ಜಿಲ್ಲೆಯ ಪವರಟ್ಟಿಯಲ್ಲಿ ಫೆಬ್ರವರಿ 5 1905ರಲ್ಲಿ ಜನಿಸಿದ ಭಾರತೀಯ ಸಂಸ್ಕೃತಿಗಳನ್ನು ಅಧ್ಯಯನ ಮಾಡಿದ ಪ್ರಮುಖ ನರ ವಂಶಶಾಸ್ತ್ರಜ್ಞರಾಗಿದ್ದಾರೆ. ಇವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ನಲ್ಲಿ ಮಲಿನೊವ್ಸ್ಕಿ ಹಾಗೂ ರೇಮಂಡ್ ಫಿರ್ತ್ ರ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನವನ್ನು ಪೂರ್ತಿಗೊಳಿಸಿದರು. ಇವರು ಕೇರಳದಲ್ಲಿರುವ ಈಳವರ ಹಾಗು ಬುಡಕಟ್ಟು ಸಮುದಾಯಗಳ ಕುರಿತಾದ ಅಧ್ಯಯನಕ್ಕೆ ಸಮಗ್ರ ಕೊಡುಗೆಗಳನ್ನು ನೀಡಿದರು.

### ನಂಜಿಯಮ್ಮ

ಪಾಲಕ್ಕಾಡ್ ಜಿಲ್ಲೆಯ ಅಟ್ಟಪ್ಪಾಡಿಯ ಇರುಳ ಪಂಗಡಕ್ಕೆ ಸೇರಿದ ನಂಜಿಯಮ್ಮ 2020 ನೇ ಸಾಲಿನ ಅತ್ಯುತ್ತಮ ಗಾಯಕಿಗಿರುವ ರಾಷ್ಟ್ರೀಯ ಚಲನಚಿತ್ರ ಪುರಸ್ಕಾರವನ್ನು ಪಡೆದರು. ನಂಜಿಯಮ್ಮನವರು ಬುಡಕಟ್ಟು ಪಂಗಡದಿಂದ ಈ ಪುರಸ್ಕಾರ ಪಡೆಯುವ ಪ್ರಥಮ ವ್ಯಕ್ತಿಯಾಗಿದ್ದಾರೆ. “ಕಳಕಾತ ಸಂದನಮೆರೆ ವೆಗು ವೊಗಾ ಪುತ್್ರ್ಯೊ್ಕ...” ಎಂದು ಆರಂಭವಾಗುವ ಪದ್ಯವನ್ನು ನಂಜಿಯಮ್ಮ ಹಾಡಿದ್ದಾರೆ.



*ಚಿತ್ರ 4.10*
*ಭಾರತದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರಿಂದ ರಾಷ್ಟ್ರೀಯ ಚಲನಚಿತ್ರ ಪುರಸ್ಕಾರವನ್ನು ನಂಜಿಯಮ್ಮ ಪಡೆಯುತ್ತಿರುವುದು.*

ಅವರಿಗೆ ವೈವಿಧ್ಯಮಯವಾದ ವಾದ್ಯೋಪಕರಣಗಳನ್ನು ತಯಾರಿಸಿ ನುಡಿಸಲಿರುವ ಸಾಮರ್ಥ್ಯವಿತ್ತು.

ಬುಡಕಟ್ಟು ಜನಾಂಗದವರ ಜೀವನಕ್ಕೆ ಸಂಬಂಧಿಸಿದ ಕೆಳಗಿನ ಚಿತ್ರಗಳನ್ನು ನೋಡಿರಿ.



*ಪೆರೆ*



*ದುಡಿ*



*ನಾಟಿ ಕೆಲಸ*



*ದವಿಲ್*

*ಚಿತ್ರಗಳು 4.11*

ಸ್ವಂತ ಭೂಮಿಯ ಮೇಲಿರುವ ಅವರ ಹಕ್ಕು, ಶಿಕ್ಷಣದ ಅವಕಾಶ, ಪೋಷಕಾಂಶಯುಕ್ತ ಆಹಾರ, ಆರೋಗ್ಯ ಸಂರಕ್ಷಣೆ ಮೊದಲಾದ ಕಲ್ಯಾಣ ಯೋಜನೆಗಳು ಮತ್ತು ಅದನ್ನು ಖಚಿತಪಡಿಸುವ ಚಟುವಟಿಕೆಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳ ನೇತೃತ್ವದಲ್ಲಿ ನಡೆಯುತ್ತಿವೆ.

**ಬುಡಕಟ್ಟು ಜನತೆಯ ಕಲಾತ್ಮಕ ಮತ್ತು ಸಾಂಸ್ಕೃತಿಕ ಜೀವನದ ಕುರಿತು ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.**

ಸ್ತ್ರೀಯರು ಲಿಂಗ ಸ್ಥಾನಮಾನದ ಕಾರಣದಿಂದ ಕಡೆಗಣಿಸುವಿಕೆಗೆ ಒಳಗಾದ ಸಾಮಾಜಿಕ ವಿಭಾಗದವರಾಗಿದ್ದಾರೆ.

ಕೆಳಗೆ ನೀಡಿರುವ ಅನುಭವ ಟಿಪ್ಪಣಿಯನ್ನು ಓದಿರಿ...

"ಆ ಕಾಲದಲ್ಲಿ ನಾಟಕದಲ್ಲಿ ಅಭಿನಯಿಸಲು ಸ್ತ್ರೀಯರು ಲಭಿಸುತ್ತಿರಲಿಲ್ಲ. ಸ್ತ್ರೀಯರು ಅಭಿನಯ ಕ್ಷೇತ್ರಕ್ಕೆ ಬರುವುದು ಒಳಿತಲ್ಲ ಎಂಬುದು ಸಮಾಜದ ನಂಬಿಕೆಯಾಗಿತ್ತು. ನಾನು ನಾಟಕದಲ್ಲಿ ಅಭಿನಯಿಸಲು ತೀರ್ಮಾನಿಸಿದೆ. ಉತ್ತರ ಮಲಬಾರಿನ ಹಲವು ಪ್ರದೇಶಗಳಲ್ಲಿ ನಾಟಕಾಭಿನಯಕ್ಕೆ ನಾವು ಹೋಗಿದ್ದೆವು. ಮುಕ್ಕವಿನಲ್ಲಿ ನಾಟಕ ಪ್ರದರ್ಶನ ನಡೆಯುತ್ತಿದ್ದ ಸಂದರ್ಭದಲ್ಲಿ ನನಗೆ ಕಲ್ಲೇಟು ಬಿತ್ತು. ನಾಟಕದ ಸಂಭಾಷಣೆ ಹೇಳಿ ಮುಗಿಸುವ ಮೊದಲೇ ಕಲ್ಲೊಂದು ನನ್ನ ಮುಖಕ್ಕೆ ಬಡಿಯಿತು. ನಾನು ಧೃತಿಗೆಡಲಿಲ್ಲ. ನನ್ನ



ಚಿತ್ರ 4.12

ಬಾಯಿಯಲ್ಲಿ ರಕ್ತ ಹರಿಯುತ್ತಿತ್ತು. ಆದರೂ ನಾನು ಸಂಭಾಷಣೆಯೊಂದನ್ನೂ ಕೂಡ ತಪ್ಪದೆ, ಮರೆಯದೆ ಅಥವಾ ಅರ್ಧಕ್ಕೆ ನಿಲ್ಲಿಸದೆ ನಾಟಕವನ್ನು ಪೂರ್ತಿಗೊಳಿಸಿದೆನು. ಮಂಜೇರಿಯ ಮೆಲಾಕತ್ತ್‌ನಲ್ಲಿ ನಾಟಕ ಪ್ರದರ್ಶಿಸುತ್ತಿದ್ದ ವೇಳೆ ವೇದಿಕೆಯಲ್ಲಿ ನನ್ನ ಹತ್ಯೆಗೆ ಯತ್ನಿಸಲಾಯಿತು. ಯಾವುದೇ ನಟನಿಗೆ ಒಮ್ಮೆಯೂ ಈ ವಿಧದ ಅನುಭವವಾಗಿರಲಾರದು. ನಾಟಕ ಅರ್ಧದಷ್ಟು ಮುಗಿದಾಗ ನನ್ನ ತಲೆಯನ್ನು ಗುರಿಯಾಗಿರಿಸಿ ಒಂದು ಗುಂಡು ನುಗ್ಗಿ ಬಂತು. ಅದೃಷ್ಟವೆಂದೇ ಹೇಳಬೇಕು. ನಾನು ಸಂಭಾಷಣೆಯನ್ನು ಹೇಳಿ ತಲೆ ತಿರುಗಿಸಿದುದರಿಂದ ಅದು ನನ್ನ ತಲೆಯನ್ನು ಸೀಳಲಿಲ್ಲ. ಈ ವಿಧದ ಅನೇಕ ಅನುಭವಗಳನ್ನು ಎದುರಿಸಬೇಕಾಗಿ ಬಂದಿದೆ... ಈ ರೀತಿಯ ಬಿಕ್ಕಟ್ಟುಗಳೊಂದು ನಮ್ಮನ್ನು ದುರ್ಬಲಗೊಳಿಸಲಿಲ್ಲ... ಹೀಗೆಲ್ಲ ಆಯಿಷಾಳನ್ನು ಸೋಲಿಸಲು ಸಾಧ್ಯವಿಲ್ಲ".

**- ನಿಲಂಬೂರ್ ಆಯಿಷಾ**

'ಜೀವಿತತ್ತಿನುಂ ಅರಙಿನು ಇಡಯಿಲ್' (ಪುಟ 39-42)

ಕೇರಳದ ಪ್ರಸಿದ್ಧ ನಾಟಕ- ಸಿನೆಮಾ ಕಲಾವಿದೆಯಾದ ನಿಲಂಬೂರ್ ಆಯಿಷಾರವರ ಅನುಭವ ಟಿಪ್ಪಣಿಯ ಒಂದು ಭಾಗವಾಗಿದೆ.

ಯಾವೆಲ್ಲಾ ಸವಾಲುಗಳನ್ನು ಅವರಿಗೆ ಸಮಾಜದಿಂದ ಎದುರಿಸಬೇಕಾಗಿ ಬಂತು?

ಕಾರಣವೇನು?

ನಮ್ಮ ಸಮಾಜದಲ್ಲಿನ ಕಲಾ ಚಟುವಟಿಕೆಗಳಲ್ಲಿ ಮಹಿಳೆಯರು ತೊಡಗಿಸಿಕೊಳ್ಳುವುದನ್ನು ನಿಷೇಧಿಸಿದ್ದ ಕಾಲವಿತ್ತು. ಸ್ತ್ರೀ ಎಂಬ ಕಾರಣಕ್ಕಾಗಿ ಕಡೆಗಣಿಸುವಿಕೆ ಮತ್ತು ಅಸಮಾನತೆಯ ಬಹಳಷ್ಟು ಅನುಭವಗಳನ್ನು ಚರಿತ್ರೆಯಲ್ಲಿ ಕಾಣಲು ಸಾಧ್ಯವಿದೆ. ಕಲಾ ರಂಗ, ಶಿಕ್ಷಣ ಕ್ಷೇತ್ರ, ಉದ್ಯೋಗ ವಲಯ, ಮನೆ ಎಂಬೀ ಕಡೆಗಳಲ್ಲಿ ಸ್ತ್ರೀಯರು ಕೆಳಸ್ತರದ ಪದವಿಗೆ ಮಾತ್ರ ಅರ್ಹರೆಂಬ ತಪ್ಪು ತಿಳುವಳಿಕೆಯು ನಮ್ಮ ಸಮಾಜದಲ್ಲಿ ನೆಲೆ ನಿಂತಿತ್ತು.



ಚಿತ್ರ 4.13

**ಪಂಡಿತ್ ರಮಾ ಭಾಯಿ** (1858-1922)

ಹತ್ತೊಂಬತ್ತನೆಯ ಶತಮಾನದಲ್ಲಿ ಸ್ತ್ರೀಯರ ಹಕ್ಕು ಹಾಗೂ ಸಬಲೀಕರಣಕ್ಕಾಗಿ ದುಡಿದ ಭಾರತದ ಪ್ರಮುಖ ಸಮಾಜ ಸುಧಾರಕರಲ್ಲಿ ಒಬ್ಬರಾಗಿದ್ದಾರೆ. ಮುಖ್ಯವಾಗಿ ವಿಧವಾ ವಿದ್ಯಾಭ್ಯಾಸ ಹಾಗೂ ಕಲ್ಯಾಣ ಕಾರ್ಯಗಳಿಗಾಗಿ ದುಡಿದರು. ಭಾರತೀಯ ಸ್ತ್ರೀಯರ ಸ್ಥಿತಿಗತಿಯ ಕುರಿತು ಅಧ್ಯಯನ ಮಾಡಿ ಸಮಸ್ಯೆಗಳ ಪರಿಹಾರ ಚಟುವಟಿಕೆಗಳಿಗೆ ನೇತೃತ್ವ ನೀಡಿದರು.



*ಚಿತ್ರ 4.14*

**ಡಾ.ಪುನ್ನನ್ ಲೂಕೋಸ್**

(1886-1976)

ಭಾರತೀಯ ವಿಶ್ವವಿದ್ಯಾಲಯಗಳು ಸ್ತ್ರೀಯರಿಗೆ ಎಂ.ಬಿ.ಬಿ.ಎಸ್ ಕಲಿಕೆಗೆ ಪ್ರವೇಶ ನೀಡದಿರುವುದರಿಂದ ಲಂಡನ್ ವಿಶ್ವವಿದ್ಯಾನಿಲಯದಿಂದ ಅವರು ಆ ಪದವಿಯನ್ನು ಗಳಿಸಿದರು. ಕೇರಳದಲ್ಲಿ ಪ್ರಥಮವಾಗಿ ವೈದ್ಯಕೀಯಶಾಸ್ತ್ರದಲ್ಲಿ ಪದವಿ ಪಡೆದ ಮಹಿಳೆ ಎಂದು ಪ್ರಸಿದ್ಧಿ ಪಡೆದರು. ತಿರುವಾಂಕೂರು ಲೆಜಿಸ್ಲೇಟಿವ್ ಅಸೆಂಬ್ಲಿಯ ಪ್ರಥಮ ಮಹಿಳಾ ಸದಸ್ಯರಾಗಿದ್ದರು.



*ಚಿತ್ರ 4.15*

**ಇ. ಕೆ. ಜಾನಕಿ ಅಮ್ಮಾಳ್**

(1897-1984)

ಕೇರಳದ ತಲಶ್ಶೇರಿಯಲ್ಲಿ ಜನಿಸಿದ ಇವರು ವಿಶ್ವ ಪ್ರಸಿದ್ಧ ಸಸ್ಯ ಶಾಸ್ತ್ರಜ್ಞೆ. ಕೊಯಂಬತ್ತೂರಿನ ಕಬ್ಬು ಸಂಶೋಧನಾ ಕೇಂದ್ರದಲ್ಲಿ ಕಬ್ಬಿನ ಅಧಿಕ ಇಳುವರಿ ನೀಡುವ ಮಿಶ್ರ ತಳಿಯೊಂದನ್ನು ಇವರು ಅಭಿವೃದ್ಧಿಪಡಿಸಿದರು. ಬೊಟಾನಿಕಲ್ ಸರ್ವೇ ಆಫ್ ಇಂಡಿಯಾದ ಪ್ರಥಮ ಡೈರೆಕ್ಟರ್ ಜನರಲ್ ಆಗಿದ್ದರು. ಇವರಿಗೆ 1977 ರಲ್ಲಿ ರಾಷ್ಟ್ರವು ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು.

ಮಹಿಳೆಯರ ಹೊರತಾಗಿ ಟ್ರಾನ್ಸ್‌ಜೆಂಡರ್ಸ್ ವಿಭಾಗದವರು ಕೂಡ ಲಿಂಗ ಸ್ಥಾನಮಾನ ಹೆಸರಿನಲ್ಲಿ ಬೇದಭಾವವನ್ನು ಅನುಭವಿಸುತ್ತಿದ್ದಾರೆ.

**ಟ್ರಾನ್ಸ್ ಜೆಂಡರ್** (Transgender)

ಟ್ರಾನ್ಸ್ ಜೆಂಡರ್ ಎಂದರೆ ಹುಟ್ಟಿನ ಸಂದರ್ಭದಲ್ಲಿ ಆ ವ್ಯಕ್ತಿ ಗುರುತಿಸಲ್ಪಟ್ಟ ಲಿಂಗಕ್ಕೆ ಸೇರದ ವ್ಯಕ್ತಿಯಾಗಿದ್ದಾರೆ. ಇದರಲ್ಲಿ ಟ್ರಾನ್ಸ್ ಪುರುಷರು ಮತ್ತು ಟ್ರಾನ್ಸ್ ಸ್ತ್ರೀಯರು ಸೇರಿದ್ದಾರೆ.

Clause (K) of Section 2, TPPR Act, 2019)

**ಅಲ್ಪಸಂಖ್ಯಾತರು** (Minority)

ಒಟ್ಟು ಜನಸಂಖ್ಯೆಯಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ವಿಭಾಗಗಳು ಎಂಬ ಅರ್ಥದಲ್ಲಿ ಪ್ರಯೋಗಿಸುವ ಪದವಾಗಿದೆ.

ಚಿತ್ರವನ್ನು ನಿರೀಕ್ಷಿಸಿರಿ.



*ಚಿತ್ರ 4.16*

ನಮ್ಮ
ಸುತ್ತಮುತ್ತಲಿರುವ
ಜಗತ್ತು ಎಲ್ಲರಿಗೂ
ಸಮಾನವಾಗಿ ಲಭ್ಯವೇ?

## ಇಚ್ಛಾಶಕ್ತಿಯ ವಿಜಯ

ತಿರುವನಂತಪುರಂ : ಕತ್ತಲೆ ತುಂಬಿದ ಬದುಕನ್ನು ದೃಢಸಂಕಲ್ಪದಿಂದ ಎದುರಿಸಿಕೊಂಡು ಹುಸ್ನ ಮತ್ತು ಫೆಬಿನ್ ತರಗತಿ ಕೋಣೆಯಲ್ಲಿ ಪ್ರಕಾಶವನ್ನು ಬೀರುತ್ತಿದ್ದಾರೆ. ಗಾಲಿ ಕುರ್ಚಿಯು ಒಂದು ಪರಿಮಿತಿಯಲ್ಲ ಎಂದು ಸಾಧಿಸಿ ತೋರಿಸಿ ಶೇಕ್ಸ್ ಪಿಯರ್ ಹಾಗು ಶೆಲ್ಲಿಯ ಎಲ್ಲಾ ಪಾಠಗಳನ್ನು ಬಹಳ ಸೊಗಸಾಗಿ ತಿರುವನಂತಪುರದ ಶಾರದಾದೇವಿ ಕಲಿಸಿಕೊಡುತ್ತಿದ್ದಾರೆ. ದೈಹಿಕ ಸವಾಲುಗಳನ್ನು ಮೆಟ್ಟಿ ನಿಂತು ಜೀವನದಲ್ಲಿ ಯಶಸ್ಸು ಗಳಿಸಿದ ಈ ಮೂವರು ಅಧ್ಯಾಪಕರು ವಿಶೇಷಚೇತನರಿಗೆ ಮಾದರಿಯಾಗಿದ್ದಾರೆ. ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದ, ಗಾಲಿ ಕುರ್ಚಿಯ ಸಹಾಯವಿಲ್ಲದೆ ಚಲಿಸಲಾಗದ ಶಾರದಾದೇವಿ ಸದಾ ಕಲಿಕೆಯಲ್ಲಿ ಮಂಚೂಣಿಲ್ಲಿದ್ದರು. ಫೆಬಿನ್ ಮರಿಯಂ ಜೋಸ್‌ಗೆ ತನ್ನ ಹದಿನೇಳನೆಯ ವಯಸ್ಸಿನಲ್ಲಿ ದೃಷ್ಟಿ ನಷ್ಟವಾಯಿತು. ದೃಷ್ಟಿಹೀನತೆಯು ಜೀವನದಲ್ಲಿ ಸಾಧನೆ ಮಾಡಲು ಅಡ್ಡಿಯಲ್ಲವೆಂದು ನಿರೂಪಿಸಿದ ಹೆಲೆನ್ ಕೆಲ್ಲರ್ ಫೆಬಿನ್‌ನ ಹೀರೋ ಆಗಿದ್ದರು. ನೆಡುಮಂಗಾಡ್ ಅಯ್ಲಿಕೋಡ್ ಸ್ವದೇಶಿಯಾದ ಹುಸ್ನಳಿಗೆ ಹದಿನಾರು ವರ್ಷಗಳ ತನಕ ದೃಷ್ಟಿ ಇತ್ತು. ಕುಟುಂಬದ ಬೆಂಬಲದೊಂದಿಗೆ ಕಲಿಕೆಯಲ್ಲಿ ಜಾಣರಾಗಿದ್ದ ಈ ಮೂವರು ಸವಾಲುಗಳನ್ನು ದಾಟಿ ಸರಕಾರಿ ಕಾಲೇಜುಗಳಲ್ಲಿ ಆಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮೇಲೆ ನೀಡಿರುವುದು ದೈಹಿಕ ಸವಾಲುಗಳನ್ನು ಮೀರಿ ಜೀವನದಲ್ಲಿ ಯಶಸ್ಸು ಸಾಧಿಸಿದ ಮೂರು ವ್ಯಕ್ತಿಗಳ ಕುರಿತಾದ ವಾರ್ತೆಯಾಗಿದೆ.

ದೈಹಿಕ ವಿಶೇಷತೆಗಳಿಂದಾಗಿ ಸಮಾಜದ ಇತರ ಜನ ವಿಭಾಗದೊಂದಿಗೆ ಹೋಲಿಸಿದರೆ ವಿಶೇಷಚೇತನರು ತಮ್ಮ ದೈನಂದಿನ ಜೀವನದಲ್ಲಿ ವಿಭಿನ್ನ ಸವಾಲುಗಳನ್ನು ಎದುರಿಸುವವರಾಗಿದ್ದಾರೆ. ವಿವಿಧ ರೀತಿಯ ವಿಭಾಗದ ವಿಶೇಷಚೇತನರು ವಿವಿಧ ರೀತಿಯ ಕಡೆಗಣಿಸುವಿಕೆಗೆ ಗುರಿಯಾಗುತ್ತಾರೆ.

ದೈಹಿಕವಾಗಿ ಸುದೃಢರಾದವರಿಗೆ ಮಾತ್ರ ಸಹಾಯ ಮತ್ತು ಪ್ರಯೋಜನವಾಗುವ ರೀತಿಯಲ್ಲಿ ಸಾಮಾನ್ಯವಾಗಿ ಕಟ್ಟಡ, ಸಂಚಾರ ಮಾರ್ಗ, ಪುಸ್ತಕ ಇತ್ಯಾದಿಗಳನ್ನು ವಿನ್ಯಾಸಗೊಳಿಸಿರುತ್ತಾರೆ. ಈ ರೀತಿಯ ಕಡೆಗಳಲ್ಲಿ ವಿಭಿನ್ನ ರೀತಿಯ ವಿಶೇಷಚೇತನರು ಅನುಭವಿಸಬೇಕಾಗಿಬರುವ ತೊಂದರೆಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ.

**ವಿಶೇಷಚೇತನರ ಹಕ್ಕು ಸಂರಕ್ಷಣಾ ನಿಯಮ 2016**

ವಿಶೇಷಚೇತನರಿಗೆ ತಾರತಮ್ಯರಹಿತ, ಸಮಾನತೆಗೆ ಒತ್ತು ನೀಡುವ ಮತ್ತು ಸಮಾನ ಸಾಮಾಜಿಕ ಜೀವನವನ್ನು ಖಚಿತಪಡಿಸಿಕೊಳ್ಳಲು ಕಾಯಿದೆಯನ್ನು ಜಾರಿಗೊಳಿಸಲಾಗಿದೆ.

**ಪಾರಾಲಿಂಪಿಕ್ಸ್**

ವಿಶೇಷಚೇತನರಾದ ಕ್ರೀಡಾಳುಗಳಿಗಾಗಿ ಅಂತರಾಷ್ಟ್ರೀಯ ಕ್ರೀಡಾಕೂಟವಾದ ಪಾರಾಲಿಂಪಿಕ್ಸ್ 1948ರಲ್ಲಿ ಆರಂಭವಾಯಿತು.

## ತಾರತಮ್ಯವನ್ನು ತಡೆಯಲು ಸಂವಿಧಾನ

**ಡಾ. ಬಿ. ಆರ್. ಅಂಬೇಡ್ಕರ್** (1891-1956)

ಭಾರತೀಯ ಸಂವಿಧಾನದ ಶಿಲ್ಪಿಗಳು ದಲಿತರ ಸಾಮಾಜಿಕ, ರಾಷ್ಟ್ರೀಯ ಉನ್ನತಿಗಾಗಿ ಸದೃಢರಾಗಿ ಕಾರ್ಯನಿರ್ವಹಿಸಿದರು. ಅವರು ಭಾರತದಲ್ಲಿ ಕಡೆಗಣಿಸಲ್ಪಟ್ಟವರ ಸಮಸ್ಯೆಗಳನ್ನು ತಮ್ಮ ಬರಹಗಳ ಮೂಲಕ ಪ್ರಸ್ತುತಪಡಿಸುವುದರೊಂದಿಗೆ ಕಾನೂನುಗಳ ಮೂಲಕ ಅವರಿಗೆ ಸಂರಕ್ಷಣೆಯನ್ನು ಒದಗಿಸಲು ಪ್ರಯತ್ನಿಸಿದರು.

ಭಾರತದ ಸಂವಿಧಾನವು ಎಲ್ಲಾ ನಾಗರಿಕರಿಗೂ ಸಮಾನತೆಯನ್ನು ಖಾತರಿಪಡಿಸುತ್ತದೆ (ಅನುಚ್ಛೇದ 14).ಧರ್ಮ, ಜನಾಂಗ, ಜಾತಿ, ಲಿಂಗ ಮತ್ತು ಜನ್ಮಸ್ಥಳ ಮೊದಲಾದವುಗಳ ಹೆಸರಿನಲ್ಲಿ ಯಾವುದೇ ತಾರತಮ್ಯ ಇರಬಾರದು ಎಂದು ಸಂವಿಧಾನವು ಷರತ್ತು ವಿಧಿಸುತ್ತದೆ. (ಅನುಚ್ಛೇದ 15).

ನಮ್ಮ ಸಂವಿಧಾನವು ತಾರತಮ್ಯಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ ಯಾಕೆ?

- ತಾರತಮ್ಯವು ಸಾಮಾಜಿಕ ಪ್ರಗತಿಗೆ ಅಡ್ಡಿಯಾಗುವುದು.

- ಆರ್ಥಿಕ ಅಸಮಾನತೆ ಉಂಟು ಮಾಡುತ್ತದೆ.
- ಸುರಕ್ಷಿತವಾದ ಭೌತಿಕ ಸಂದರ್ಭಗಳನ್ನು ನಿಷೇಧಿಸುವುದು
- 
- 
- 

**ಭಾರತದಲ್ಲಿ ಜಾತಿ ತಾರತಮ್ಯದ ವಿರುದ್ಧವಿರುವ ಕಾನೂನುಗಳು ಹಾಗು ಅನುಚ್ಛೇದ(ವಿಧಿ)ಗಳು ಯಾವುವು ಎಂದು ಕಂಡುಕೊಂಡು ಪಟ್ಟಿಯನ್ನು ವಿಸ್ತರಿಸಿರಿ.**

- ಸಂವಿಧಾನದ 14 ಮತ್ತು 15 ಅನುಚ್ಛೇದಗಳು.
- 
- 
- 

ಪ್ರಗತಿಗೆ ಅಡ್ಡಿಯಾಗುವ ಸಾಮಾಜಿಕ ವ್ಯವಸ್ಥೆಗಳು, ಪರಿಸರ, ರಾಜಕೀಯ, ಆರ್ಥಿಕ ಘಟಕಗಳು ಕೆಲವು ವಿಭಾಗಗಳನ್ನು ಕಡೆಗಣಿಸಲು ಕಾರಣವಾಗಿರುವುದು.

ಸಮಾಜದ ಅಭಿವೃದ್ಧಿಗೆ ಮತ್ತು ಸಮಾನ ನ್ಯಾಯದೊಂದಿಗೆ ಪ್ರಜಾಸತ್ತಾತ್ಮಕ ಸಮಾಜದ ಅಸ್ತಿತ್ವಕ್ಕಾಗಿ ಎಲ್ಲರನ್ನು ಪರಿಗಣಿಸುವ ಸಾಮಾಜಿಕ ಸ್ಥಿತಿ ಅತ್ಯಗತ್ಯವೆಂದು ತಿಳಿದುಕೊಂಡಿರಲ್ಲವೇ?

**ಎಲ್ಲರನ್ನೂ ಪರಿಗಣಿಸಿಕೊಂಡಿರುವ ಸಮಾಜದ ಅಸ್ತಿತ್ವಕ್ಕಾಗಿ ಅಗತ್ಯವಾದ ಸಾಮಾಜಿಕ ಅಂಶಗಳನ್ನು ಕಂಡುಕೊಂಡು ಪಟ್ಟಿಯನ್ನು ವಿಸ್ತರಿಸೋಣ.**

- ಸಮಾನತೆಗಾಗಿ ಇನ್ನಷ್ಟು ಧೋರಣೆಗಳು.
- ತಾರತಮ್ಯವನ್ನು ತಡೆಗಟ್ಟಲು ಹೆಚ್ಚಿನ ಕಾನೂನುಗಳು.
- ಎಲ್ಲರಿಗೂ ಉತ್ತಮ ಶಿಕ್ಷಣದ ಲಭ್ಯತೆ.
- ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ಸಮಾನತೆಯನ್ನು ಖಚಿತಪಡಿಸಲು ಕ್ರಮ ಕೈಗೊಳ್ಳುವುದು.
- 
- 

ಪ್ರಜಾಸತ್ತಾತ್ಮಕ ಕ್ರಮದಲ್ಲಿ ಎಲ್ಲರ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿದರೆ ಮಾತ್ರ ಬದಿಗೆ ಸರಿಸುವಿಕೆಯನ್ನು ತಡೆದು ಸಮಾನ ನ್ಯಾಯವನ್ನು ಪಡೆಯಲು ಸಾಧ್ಯವಾಗಬಹುದು.

## ಮುಂದುವರಿದ ಚಟುವಟಿಕೆಗಳು

- ಜ್ಯೋತಿರಾವ್ ಫುಲೆ, ಸಾವಿತ್ರಿಭಾಯಿ ಫುಲೆ, ಪೆರಿಯಾರ್, ಅಂಬೇಡ್ಕರ್ ಮುಂತಾದವರ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ ಅವರ ಕಿರು ಜೀವನ ಚರಿತ್ರೆಯನ್ನು ತಯಾರಿಸಿರಿ. ಶಿಕ್ಷಣದ ಮೂಲಕ ಕಡೆಗಣಿಸುವಿಕೆಯನ್ನು ಅವಗಣಿಸಿ ಯಶಸ್ಸನ್ನು ಸಾಧಿಸಿದ ವ್ಯಕ್ತಿಗಳ ಕುರಿತಾದ ಮಾಹಿತಿಗಳನ್ನು ಅಧ್ಯಾಪಕರ ಸಹಾಯದೊಂದಿಗೆ ಕಂಡುಕೊಳ್ಳಿರಿ.
- ಕೃಷಿ - ಕಲೆ - ಸಾಂಸ್ಕೃತಿಕ ಮತ್ತು ವೈಜ್ಞಾನಿಕ ರಂಗಗಳಲ್ಲಿ ಬುಡಕಟ್ಟು ಜನತೆಯ ಸ್ವಂತಿಕೆಯ ಕೊಡುಗೆಗಳನ್ನು ಕಂಡುಕೊಂಡು ಡಿಜಿಟಲ್ ಆಲ್ಬಂ ತಯಾರಿಸಿರಿ.
- ಬುಡಕಟ್ಟು ಜನರ ವಾಸಸ್ಥಳಗಳಿಗೆ ಭೇಟಿ ನೀಡಿ ಅವರ ಸಾಮಾಜಿಕ ಜೀವನವನ್ನು ತಿಳಿಯಿರಿ. ಈ ಸೂಚಕಗಳನ್ನು ಬಳಸುವಿರಲ್ಲವೇ?
    - ❖ ಪೂರ್ವಜರ ಜೀವನ
    - ❖ ಕಲೆ, ಕೃಷಿ, ಆಹಾರ
    - ❖ ಸಮಕಾಲೀನ ಜೀವನ.
    - ❖
- ತಾರತಮ್ಯವನ್ನು ಮೀರಿನಿಂತ ಮಹಿಳೆಯರ ಜೀವನ ಅನುಭವಗಳನ್ನು ವಿವರಿಸುವ ಜೀವನ ಚರಿತ್ರೆ, ಆತ್ಮಕಥೆ, ಅನುಭವ ಟಿಪ್ಪಣಿ ಇತ್ಯಾದಿಗಳನ್ನು ನಿಮ್ಮ ಶಾಲಾ ಗ್ರಂಥಾಲಯದಿಂದ ಅಥವಾ ಸಮೀಪದ ಗ್ರಂಥಾಲಯಗಳಿಂದ ಸಂಗ್ರಹಿಸಿ ತರಗತಿಯಲ್ಲೊಂದು ಪುಸ್ತಕ ಪ್ರದರ್ಶನವನ್ನು ಆಯೋಜಿಸಿರಿ. ಪ್ರದರ್ಶಿಸಿದ ಪ್ರತಿಯೊಂದು ಪುಸ್ತಕದ ಬಗ್ಗೆ ಕಿರು ಟಿಪ್ಪಣಿಗಳನ್ನು ತಯಾರಿಸಿರಿ.
- ವಿಶೇಷಚೇತನರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ವ್ಯಕ್ತಿಗಳೊಂದಿಗೆ ನೇರವಾಗಿ ಅಥವಾ ಡಿಜಿಟಲ್ ಮಾಧ್ಯಮದ ಮೂಲಕ ಚರ್ಚೆಯನ್ನು ಆಯೋಜಿಸಿರಿ. ವಿವಿಧ ಕ್ಷೇತ್ರಗಳಲ್ಲಿ ವಿಶೇಷಚೇತನರು ಅನುಭವಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರವನ್ನು ಕೇಳಿ ತಿಳಿಯಿರಿ.
- ವಿಶೇಷಚೇತನರಿಗೆ ಎಲ್ಲರಂತೆ ಎಲ್ಲಾ ಕಡೆಗಳಿಗೂ ತಲುಪಲು ಪ್ರಸ್ತುತ ಪರಿಸ್ಥಿತಿಯಲ್ಲಿ ಯಾವೆಲ್ಲಾ ಬದಲಾವಣೆಗಳು ಆಗಬೇಕಾಗಿದೆ? ವಿಶೇಷಚೇತನರಾದ ವಿದ್ಯಾರ್ಥಿಗಳ ಭೌತಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಸುಧಾರಿಸಲು ಸಾಧ್ಯವಾಗುವ ರೀತಿಯ ಕಿರು ಯೋಜನೆಗಳನ್ನು ನಿಮ್ಮ ಶಾಲಾ ಪರಿಸರವನ್ನು ಗಮನದಲ್ಲಿಟ್ಟು ತಯಾರಿಸಿ. ಅಧ್ಯಾಪಕರ ಸಹಾಯದೊಂದಿಗೆ ಸ್ಥಳೀಯ ಆಡಳಿತ ಸಂಸ್ಥೆಗೆ ಸಲ್ಲಿಸಿರಿ.
    - ❖ ಗಾಲಿ ಕುರ್ಚಿಗಳ ಸಂಚಾರಕ್ಕೆ ಸಹಾಯಕವಾದ ರ್‍ಯಾಂಪ್(Ramp)ಗಳು
    - ❖ ಕೈಗಂಬಿ(Hand Rail)

- ❖ ಬ್ರೈಲ್ ಲಿಪಿ ಮತ್ತು ಆಡಿಯೋ ಲೈಬ್ರೆರಿ
- ❖ ವಿಶೇಷಚೇತನ ಸ್ನೇಹಿ ಶೌಚಾಲಯಗಳು

- ತಾರತಮ್ಯಗಳಿಗೆ ಪ್ರತಿಕ್ರಿಯಿಸಬೇಕಾದುದು ಹೇಗೆ? ಈ ಕೆಳಗಿನ ಚರ್ಚಾ ಸೂಚಕಗಳ ಆಧಾರದಲ್ಲಿ ತರಗತಿಯಲ್ಲಿ ಚರ್ಚೆಯನ್ನು ಆಯೋಜಿಸಿರಿ.
  - ❖ ಕಡೆಗಣಿಸಲ್ಪಟ್ಟವರು ಸ್ವಯಂ ತಾವೇ ಮುಂದೆ ಬರಬೇಕು
  - ❖ ಸಮಾಜದ ಒಗ್ಗಟ್ಟಾದ ಪ್ರಯತ್ನಗಳಿಂದ ಕಡೆಗಣಿಸಲ್ಪಟ್ಟವರ ಸಮಸ್ಯೆಗಳನ್ನು ಫಲಪ್ರದವಾಗಿ ಪರಿಹರಿಸಬಹುದು.
  - ❖ ಸರಕಾರದ ವ್ಯವಸ್ಥೆಗಳನ್ನು ಬಳಸಿಕೊಂಡು ಸೂಕ್ತವಾಗಿ ವ್ಯವಹರಿಸಲು ಸಾಧ್ಯವಾಗಬಹುದು.

ಹೆಚ್ಚಿನ ಸೂಚಕಗಳನ್ನು ಸೇರಿಸಿರಿ.




# ನಮ್ಮ ಭೂಮಿ



*ಚಿತ್ರ 5.1*

## ನಾನು ಭೂಮಿ

ನಾನು ಕೋಟ್ಯಂತರ ವರ್ಷಗಳ ಕಾಲ ಉರಿಯುತ್ತಿದ್ದ ಗೋಲವಾಗಿದ್ದೆ. ಬಳಿಕ ನಿರಂತರ ಸುರಿದ ಮಳೆಯಿಂದಾಗಿ ನಾನು ತಂಪಾದೆ. ಮುಂದೆ ದಶಲಕ್ಷ ವರ್ಷಗಳು ಕಳೆದು ನನ್ನಲ್ಲಿ ಜೀವಜಾಲಗಳು ಉಂಟಾದವು. ಸೌರವ್ಯೂಹದಲ್ಲಿರುವ ಗ್ರಹಗಳಲ್ಲಿ ನನ್ನಲ್ಲಿ ಮಾತ್ರವೇ ಜೀವವು ನೆಲೆ ನಿಂತಿರುವುದು ಎಂಬುದು ನಿಮಗೆ ತಿಳಿದಿದೆಯಲ್ಲವೇ? ನಿಮಗೆ ಜೀವಿಸಲು ಬೇಕಾದವುಗಳೆಲ್ಲವೂ ನನ್ನಲ್ಲಿದೆ. ಉಸಿರಾಟಕ್ಕೆ ಬೇಕಾದ ವಾಯು, ಕುಡಿಯಲು ಹಾಗೂ ಇತರ ಅಗತ್ಯಗಳಿಗಿರುವ ನೀರು, ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ಮಣ್ಣು ಹೀಗೆ ಎಲ್ಲವೂ.

ಭೂಮಿಯ ಆತ್ಮಕಥೆಯನ್ನು ಓದಿದಿರಲ್ಲವೇ?

ನದಿಗಳು, ಬೆಟ್ಟಗಳು, ಕಣಿವೆಗಳು ಮತ್ತು ಬಯಲುಗಳಿಂದ ಕೂಡಿರುವ ಭೂಮಿಯ ಮೇಲ್ಮೈ ಎಷ್ಟು ಸುಂದರವಾಗಿದೆ. ಆದರೆ ಭೂಮಿಯ ಆಂತರಿಕ ಭಾಗವೋ? ಭೂಮಿಯ ಆಂತರಿಕ ಭಾಗದ ರಹಸ್ಯಗಳಿಗೆ ನಾವು ಪ್ರವೇಶಿಸುವ.

## ಆಂತರಿಕ ಭಾಗಕ್ಕೆ...

ಭೂಮಿಯ ಮೇಲ್ಮೈಯ ಉಷ್ಣತೆಯ ಕುರಿತು ನಮಗೆ ಗೊತ್ತಿದೆಯಲ್ಲವೇ? ಆದರೆ ಆಂತರಿಕ ಭಾಗದಲ್ಲಿನ ಉಷ್ಣತೆಯು ಅತಿ ಕಠಿಣವಾಗಿದೆ. ಆಂತರಿಕ ಕೇಂದ್ರ ಭಾಗದ ಉಷ್ಣತೆಯು ಸರಿಸುಮಾರು 5500 ಡಿಗ್ರಿ ಸೆಲ್ಸಿಯಸ್ ಆಗಿದೆ. 100 ಡಿಗ್ರಿ ಸೆಲ್ಸಿಯಸ್ಸಿನಲ್ಲಿ ನೀರು ಕುದಿಯುವುದು ಎಂದು ನಿಮಗೆ ತಿಳಿದಿದೆಯಲ್ಲವೇ? 5500ಡಿಗ್ರಿ ಸೆಲ್ಸಿಯಸ್ ಉಷ್ಣತೆಯ ಬಗ್ಗೆ ನಿಮಗೆ ಊಹಿಸಲು ಸಾಧ್ಯವೇ? ನೀವು ಗಣಿಗಳ ಬಗ್ಗೆ ಕೇಳಿರುವಿರಾ? ಅವುಗಳಲ್ಲಿ ಅತ್ಯಂತ ಹೆಚ್ಚು ಆಳವಿರುವ ಗಣಿಯ ಆಳ ಎಷ್ಟಾಗಿರಬಹುದು ಎಂದು ತಿಳಿದಿರುವಿರಾ. ಅದು ಸುಮಾರು 12 ಕಿಲೋಮೀಟರ್! ಮಾನವನಿಗೆ ಇಷ್ಟು ದೂರದವರೆಗೆ ತಲುಪಲು ಕೇವಲ ಯಂತ್ರಗಳು ಹಾಗೂ ಸುರಕ್ಷಾ ಉಪಕರಣಗಳ ಸಹಾಯಗಳಿಂದ ಆಗಿದೆ. ಭೂಮಿಯ ಕೇಂದ್ರಭಾಗಕ್ಕಿರುವ ದೂರ ಸುಮಾರು 6371 ಕಿಲೋಮೀಟರ್ ಆಗಿದೆ. ಹೀಗಿರುವಾಗ ಮಾನವನಿಗೆ ಭೂಮಿಯ ಆಂತರಿಕ ಭಾಗಗಳಿಗೆ ನೇರ ಹೋಗಿ ಮಾಹಿತಿಗಳನ್ನು ತಿಳಿಯಲು ಸಾಧ್ಯವೇ? ಹಾಗಾದರೆ ಭೂಮಿಯ ಆಂತರಿಕ ಭಾಗದ ಮಾಹಿತಿಗಳು ನಮಗೆ ಹೇಗೆ ಲಭಿಸುವುದು? ಭೂಮಿಯ ಆಂತರಿಕ ಭಾಗದ ಮಾಹಿತಿಗಳು ಕೆಲವು ವೈಜ್ಞಾನಿಕ ಅಧ್ಯಯನ ಮತ್ತು ನಿಗಮನಗಳ ಆಧಾರದಲ್ಲಿ ರೂಪುಗೊಂಡಿರುವವುಗಳಾಗಿವೆ. ಅವುಗಳು ಯಾವುವು ಎಂದು ನೋಡುವ.


- ಅಗ್ನಿ ಪರ್ವತ ಸ್ಫೋಟದ ಮೂಲಕ ಭೂಮಿಯ ಮೇಲ್ಮೈಗೆ ಬಂದು ಸೇರುವ ವಸ್ತುಗಳನ್ನು ಪರಿಶೋಧಿಸುವುದರಿಂದ
- ಗಣಿಗಳಿಂದ ಸಂಗ್ರಹಿಸುವ ಮಾಹಿತಿಗಳ ಆಧಾರದಲ್ಲಿ
- ಭೂಕಂಪದ ಸಂದರ್ಭದಲ್ಲಿ ಉಂಟಾಗುವ ತರಂಗಗಳ ಚಲನೆಯನ್ನು ವಿಶ್ಲೇಷಿಸುವುದರ ಮೂಲಕ

## ಭೂಮಿಯ ರಚನೆ

ಚಿತ್ರವನ್ನು ನಿರೀಕ್ಷಿಸಿರಿ.


ಭೂಮಿಯ ಆಂತರಿಕ ಭಾಗದ ಕುರಿತು ಯಾವೆಲ್ಲಾ ಮಾಹಿತಿಗಳನ್ನು ನಿಮಗೆ ತಿಳಿದುಕೊಳ್ಳಲು ಸಾಧ್ಯವಾಗುವುದು. ನೀವು ಕಂಡುಕೊಂಡವುಗಳನ್ನು ಈ ಕೆಳಗೆ ದಾಖಲಿಸಿರಿ.

- ಭೂಮಿಯ ಆಂತರಿಕ ಭಾಗವನ್ನು ವಿವಿಧ ಪದರುಗಳಾಗಿ ವಿಂಗಡಿಸಲಾಗಿದೆ.
- ಅತ್ಯಂತ ಹೊರಭಾಗದಲ್ಲಿರುವ ಪದರು ಭೂವಲ್ಕವಾಗಿದೆ (Crust)
- 



ಭೂಮಿಯ ವಿವಿಧ ಪದರುಗಳು ಯಾವುವು ಎಂದು ಕಂಡುಕೊಂಡಿರಲ್ಲವೇ? ನೀಡಿರುವ ಚಿತ್ರವನ್ನು (5
ವಿವರಣೆಯನ್ನು ಓದಿ ಭೂಮಿಯ ಆಂತರಿಕ ಭಾಗದ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಟಿಪ್ಪಣಿ

ಚಿತ್ರ 5.2



*ಚಿತ್ರ 5.3*

### ಭೂ ವಲ್ಕ(Crust)

ಭೂ ವಲ್ಕವು ಭೂಮಿಯ ಅತಿ ಹೊರಗಿನ ಪದರು ಮತ್ತು ಸಾಮಾನ್ಯವಾಗಿ ತೆಳುವಾದ ಪದರಾಗಿದೆ. ಈ ಪದರು ಘನ ರೂಪದಲ್ಲಿರುವ ಶಿಲೆಗಳಿಂದ ನಿರ್ಮಿತವಾಗಿದೆ.

ಭೂ ವಲ್ಕದಲ್ಲಿ ಭೂಖಂಡಗಳ ಭೂ ವಲ್ಕ ಹಾಗೂ ಸಾಗರಗಳ ಭೂ ವಲ್ಕ ಎಂಬ ಎರಡು ಭಾಗಗಳಿವೆ. ಭೂಖಂಡಗಳ ಭೂ ವಲ್ಕದ ದಪ್ಪ ಹೆಚ್ಚಾಗಿದೆ. ಇದರ ಸರಾಸರಿ ದಪ್ಪ 30 ಕಿಲೋಮೀಟರುಗಳಾಗಬಹುದು. ಪರ್ವತ ಪ್ರದೇಶದಲ್ಲಿ ಭೂಖಂಡ ಭೂವಲ್ಕದ ದಪ್ಪ ಸುಮಾರು 70 ಕಿಲೋ ಮೀಟರುಗಳಾಗಿವೆ. ಆದರೆ ಸಾಗರಗಳ ಭೂವಲ್ಕದ ದಪ್ಪ ಸರಿ ಸುಮಾರು 5 ಕಿಲೋ ಮೀಟರುಗಳಾಗಿವೆ.

### ಮೇಂಟಲ್ (Mantle)

ಮೇಂಟಲ್ ಭೂ ವಲ್ಕದ ಕೆಳಭಾಗದಲ್ಲಿರುವ ಪದರಾಗಿದೆ. ಇದು ಸುಮಾರು ದಪ್ಪ ಹೆಚ್ಚಾಗಿರುವ ಪದರ ಭಾಗವಾಗಿದೆ. ಸುಮಾರು 2900 ಕಿಲೋಮೀಟರಿನವರೆಗೆ ವ್ಯಾಪಿಸಿದೆ.


ಭೂ ವಲ್ಕ ಮತ್ತು ಮೆಂಟಲ್ ನ ಮೇಲ್ಭಾಗ ಸೇರಿರುವ ಭಾಗವನ್ನು ಶಿಲಾಮಂಡಲ (Lithosphere) ಎನ್ನುವರು. ಶಿಲಾಮಂಡಲದ ಕೆಳಭಾಗದಲ್ಲಿ ಶಿಲಾ ಪದಾರ್ಥಗಳು ಕರಗಿ(ಮ್ಯಾಗ್ಮ) ಅರ್ಧ ದ್ರವರೂಪದಲ್ಲಿ ಕಂಡು ಬರುವ ಭಾಗವನ್ನು ಎಸ್ತನೋಸ್ಫಿಯರ್(Asthenosphere) ಎಂದು ಕರೆಯುತ್ತಾರೆ. ಎಸ್ತನೋಸ್ಫಿಯರ್ ನ ಕೆಳಭಾಗವು ಘನಾವಸ್ಥೆಯಲ್ಲಿ ಇದೆ.

### ತಿರುಳು (Core)

ತಿರುಳು ಮೇಂಟಲ್‌ನ ಕೆಳಭಾಗದಲ್ಲಿರುವ ಭಾಗವಾಗಿದೆ. ತಿರುಳಿಗೆ ಹೊರ ತಿರುಳು ಹಾಗೂ ಒಳ ತಿರುಳು ಎಂಬ ಎರಡು ಭಾಗಗಳಿವೆ. ಹೊರ ತಿರುಳು ದ್ರವ ರೂಪದಲ್ಲೂ ಒಳ ತಿರುಳು ಘನ ರೂಪದಲ್ಲೂ ಇದೆ. ಪ್ರಧಾನವಾಗಿ ನಿಕ್ಕಲ್(Ni), ಕಬ್ಬಿಣ(Fe) ಎಂಬೀ ಲೋಹಗಳಿಂದ ರಚಿಸಲ್ಪಟ್ಟಿರುವುದರಿಂದ ತಿರುಳನ್ನು ನಿಫೆ(NIFE) ಎಂದು ಕರೆಯುತ್ತಾರೆ. ಒಳ ತಿರುಳಿನ ಉಷ್ಣತೆಯು ಸುಮಾರು 5,500 ಡಿಗ್ರಿ ಸೆಲ್ಸಿಯಸ್ ಆಗಿದೆ.

**ಭೂಮಿಯ ಆಂತರಿಕ ಭಾಗದ ಪ್ರತಿಯೊಂದು ಪದರುಗಳ ವಿಶೇಷತೆಗಳನ್ನು ಸೇರಿಸಿಕೊಂಡು ಕೆಳಗೆ ಕೊಟ್ಟಿರುವ ಆಶಯ ಚಿತ್ರ (5.4) ಪೂರ್ತಿಗೊಳಿಸಿರಿ.**

### ಭೂಮಿಯ ರಚನೆ - ವಿಶೇಷತೆಗಳು




*ಚಿತ್ರ 5.4*

ಭೂಮಿಯ ಆಂತರಿಕ ಭಾಗದ ಪ್ರತಿಯೊಂದು ಪದರಿನ ವಿಶೇಷತೆಗಳ ಪಟ್ಟಿಯನ್ನು ಕೆಳಗೆ ನೀಡಲಾಗಿದೆ. ಅವುಗಳಲ್ಲಿ ಸರಿಯಾದವುಗಳ ಮುಂದೆ ‘ ☺ ’ ಎಂದೂ ತಪ್ಪಾದವುಗಳ ಮುಂದೆ ‘ ☹ ’ ಎಂದು ಚಿತ್ರಿಸಿರಿ.

| | |
|---|---|
| • ಭೂಮಿಯ ಅತಿ ಹೊರಗಿನ ಪದರಾದ ಭೂವಲ್ಕವು ಶಿಲೆಗಳಿಂದ ರಚಿಸಲ್ಪಟ್ಟ ಗಟ್ಟಿಯಾಗಿರುವ ಭಾಗವಾಗಿದೆ. | |
| • ಭೂ ವಲ್ಕ ಮತ್ತು ಮೇಂಟಲಿನ ಮೇಲ್ಭಾಗವನ್ನು ಒಟ್ಟಾಗಿ ಶಿಲಾಮಂಡಲ ಎನ್ನುವರು. | |
| • ಶಿಲಾ ಪದಾರ್ಥವು(ಮ್ಯಾಗ್ಮ) ಕರಗಿ ಅರ್ಧ ದ್ರವ ರೂಪದಲ್ಲಿ ಕಂಡುಬರುವ ಭಾಗವು ಎಸ್ತನೋಸ್ಫಿಯರ್ ಆಗಿದೆ. | |
| • ಹೊರ ತಿರುಳು ದ್ರವಾವಸ್ಥೆಯಲ್ಲಿದೆ. | |
| • ಭೂಖಂಡ ಭೂವಲ್ಕ, ಸಾಗರ ಭೂವಲ್ಕ ಎಂಬಿವುಗಳು ಭೂವಲ್ಕದ ಎರಡು ಭಾಗಗಳಾಗಿವೆ. | |
| • ತಿರುಳಿಗೆ ನಿಫೆ ಎಂಬ ಹೆಸರಿದೆ. | |

**ಚಾರ್ಟಿನಲ್ಲಿ ಭೂಮಿಯ ರಚನೆಯನ್ನು ಚಿತ್ರಿಸಿ ಪ್ರತಿಯೊಂದು ಪದರುಗಳಿಗೂ ವಿವಿಧ ಬಣ್ಣವನ್ನು ನೀಡಿ ವಿಶೇಷತೆಗಳನ್ನು ಬರೆದು ತರಗತಿಯಲ್ಲಿ ಪ್ರದರ್ಶಿಸಿರಿ.**

**'ಭೂಮಿಯ ಆಂತರಿಕ ವಿಶೇಷತೆಗಳು' ಎಂಬ ಶೀರ್ಷಿಕೆಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಸೇರಿಸಿ ಅಭ್ಯಾಸ ಪುಸ್ತಕದಲ್ಲಿ ಬರೆಯಿರಿ.**

ಭೂಮಿಯ ಆಂತರಿಕ ಭಾಗದ ಕುರಿತಾದ ಪ್ರಾಥಮಿಕ ಮಾಹಿತಿಗಳನ್ನು ತಿಳಿದಿರಲ್ಲವೆ. ಇನ್ನು ಭೂಮಿಯನ್ನು ಆವರಿಸಿರುವ ವಾತಾವರಣದ ಕುರಿತಾದ ಕೆಲವು ಮಾಹಿತಿಗಳನ್ನು ತಿಳಿಯಲು ಪ್ರಯತ್ನಿಸುವ.

## ಭೂಮಿಯ ವಾತಾವರಣ

ಭೂಮಿ ಮತ್ತು ವಾತಾವರಣವು ಜೀವಜಾಲಗಳಿಗೆ ನೆಲೆ ನಿಲ್ಲಲು ಸಾಧ್ಯವಾಗುವ ವಿಧದಲ್ಲಿ ಬದಲಾವಣೆಗೊಂಡದ್ದು ಹೇಗೆ?

ಭೂಮಿಯ ರಚನೆಯ ಕಾಲದಲ್ಲಿ ಸುಟ್ಟು ಉರಿಯುವ ರೀತಿಯಲ್ಲಿದ್ದ ಭೂಮಿಯ ಮೇಲ್ಮೈ ನಿಧಾನವಾಗಿ ತಣಿಯಲು ಕೋಟ್ಯಂತರ ವರ್ಷಗಳೇ ಬೇಕಾಯಿತು. ಈ ಪ್ರಕ್ರಿಯೆಯ ಮೂಲಕ ಭೂಮಿಯ ಆಂತರಿಕ ಭಾಗದಲ್ಲಿದ್ದ ಅನಿಲಗಳು ಹೊರಬಂದವು.

ಕ್ರಮೇಣ ಭೂಮಿಯ ಸುತ್ತಲೂ ಅನೇಕ ಅನಿಲಗಳು ಇರುವ ವಾಯುವಿನ ಒಂದು ಕವಚ ಉಂಟಾಯಿತು. ಭೂಮಿಯನ್ನು ಆವರಿಸಿರುವ ಈ ಅನಿಲಗಳ ಹೊದಿಕೆಯು ವಾತಾವರಣವಾಗಿದೆ. ಸಸ್ಯಗಳ ಹುಟ್ಟಿನೊಂದಿಗೆ ದ್ಯುತಿ ಸಂಶ್ಲೇಷಣೆಯ ಪರಿಣಾಮವಾಗಿ ವಾತಾವರಣವು ಓಕ್ಸಿಜನ್‌ನಿಂದ ಸಮೃದ್ಧವಾಯಿತು.

ನೈಟ್ರೋಜನ್, ಓಕ್ಸಿಜನ್, ಕಾರ್ಬನ್ ಡೈಓಕ್ಸೈಡ್ ಮೊದಲಾದವುಗಳು ವಾತಾವರಣದಲ್ಲಿರುವ ಅನಿಲಗಳಾಗಿವೆ. ಇದಲ್ಲದೆ ಇತರ ಅನಿಲಗಳು, ಧೂಳಿನ ಕಣಗಳು ಹಾಗು ಜಲಾಂಶವು ವಾತಾವರಣದಲ್ಲಿವೆ. ವಾತಾವರಣದಲ್ಲಿ ಅಡಕವಾಗಿರುವ ವಿವಿಧ ಅನಿಲಗಳು ಯಾವುವೆಂದೂ ಅವು ಎಷ್ಟು ಅಳತೆಯಲ್ಲಿ ಕಂಡುಬರುವುದು ಎಂದು ತಿಳಿದುಕೊಳ್ಳೋಣ.


## ವಾತಾವರಣದ ಸಂರಚನೆ (Composition of the Atmosphere)

ವಾತಾವರಣವು ಭೂಮಿಯ ಮೇಲ್ಮೈಯಿಂದ ಸುಮಾರು ಹತ್ತು ಸಾವಿರ ಕಿಲೋಮೀಟರ್ ಎತ್ತರದವರೆಗಿರುತ್ತದೆ. ಆದರೆ ವಾತಾವರಣದ ವಾಯುವಿನ ಶೇಕಡ 97 ಭಾಗವು ಭೂಮಿಯ ಮೇಲ್ಮೈಯಿಂದ ಸುಮಾರು 29 ಕಿಲೋ ಮೀಟರ್ ಎತ್ತರದವರೆಗೆ ವ್ಯಾಪಿಸಿಕೊಂಡಿರುವುದೆಂದು ಲೆಕ್ಕ ಹಾಕಲಾಗಿದೆ.ಎತ್ತರವು ಹೆಚ್ಚಾದಂತೆ ಅನಿಲಗಳ ಪ್ರಮಾಣವು ಕಡಿಮೆಯಾಗುತ್ತದೆ.

ಮಾನವನಿಗೂ ಇತರ ಜೀವಜಾಲಗಳಿಗೂ ಪ್ರಾಣವಾಯುವಾದ ಓಕ್ಸಿಜನ್ ಸಸ್ಯಗಳ ಅಸ್ತಿತ್ವಕ್ಕೆ ಅಗತ್ಯವಾದ ಕಾರ್ಬನ್ ಡೈ ಆಕ್ಸೈಡ್ ಲಭಿಸುವುದು ವಾತಾವರಣದಿಂದಾಗಿದೆ. ಭೂಮಿಯಲ್ಲಿ ಜೀವವನ್ನು ನೆಲೆ ನಿಲ್ಲಿಸುವಲ್ಲಿ ಈ ಎರಡು ಅನಿಲಗಳು ಪ್ರಧಾನ ಪಾತ್ರ ವಹಿಸುತ್ತವೆ.

**ಓಕ್ಸಿಜನ್, ಕಾರ್ಬನ್ ಡೈ ಆಕ್ಸೈಡ್ ಅನಿಲಗಳಲ್ಲದೆ ವಾತಾವರಣದಲ್ಲಿರುವ ಇತರ ಅನಿಲಗಳು ಯಾವುವು? ಚಿತ್ರ (5.5) ನಿರೀಕ್ಷಿಸಿ ಕಂಡುಕೊಳ್ಳಿರಿ.**

## ವಾತಾವರಣದ ಅನಿಲಗಳು




*ಚಿತ್ರ 5.5*

ಚಿತ್ರ 5.5 ನ್ನು ನಿರೀಕ್ಷಿಸಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಿರಿ.

- ವಾತಾವರಣದ ವಾಯುವಿನಲ್ಲಿ ಅತಿ ಹೆಚ್ಚಾಗಿರುವ ಅನಿಲ ಯಾವುದು?
- ನೈಟ್ರೋಜನ್ ಮತ್ತು ಓಕ್ಸಿಜನ್ ಒಟ್ಟು ಎಷ್ಟು ಶೇಕಡ ವಾತಾವರಣದ ಸಂರಚನೆಯಲ್ಲಿ ವ್ಯಾಪಿಸಿಕೊಂಡಿದೆ?

ಸೂರ್ಯತಾಪದಿಂದ ಭೂಮಿಯ ಮೇಲ್ಮೈಯಲ್ಲಿರುವ ಜಲ ನೀರಾವಿಯಾಗಿ ವಾತಾವರಣವನ್ನು ತಲುಪುವ ಪ್ರಕ್ರಿಯೆಯು ಭಾಷ್ಪೀಕರಣ(Evaporation)ವಾಗಿದೆ. ಭೂಮಿಯ ಮೇಲ್ಮೈಯಿಂದ ಸುಮಾರು 90 ಕಿಲೋಮೀಟರ್ ವರೆಗೆ ಮಾತ್ರವೇ ನೀರಾವಿ ಇರುವುದು.

ಅನಿಲಗಳು, ನೀರಾವಿ ಮಾತ್ರವಲ್ಲದೆ ಧೂಳಿನ ಕಣಗಳು ವಾತಾವರಣದ ಭಾಗವಾಗಿವೆ. ಧೂಳಿನ ಕಣಗಳು ಭೂಮಿಯ ಮೇಲ್ಮೈಗೆ ತಾಗಿಕೊಂಡಿರುವ ವಾತಾವರಣ ಭಾಗದಲ್ಲಿ ಸಾಮಾನ್ಯವಾಗಿ ಕಂಡುಬರುವುದು. ವಾತಾವರಣದಲ್ಲಿರುವ ಸೂಕ್ಷ್ಮ ಧೂಳಿನ ಕಣಗಳನ್ನು ಕೇಂದ್ರೀಕರಿಸಿ ನೀರಾವರಿಯ ಘನೀಕರಣ ಪ್ರಕ್ರಿಯೆಯ ಮೂಲಕ ಮೋಡಗಳು ರೂಪುಗೊಳ್ಳುತ್ತವೆ. ಆದ್ದರಿಂದ ಇವುಗಳನ್ನು ಘನೀಕರಣ ಕೇಂದ್ರಗಳೆಂದು (Hygroscopic nuclei) ಕರೆಯುತ್ತಾರೆ.

ಧೂಳಿನ ಕಣಗಳು ಯಾವೆಲ್ಲಾ ರೀತಿಯಲ್ಲಿ ವಾತಾವರಣವನ್ನು ಸೇರುತ್ತವೆ ಎಂದು ನೋಡುವ.

- ಬೀಸುವ ಗಾಳಿಯಿಂದೇಳುವ ಧೂಳು.
- ಅಗ್ನಿ ಪರ್ವತಗಳ ಸ್ಫೋಟದ ಮೂಲಕ.
- ಉಲ್ಕಾ ಶಿಲೆಗಳು ಹೊತ್ತಿ ಉರಿಯುವುದರಿಂದ.
-

ವಾತಾವರಣವು ಭೂಮಿಯಲ್ಲಿರುವ ಜೀವಜಾಲಗಳ ಅಸ್ತಿತ್ವಕ್ಕೆ ಯಾವೆಲ್ಲಾ ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ ಎಂದು ನೋಡಿರಿ.

- ವಾತಾವರಣದ ವಿದ್ಯಮಾನಗಳಿಗೆ ಕಾರಣವಾಗುವುದು.
- ಹಾನಿಕಾರಕವಾದ ಸೂರ್ಯ ಕಿರಣಗಳಿಂದ ರಕ್ಷಿಸುತ್ತದೆ.
-

**ಕೆಳಗೆ ನೀಡಿರುವ ಪ್ರತಿಯೊಂದು ಘಟಕವು ಭೂಮಿಯಲ್ಲಿ ಜೀವವನ್ನು ನೆಲೆ ನಿಲ್ಲಿಸುವಲ್ಲಿ ಹೇಗೆ ಪ್ರಯೋಜನಕಾರಿಯಾಗಿದೆ ಎಂದು ಬರೆಯಿರಿ.**

| | |
|---|---|
| ವಾತಾವರಣದ ವಾಯು → | |
| ವಾತಾವರಣದ ಜಲಾಂಶ → | |
| ವಾತಾವರಣದ ಧೂಳಿನ ಕಣಗಳು → | |

ಜೀವಜಾಲಗಳ ಅಸ್ತಿತ್ವಕ್ಕೆ ವಾತಾವರಣಕ್ಕಿರುವ ಪ್ರಾಧಾನ್ಯವು ಬಹುದೊಡ್ಡದಾಗಿದೆ ಎಂದು ತಿಳಿದಿರಲ್ಲವೇ? ಹೀಗಿರುವ ವಾತಾವರಣವು ಮಲಿನಗೊಂಡರೆ ಆಗಬಹುದಾದ ಪರಿಣಾಮದ ಕುರಿತು ಯೋಚಿಸಿ ನೋಡಿರಿ.

ಯಾವೆಲ್ಲಾ ರೀತಿಯಲ್ಲಿ ವಾತಾವರಣವು ಮಲಿನವಾಗುವುದು?

ವಾತಾವರಣ ಮಲಿನವಾಗುವ ಸ್ಥಿತಿಯನ್ನು ಯಾವ ಹೆಸರಿನಿಂದ ಕರೆಯುತ್ತಾರೆ?

ವಾತಾವರಣದ ವಾಯುವಿನ ಘಟಕದಲ್ಲಿ ಬದಲಾವಣೆಯನ್ನು ಉಂಟುಮಾಡುವ ಹೊಗೆ,ವಿಷಕಾರಿ ಅನಿಲಗಳು ಹಾಗು ಇತರ ರಾಸಾಯನಿಕ ಪದಾರ್ಥಗಳು ವಾಯುವಿನಲ್ಲಿ ಬೆರೆಯುವುದರಿಂದ ವಾತಾವರಣವು ಮಲಿನವಾಗುತ್ತದೆ.

ಚಿತ್ರಗಳನ್ನು (5.6) ನಿರೀಕ್ಷಿಸಿರಿ...







*ಚಿತ್ರಗಳು 5.6*

ವಾತಾವರಣದ ಮಲಿನೀಕರಣಕ್ಕೆ ಕಾರಣವಾಗುವ ಚಟುವಟಿಕೆಗಳು ಯಾವುವು? ಪಟ್ಟಿ ತಯಾರಿಸಿರಿ.

- 
- 
- 

ಕೈಗಾರಿಕಾ ನಗರಗಳಲ್ಲಿ ವಾತಾವರಣದ ಮಲಿನೀಕರಣದ ಅಳತೆ ಹೆಚ್ಚಾಗಲು ಕಾರಣವೇನು?

### ಆಮ್ಲ ಮಳೆ

ಕಲ್ಲಿದ್ದಲು, ಪೆಟ್ರೋಲಿಯಂ ಇಂಧನಗಳು ಹಾಗು ಡೀಸೆಲ್ ಮೊದಲಾದವುಗಳು ಉರಿಯುವಾಗ ಕಾರ್ಬನ್ ಡೈ ಓಕ್ಸೈಡ್, ಸಲ್ಫರ್ ಡೈ ಓಕ್ಸೈಡ್ ಮೊದಲಾದವುಗಳು ವಾತಾವರಣವನ್ನು ಸೇರುವುದು. ಅವುಗಳು ಮಳೆ ನೀರಿನೊಂದಿಗೆ ವಿಲೀನವಾಗಿ ನೀರು ಆಮ್ಲ ಸ್ವಭಾವವನ್ನು ಪಡೆದು ಭೂಮಿಗೆ ತಲುಪುವುದು. ಮಳೆ ನೀರಿನ pH ಮೌಲ್ಯವು 5 ಕ್ಕಿಂತ ಕಡಿಮೆಯಾದಲ್ಲಿ ಅದನ್ನು ಆಮ್ಲ ಮಳೆಯಾಗಿ ಪರಿಗಣಿಸಲಾಗುವುದು. ಶುದ್ಧ ಜಲದ pH ಮೌಲ್ಯವು 7 ಆಗಿದೆ.

## ಹೊಗೆ ಮಂಜು (Smog)



*ಚಿತ್ರ 5.7*

ಹೊಗೆ (smoke) ಮತ್ತು ಮಂಜು (fog) ಸೇರಿ ಹೊಗೆ ಮಂಜು ರೂಪುಗೊಳ್ಳುತ್ತದೆ. ಕೈಗಾರಿಕೆಗಳು, ನಿರ್ಮಾಣ ಚಟುವಟಿಕೆಗಳು, ವಾಹನಗಳು, ಕೃಷಿ ಬೆಳೆಗಳ ಅವಶಿಷ್ಟಗಳನ್ನು ಉರಿಸುವುದು ಇತ್ಯಾದಿ ಚಟುವಟಿಕೆಗಳ ಮೂಲಕ ಉಂಟಾಗುವ ಹೊಗೆ ಹಾಗು ಧೂಳಿನ ಕಣಗಳು ವಾತಾವರಣದಲ್ಲಿ ತುಂಬಿಕೊಳ್ಳುತ್ತವೆ. ಇವು ಮಂಜಿನೊಂದಿಗೆ ಬೆರೆತು ಹೊಗೆ ಮಂಜು ರೂಪಗೊಳ್ಳುತ್ತದೆ. ಪಕ್ಷಪಾತ, ಹೃದ್ರೋಗ, ಶ್ವಾಸಕೋಶದ ರೋಗಗಳು ಇತ್ಯಾದಿ ಹೆಚ್ಚಾಗಲು ವಾಯು ಮಲಿನೀಕರಣ ಕಾರಣವಾಗುವುದೆಂದು ಹಲವು ಅಧ್ಯಯನಗಳು ಸೂಚಿಸುತ್ತವೆ.

ವಾತಾವರಣದ ಮಲಿನೀಕರಣ ಯಾವೆಲ್ಲಾ ವಿಧದಲ್ಲಿ ಉಂಟಾಗುತ್ತದೆ ಹಾಗೂ ಅವು ಉಂಟು ಮಾಡುವ ಪರಿಣಾಮಗಳೇನೆಂದು ತಿಳಿದಿರಲ್ಲವೇ?

### ಪರಿಹಾರಗಳು ಹಲವು

**ವಾತಾವರಣದ ಮಲಿನೀಕರಣವನ್ನು ತಡೆಯಲು ನಾವೇನು ಮಾಡಬಹುದು? ಕೆಳಗೆ ನೀಡಿರುವ ಚಿತ್ರಗಳನ್ನು (5.8) ನಿರೀಕ್ಷಿಸಿ ಕಂಡುಕೊಂಡ ವಿಚಾರಗಳಿಂದ ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.**





*ಚಿತ್ರಗಳು 5.8*

ವಾತಾವರಣದ ಸಂರಚನೆಯ ಕುರಿತು ನಾವು ಇದುವರೆಗೆ ಚರ್ಚಿಸಿದೆವಲ್ಲವೇ?

ಇನ್ನು ವಾತಾವರಣದ ರಚನೆಯು ಹೇಗಿರುವುದೆಂದು ನೋಡುವ.

## ವಾತಾವರಣದ ರಚನೆ

ಉಷ್ಣತೆಯಲ್ಲಿ ಉಂಟಾಗುವ ವ್ಯತ್ಯಾಸಕ್ಕೆ ಅನುಗುಣವಾಗಿ ವಾತಾವರಣವನ್ನು ಐದು ಪದರುಗಳಾಗಿ ವರ್ಗೀಕರಿಸಲಾಗಿದೆ. ಕೆಳಗೆ ನೀಡಿರುವ ಚಿತ್ರ (5.9) ನನ್ನು ನಿರೀಕ್ಷಿಸಿ ವಾತಾವರಣದ ಪದರುಗಳನ್ನು ಪಟ್ಟಿ ಮಾಡಿರಿ.




*ಚಿತ್ರ 5.9*

## ವಾತಾವರಣದ ಪದರುಗಳು

- ಟ್ರೋಪೋಸ್ಪಿಯರ್
-
-
-
-

ವಾತಾವರಣದ ಪದರುಗಳು ಯಾವುವು ಎಂದು ಕಂಡುಕೊಂಡು ಪಟ್ಟಿ ಮಾಡಿದಿರಲ್ಲವೇ? ಇನ್ನು ಪ್ರತಿಯೊಂದು ಪದರಿನ ವಿಶೇಷತೆಗಳನ್ನು ತಿಳಿದುಕೊಳ್ಳುವ.

### ಟ್ರೋಪೋಸ್ಪಿಯರ್

ಇದು ವಾತಾವರಣದ ಅತ್ಯಂತ ಕೆಳಗಿರುವ ಪದರಾಗಿದೆ. ಭೂಮಿಯ ಮೇಲ್ಮೈಯಿಂದ ಸರಾಸರಿ 13 ಕಿಲೋಮೀಟರ್‌ಗಳಷ್ಟು ಎತ್ತರದವರೆಗೆ ವ್ಯಾಪಿಸಿಕೊಂಡಿರುವುದು. ಧ್ರುವ ಪ್ರದೇಶದಲ್ಲಿ ಸುಮಾರು 8 ಕಿಲೋಮೀಟರ್ ಹಾಗೂ ಭೂಮಧ್ಯ ರೇಖಾ ಪ್ರದೇಶದಲ್ಲಿ 18 km ಎತ್ತರದಲ್ಲಿರುವುದು.

ಭೂಮಧ್ಯ ರೇಖಾ ಪ್ರದೇಶಗಳಲ್ಲಿ ಉಷ್ಣತೆಯು ಹೆಚ್ಚಾಗಿರುವುದರಿಂದ ಈ ಪದರಿನಲ್ಲಿ ಧೂಳಿನ ಕಣಗಳು ಹಾಗೂ ನೀರಾವಿಯು ಹೆಚ್ಚಾಗಿರುವುದು. ಇದಲ್ಲದೆ ಮೋಡ ರೂಪೀಕರಣ,ಮಳೆ ಮಂಜು ಗಾಳಿ ಮುಂತಾದ ವಿದ್ಯಮಾನಗಳು ವಾತಾವರಣದ ಈ ಪದರಿನಲ್ಲಿ ಉಂಟಾಗುತ್ತವೆ.

ಭೂಮಿಯ ಮೇಲ್ಭಾಗದಿಂದ ಪ್ರತಿ 165 ಮೀಟರ್ ಉನ್ನತಿಗೇರುವಾಗ ವಾತಾವರಣದ ಉಷ್ಣತೆಯು ಒಂದು ಡಿಗ್ರಿ ಸೆಲ್ಸಿಯಸ್ ಎಂಬ ರೀತಿಯಲ್ಲಿ ಕಡಿಮೆಯಾಗುವುದು ಎಂಬುದು ಟ್ರೋಪೋಸ್ಪಿಯರಿನ ಪ್ರಧಾನ ವಿಶೇಷತೆಯಾಗಿದೆ. ಇದನ್ನು ಕ್ರಮವಾಗಿ ತಾಪನಷ್ಟದರ (Normal Lapse Rate) ಎಂದು ಕರೆಯುತ್ತಾರೆ.

**ಟ್ರೋಪೋಸ್ಪಿಯರನ್ನು ವಾತಾವರಣದ ಅತಿ ಪ್ರಧಾನ ಪದರು ಎಂದು ಕರೆಯಲು ಕಾರಣವೇನು?**
**ಊಟಿ, ಮೂನ್ನಾರ್, ಕೊಡೈಕೆನಾಲ್ ಮುಂತಾದ ಉನ್ನತ ಪ್ರದೇಶಗಳಲ್ಲಿ ತಂಪು ಅನುಭವಕ್ಕೆ ಬರಲು ಕಾರಣವೇನು?**


### ಸ್ಟ್ರೆಟೋಸ್ಪಿಯರ್

ಇದು ಟ್ರೋಪೋಸ್ಪಿಯರಿನ ಮೇಲ್ಭಾಗದಲ್ಲಿರುವ ಪದರಾಗಿದೆ. ಭೂಮಿಯಿಂದ ಸುಮಾರು 50 ಕಿಲೋಮೀಟರ್ ಎತ್ತರದವರೆಗೆ ವ್ಯಾಪಿಸಿಕೊಂಡಿದೆ. ಸ್ಟ್ರೆಟೋಸ್ಪಿಯರಿನ ನಿಶ್ಚಿತ ಉನ್ನತಿಯನ್ನು ದಾಟುವಾಗ ಉಷ್ಣತೆಯು ಹೆಚ್ಚಾಗುವುದು. ಸ್ಟ್ರೆಟೋಸ್ಪಿಯರಿನಲ್ಲಿ ಓಝೋನ್ ಪದರವಿದೆ. ಇದು ಭೂಮಿಯ ಮೇಲ್ಮೈಯಿಂದ ಸುಮಾರು 25 ಕಿಲೋಮೀಟರ್ ಎತ್ತರದಲ್ಲಿರುವುದಾಗಿದೆ.

### ಓಝೋನ್ - ಭೂಮಿಯ ರಕ್ಷಾ ಕವಚ

ವಾತಾವರಣದಲ್ಲಿರುವ ಓಝೋನ್ ಪದರವು ಸೂರ್ಯನಿಂದ ಬರುವ ಹಾನಿಕಾರಕವಾದ ಅಲ್ಟ್ರಾವಯಲೆಟ್ ಕಿರಣಗಳನ್ನು ತಡೆದು ಭೂಮಿಯನ್ನು ಸಂರಕ್ಷಿಸುವುದು. ಹೆಚ್ಚಿನ ಪ್ರಮಾಣದಲ್ಲಿ ಅತಿನೇರಳೆ(ಅಲ್ಟ್ರಾವಯಲೆಟ್) ಕಿರಣಗಳು ಭೂಮಿಯ ಮೇಲ್ಮೈಯನ್ನು ತಲುಪಿದರೆ ಅದು ಜೀವಜಾಲಗಳಿಗೆ ಹಾನಿಕಾರಕವಾಗಿ ಬಾಧಿಸುವುದಲ್ಲದೆ ಭೂಮಿಯ ಆವಾಸ ವ್ಯವಸ್ಥೆಗಳನ್ನು ದೋಷಕರವಾಗಿ ಬಾಧಿಸಬಹುದು.

ಅಲ್ಟ್ರಾ ವಯಲೆಟ್ ಕಿರಣಗಳು ಭೂಮಿಯಲ್ಲಿ ಏನೆಲ್ಲಾ ದೋಷಗಳನ್ನು ಉಂಟುಮಾಡುತ್ತವೆ?




### ಓಝೋನ್ ದಿನ

ಪ್ರತಿ ವರ್ಷವೂ ಸೆಪ್ಟೆಂಬರ್ 16ನ್ನು ವಿಶ್ವ ಓಝೋನ್ ದಿನವನ್ನಾಗಿ ಆಚರಿಸುತ್ತಿದ್ದೇವೆ.

ಓಝೋನ್ ಪದರನ್ನು ಸಂರಕ್ಷಿಸುವುದರ ಅವಶ್ಯಕತೆಯ ಕುರಿತು ಜನರಲ್ಲಿ ಜಾಗೃತಿಯನ್ನುಂಟುಮಾಡಲು ಮತ್ತು ಓಝೋನಿನ ಕ್ಷಯಿಸುವಿಕೆಗೆ ಕಾರಣವಾಗುವ ಉತ್ಪನ್ನಗಳ ಉಪಯೋಗವನ್ನು ನಿಯಂತ್ರಿಸುವುದು ಮೊದಲಾದವುಗಳ ಕುರಿತು ಅರಿವು ಮೂಡಿಸುವುದು ಈ ದಿನಾಚರಣೆಯ ಉದ್ದೇಶವಾಗಿದೆ.

**ಓಝೋನ್ ದಿನಾಚರಣೆಯ ಭಾಗವಾಗಿ ಯಾವೆಲ್ಲಾ ಕಾರ್ಯಕ್ರಮಗಳನ್ನು ತರಗತಿಯಲ್ಲಿ ಹಾಗೂ ಶಾಲೆಯಲ್ಲಿ ನಡೆಸಬಹುದು? ಚರ್ಚಿಸಿರಿ.**

## ಮೆಸೋಸ್ಫಿಯರ್

ಸ್ಟ್ರೆಟೋಸ್ಫಿಯರಿನ ಮೇಲ್ಭಾಗದಲ್ಲಿ ಸುಮಾರು 50 ರಿಂದ 80 ಕಿಲೋಮೀಟರ್ ಉನ್ನತಿಯ ವರೆಗೆ ಮೆಸೋಸ್ಫಿಯರ್ ವ್ಯಾಪಿಸಿಕೊಂಡಿದೆ. ಈ ಪದರಿನಲ್ಲಿ ಎತ್ತರ ಹೆಚ್ಚಾದಂತೆ ಉಷ್ಣತೆಯು ಕಡಿಮೆಯಾಗುವ ವಿದ್ಯಮಾನವು ಕಂಡುಬರುತ್ತದೆ.ಭೂಮಿಯ ಮೇಲ್ಭಾಗದಿಂದ ಸುಮಾರು 80 ಕಿಲೋಮೀಟರ್ ಎತ್ತರಕ್ಕೆ ತಲುಪುವಾಗ ತಾಪಮಾನವು ಮೈನಸ್ 100 (-100) ಡಿಗ್ರಿ ಸೆಲ್ಸಿಯಸಿಗೆ ಕಡಿಮೆಯಾಗುವುದು. ವಾತಾವರಣದ ಅತಿ ಕಡಿಮೆ ಉಷ್ಣತೆಯು ಇಲ್ಲಿ ಅನುಭವಕ್ಕೆ ಬರುತ್ತದೆ. ಭೂಮಿಯ ವಾತಾವರಣಕ್ಕೆ ತಲುಪುವ ಹೆಚ್ಚಿನ ಉಲ್ಕೆಗಳು ಉರಿದು ಭಸ್ಮವಾಗುವುದು ಈ ಮಂಡಲದಲ್ಲಾಗಿದೆ.

### ಥರ್ಮೋಸ್ಪಿಯರ್

ಥರ್ಮೋಸ್ಪಿಯರ್ ಮೆಸೋಸ್ಪಿಯರಿನ ಮೇಲ್ಭಾಗದಲ್ಲಿ ಸುಮಾರು 80 ರಿಂದ 400 ಕಿಲೋಮೀಟರ್ ಎತ್ತರದವರೆಗೆ ವ್ಯಾಪಿಸಿಕೊಂಡಿರುವ ವಾತಾವರಣದ ಪದರಾಗಿದೆ . ಎತ್ತರಕ್ಕೆ ಹೋದಂತೆ ಉಷ್ಣತೆಯು ಗಣನೀಯವಾಗಿ ಹೆಚ್ಚಾಗುತ್ತದೆ. ಥರ್ಮೋಸ್ಪಿಯರಿನ ಕೆಳ ಭಾಗವನ್ನು ಅಯನೋಸ್ಪಿಯರ್ ಎಂದು ಕರೆಯುತ್ತಾರೆ.

**ಅಯನೋಸ್ಪಿಯರ್**

ವಾತಾವರಣದ ಸುಮಾರು 80 ರಿಂದ 400 ಕಿಲೋಮೀಟರಿನ ವರೆಗಿನ ಎತ್ತರದಲ್ಲಿ ಅಲ್ಟ್ರಾವಯಲೆಟ್,ಎಕ್ಸ್-ರೇ ಗಳಂತಹ ತೀಕ್ಷ್ಣವಾದ ಸೂರ್ಯ ಕಿರಣಗಳು (ಕ್ಷ-ಕಿರಣಗಳು) ಅನಿಲಗಳ ಅಣುಗಳನ್ನು ಅಯಾನುಗಳಾಗಿ ಪರಿವರ್ತಿಸುತ್ತವೆ. ಈ ಪ್ರಕ್ರಿಯೆಯನ್ನು ಅಯೋನಿಕರಣವೆಂದೂ ಈ ಪದರನ್ನು ಅಯನೋಸ್ಪಿಯರೆಂದೂ ಕರೆಯುತ್ತಾರೆ. ಅಯೋನುಗಳಿಗೆ ವಿದ್ಯುತನ್ನು ತಮ್ಮ ಮೂಲಕ ಹಾದು ಹೋಗಲು ಬಿಡುವ ಸಾಮರ್ಥ್ಯವಿದೆ. ರೇಡಿಯೋ ತರಂಗಗಳು ವಿದ್ಯುತ್ ಕಾಂತಿಯ ತರಂಗಗಳಾಗಿವೆ. ಆದುದರಿಂದ ಈ ವಲಯವು ರೇಡಿಯೋ ತರಂಗಗಳ ದೀರ್ಘ ದೂರಪ್ರಸಾರವನ್ನು ಸಾಧ್ಯವಾಗಿಸುತ್ತದೆ.

### ಎಕ್ಸೋಸ್ಪಿಯರ್

ಎಕ್ಸೋಸ್ಪಿಯರ್ ವಾತಾವರಣದ ಅತ್ಯಂತ ಮೇಲ್ಭಾಗದಲ್ಲಿರುವ ಪದರಾಗಿದೆ. 400 ಕಿಲೋಮೀಟರಿಗಿಂತಲೂ ಮೇಲೆ ಇರುವ ಎಕ್ಸೋಸ್ಪಿಯರ್ ಎಂಬ ವಾತಾವರಣದ ಪದರಿನಲ್ಲಿ ವಾಯು ಅಣುಗಳು ಕ್ರಮೇಣ ಕಡಿಮೆಯಾಗುತ್ತಾ ಬಾಹ್ಯಾಕಾಶದ ಭಾಗವಾಗುತ್ತವೆ.

**ಭೂಮಿಯ ವಾತಾವರಣದ ರಚನೆಯ ವಿಶೇಷತೆಗಳನ್ನು ಸೇರಿಸಿಕೊಂಡು ಕೆಳಗೆ ನೀಡಿರುವ ಮಾದರಿಯಲ್ಲಿ ಗುರುತಿನ ಚೀಟಿಗಳನ್ನು ತಯಾರಿಸಿರಿ.**

ವಾತಾವರಣದ ಮಂಡಲದ ಹೆಸರು

....................................................................

- ಭೂಮಿಯ ಮೇಲ್ಭಾಗದಿಂದಿರುವ ಉನ್ನತಿ
- ಉಷ್ಣತೆಯಲ್ಲಿ ಉಂಟಾಗುವ ಬದಲಾವಣೆ
- ಇತರ ವಿಶೇಷತೆಗಳು

**ವಾತಾವರಣದ ಪದರುಗಳು ಮತ್ತು ಅವುಗಳ ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಸರಿ ಹೊಂದಿಸಿ ಬರೆಯಿರಿ.**

| | |
|---|---|
| ಎಕ್ಸೋಸ್ಫಿಯರ್ | • ಉನ್ನತಿಗೆ ಅನುಗುಣವಾಗಿ ಉಷ್ಣತೆ ಹೆಚ್ಚಾಗುತ್ತದೆ. |
| ಥರ್ಮೋಸ್ಫಿಯರ್ | • ಅತ್ಯಂತ ಕನಿಷ್ಠ ಉಷ್ಣತೆ ಇರುವ ಪದರು. |
| ಮೆಸೋಸ್ಫಿಯರ್ | • ಉಲ್ಕೆಗಳು ಉರಿದು ಬೂದಿಯಾಗುತ್ತವೆ. |
| ಸ್ಟ್ರಟೋಸ್ಫಿಯರ್ | • ವಾಯು ಕಣಗಳು ಕ್ರಮೇಣ ಕಡಿಮೆಯಾಗಿ ಬಾಹ್ಯಾಕಾಶದಲ್ಲಿ ವಿಲೀನವಾಗುವುದು. |
| ಟ್ರೋಪೋಸ್ಫಿಯರ್ | • ಎತ್ತರಕ್ಕೆ ಅನುಗುಣವಾಗಿ ಒಂದು ನಿಶ್ಚಿತಮಾನದಲ್ಲಿ ಉಷ್ಣತೆ ಕಡಿಮೆಯಾಗುವ ಮಂಡಲ. |
| | • ಓಝೋನ್ ಅನಿಲವಿರುವ ವಲಯ. |
| | • 80 ಕಿಲೋಮೀಟರ್ ನಿಂದ 400 ಕಿಲೋಮೀಟರ್ ಎತ್ತರದವರೆಗೆ ವ್ಯಾಪಿಸಿಕೊಂಡಿರುವ ಮಂಡಲ. |

ಭೂಮಿಯ ಆಂತರಿಕ ಭಾಗ, ವಾತಾವರಣ ಹಾಗೂ ವಾತಾವರಣದ ಪದರುಗಳ ವಿಶೇಷತೆಗಳು ಮುಂತಾದವುಗಳನ್ನು ನಾವು ವಿವರವಾಗಿ ಚರ್ಚಿಸಿದೆವಲ್ಲವೇ? ಭೂಮಿಯಲ್ಲಿ ಸಸ್ಯ ಜಂತುಜಾಲಗಳ ಅಸ್ತಿತ್ವವು ಸಾಧ್ಯವಾಗುವುದಕ್ಕೆ ವಾತಾವರಣ ಹಾಗೂ ಭೂಮಿಯ ಮೇಲ್ಮೈಯ ವಿಶೇಷತೆಗಳು ವಹಿಸುವ ಪಾತ್ರವು ಪ್ರಧಾನವಾಗಿದೆ.

## ಮುಂದುವರಿದ ಚಟುವಟಿಕೆಗಳು

- ಭೂಮಿಯ ರಚನೆಯ ಮಾದರಿಯನ್ನು ನಿರ್ಮಿಸಿ ಸಮಾಜ ವಿಜ್ಞಾನ ಲ್ಯಾಬಿನಲ್ಲಿ ಪ್ರದರ್ಶಿಸಿರಿ.
- ಇಂಟರ್‌ನೆಟ್ಟಿನ ಸಹಾಯದೊಂದಿಗೆ ಸ್ಲೈಡ್‌ಗಳನ್ನು ತಯಾರಿಸಿ ಭೂಮಿಯ ರಚನೆ, ವಿಶೇಷತೆ ಎಂಬಿವುಗಳನ್ನು ವಿವರಿಸಿರಿ.
- ಭೂಮಿಯ ಆಂತರಿಕ ರಚನೆ, ವಿಶೇಷತೆ ಎಂಬಿವುಗಳನ್ನು ಸೇರಿಸಿ ಲಿಖಿತ ಪ್ರಬಂಧ ರಚಿಸಿ ತರಗತಿಯಲ್ಲಿ ಮಂಡಿಸಿರಿ.

ST-503-11-SOC. SCI. (K)-7-VOL-1




6

# ಭಾರತ ಉಪಭೂಖಂಡ

ನಾವು ವಾಸಿಸುವ ಭೂಮಿಯ ಮೂರರಲ್ಲಿ ಎರಡು ಭಾಗವೂ ಸಾಗರಗಳಾಗಿವೆ. ಇವು ಹಲವು ಹೆಸರುಗಳಿಂದ ಕರೆಯಲ್ಪಡುತ್ತವೆಯಾದರೂ ಅವುಗಳೆಲ್ಲವೂ ಪರಸ್ಪರ ಹೊಂದಿಕೊಂಡಿರುತ್ತವೆ. ಸಾಗರದ ಹೊರತಾದ ಭೂಮಿಯ ಭಾಗವು ಭೂಪ್ರದೇಶಗಳಾಗಿವೆ.

ಹಾಗದರೆ ಸಾಗರಗಳಂತೆ ಭೂ ಪ್ರದೇಶಗಳು ಪರಸ್ಪರ ಸೇರಿಕೊಂಡು ನಿಂತಿರುವುದೇ?

ವಿಶಾಲವಾದ ಭೂಮಿಯ ಭಾಗಗಳನ್ನು 'ಭೂಮಿಯ ತುಂಡುಗಳು' ಎನ್ನುವ ಅರ್ಥದಲ್ಲಿ ಭೂ ಖಂಡಗಳು ಅಥವಾ ಖಂಡಗಳು ಎಂದು ಕರೆಯಲಾಗುತ್ತದೆ. ವಿಭಿನ್ನವಾದ ಭೂಪ್ರಕೃತಿ ವಿಭಾಗಗಳನ್ನು ಒಳಗೊಂಡಿರುವ ದೊಡ್ಡದೊಂದು ಭೂಭಾಗವು ಭೂಖಂಡವಾಗಿದೆ. ಎತ್ತರದ ಪರ್ವತಗಳು, ವಿಶಾಲವಾದ ಸಮತಲಗಳು,




(ಚಿತ್ರ 6.1)

ವಿಸ್ತಾರವಾದ ಮರುಭೂಮಿಗಳು, ಪೀಠಭೂಮಿಗಳು, ಮೊದಲಾದ ಹಲವು ಭೂಸ್ವರೂಪಗಳನ್ನು ಭೂಖಂಡಗಳಲ್ಲಿ ಕಾಣಲು ಸಾಧ್ಯವಿದೆ. ಕೊಟ್ಟಿರುವ ಭೂಪಟ (ಚಿತ್ರ 6.1) ಗ್ಲೋಬ್ ಮೊದಲಾದವುಗಳನ್ನು ನೀರಿಕ್ಷಿಸಿ ವಿವಿಧ ಭೂಖಂಡಗಳನ್ನು ಪಟ್ಟಿ ಮಾಡಿರಿ. ಇದರಲ್ಲಿ ನಮ್ಮ ಭಾರತ ದೇಶವು ಯಾವ ಭೂಖಂಡದಲ್ಲಿದೆ ಎಂಬುದನ್ನು ಕಂಡುಹಿಡಿಯಿರಿ.

## ಉಪ ಭೂಖಂಡ

ಭೂಖಂಡಗಳಂತೆ ವೈವಿಧ್ಯಮಯವಾದ ಭೂಪ್ರಕೃತಿ ವಿಭಾಗಗಳು ಮತ್ತು ಹವಾಗುಣಗಳನ್ನು ಹೊಂದಿರುವ ವಿಶಾಲ ಭೂಖಂಡದ ಭಾಗಗಳನ್ನು 'ಉಪಭೂಖಂಡಗಳು' (Subcontinents) ಎಂದು ಕರೆಯಲಾಗುತ್ತದೆ. ಪಾಮಿರ್ ಪೀಠಭೂಮಿಯು ಏಷ್ಯಾ ಭೂಖಂಡದ ದಕ್ಷಿಣ ಭಾಗವನ್ನು ಇತರ ಭಾಗಗಳಿಂದ ಭೌಗೋಳಿಕವಾಗಿ ಪ್ರತ್ಯೇಕಿಸುತ್ತದೆ. ಎತ್ತರದ ಪರ್ವತ ಶಿಖರಗಳು, ವಿಶಾಲವಾದ ಬಯಲುಗಳು, ಮರುಭೂಮಿ ಪ್ರದೇಶಗಳು, ಕಾಠಿಣ್ಯದಿಂದ ಕೂಡಿದ ಶಿಲೆಗಳಿಂದ ನಿರ್ಮಿತವಾದ ಪೀಠ ಭೂಮಿ ಪ್ರದೇಶಗಳು, ಕರಾವಳಿ ಬಯಲು ಪ್ರದೇಶಗಳು, ದ್ವೀಪಗಳು ಇವುಗಳೆಲ್ಲ ಸೇರಿರುವುದೇ ಭಾರತ ಉಪಭೂಖಂಡದ ಭೂಸ್ವರೂಪವಾಗಿದೆ.

'ಜಗತ್ತಿನ ಛಾವಣಿ' ಎಂದು ವರ್ಣಿಸಲ್ಪಡುವ ಪಾಮಿರ್ ಪೀಠಭೂಮಿಯು ಟಿಯಾನ್ ಷಾನ್, ಕಾರಕೋರಂ, ಕುನ್‌ಲುನ್ ಮತ್ತು ಹಿಂದು ಕುಷ್ ಎಂಬೀ ಪರ್ವತ ಶ್ರೇಣಿಗಳ ಸಂಗಮ ಸ್ಥಳವಾಗಿದೆ.

ಭಾರತ ಉಪಭೂಖಂಡದ ಉತ್ತರದ ಗಡಿಯಲ್ಲಿ ಹಿಮಾಲಯ ಪರ್ವತವೂ,ಪೂರ್ವದ ಗಡಿಯಲ್ಲಿ ಅರಕನ್ ಪರ್ವತ ಸಾಲುಗಳೂ ಪಶ್ಚಿಮ ಗಡಿಯಲ್ಲಿ ಹಿಂದುಕುಷ್ ಪರ್ವತ ಶ್ರೇಣಿಗಳು ಇವೆ. ಭಾರತ ಉಪಭೂಖಂಡದ ದಕ್ಷಿಣದ ಗಡಿಯಲ್ಲಿ ಹಿಂದೂ ಮಹಾಸಾಗರವಿದೆ.


ಒಂದು ದೇಶದ ಹೆಸರಿನಲ್ಲಿ ಕರೆಯಲ್ಪಡುವ ಏಕೈಕ ಸಾಗರವು ಹಿಂದೂ ಮಹಾಸಾಗರವಾಗಿದೆ(Indian Ocean).

ಕೊಟ್ಟಿರುವ ಭೂಪಟದಿಂದ (ಚಿತ್ರ 6.2) ಭಾರತ ಉಪಭೂಖಂಡದಲ್ಲಿ ಒಳಗೊಳ್ಳುವ ದೇಶಗಳನ್ನು ಗುರುತಿಸಬಹುದಲ್ಲವೇ?

- ಭಾರತ
- ಬಾಂಗ್ಲಾದೇಶ
- 
- 

ಭಾರತ ಉಪಭೂಖಂಡದ ಉತ್ತರ ಭಾಗದಲ್ಲಿರುವ ಪರ್ವತ ಶ್ರೇಣಿಗಳು ಯಾವುವು ಎಂಬುದನ್ನು ನೋಡೋಣ. ಭೂಪಟವನ್ನು (6.2) ನೀರಿಕ್ಷಿಸಿರಿ. ಪಾಕಿಸ್ತಾನದಲ್ಲಿ ಹಿಂದುಕುಷ್ ಪರ್ವತ ಶ್ರೇಣಿ, ಭಾರತ, ನೇಪಾಳ ಮತ್ತು ಭೂತಾನ್ ಎಂಬೀ ರಾಷ್ಟಗಳಲ್ಲಾಗಿ ಹಿಮಾಲಯ ಪರ್ವತ ಶ್ರೇಣಿ ಆವರಿಸಿಕೂಂಡಿದೆ. ಪ್ರಪಂಚದಲ್ಲಿನ ಅತಿ ಎತ್ತರವಾದ ಹೆಚ್ಚಿನ ಶಿಖರಗಳೆಲ್ಲವೂ ಈ ಪರ್ವತ ಶ್ರೇಣಿಯಲ್ಲಿವೆ.

ಹಿಮಾಲಯ ಪರ್ವತ ಶ್ರೇಣಿಯ ದಕ್ಷಿಣ ಭಾಗದಲ್ಲಿ ವಿಶಾಲವಾದ ಸಮತಲ ಪ್ರದೇಶಗಳಿವೆ. ಸಿಂಧೂ, ಗಂಗಾ, ಬ್ರಹ್ಮಪುತ್ರ ಎಂಬೀ ನದಿಗಳು ಕೊಂಡೊಯ್ಯುವ ಮೆಕ್ಕಲು ನಿಕ್ಷೇಪಗಳಿಂದ ಅತಿ ವಿಶಾಲವಾದ ಈ ಸಮತಲವು ರೂಪುಗೊಂಡಿದೆ. ಉತ್ತರದ ಮಹಾಬಯಲು ಎಂದು ಕರೆಯಲ್ಪಡುವ ಈ ಬಯಲು ಪ್ರದೇಶಗಳು ಉಪಭೂಖಂಡದ ಪೂರ್ವಭಾಗದಿಂದ ಪಶ್ಚಿಮಭಾಗದವರೆಗೆ ವ್ಯಾಪಿಸಿದೆ.





*ಚಿತ್ರ 6.2*

ಉತ್ತರ ಭಾರತದ ಬಯಲು ಪ್ರದೇಶದ ವಿಶೇಷತೆಗಳು ಯಾವುವು ಎಂಬುದನ್ನು ನೋಡೋಣ.

- ಫಲವತ್ತಾದ ಮಣ್ಣು
- ಸಮೃದ್ಧವಾದ ನದಿಗಳು
- ಸಮತಟ್ಟಾದ ಭೂಪ್ರದೇಶ
- ಜನ ಸಾಂದ್ರತೆ

ಉತ್ತರ ಮಹಾಬಯಲಿನ ದಕ್ಷಿಣ ಭಾಗವು ಪೀಠ ಭೂಮಿಯಾಗಿದೆ. ಇದು ಸಮುದ್ರಮಟ್ಟದಿಂದ ಸುಮಾರು 150 ರಿಂದ 900 ಮೀಟರ್ ವರೆಗೆ ಎತ್ತರದಲ್ಲಿದೆ ಎಂದು ಕಂಡುಕೊಳ್ಳಲಾಗಿದೆ. ಸಾಮಾನ್ಯವಾಗಿ ತ್ರಿಕೋನ ಆಕಾರವನ್ನು ಹೊಂದಿರುವ ಈ ಭೂಪ್ರದೇಶಕ್ಕೆ ಪರ್ಯಾಯ ದ್ವೀಪದ ಪೀಠಭೂಮಿ ಎಂಬ ಹೆಸರಿದೆ.

**ಭೂಪಟದ ಸಹಾಯದಿಂದ ಪರ್ಯಾಯ ದ್ವೀಪದ ಪೀಠಭೂಮಿಯ ಸ್ಥಾನವನ್ನು ಕಂಡುಹಿಡಿಯಿರಿ.**




*ಚಿತ್ರ 6.3*

ಥಾರ್ ಮರುಭೂಮಿಯ ಪರ್ಯಾಯ ದ್ವೀಪದ ಪೀಠಭೂಮಿಯ ವಾಯವ್ಯ ದಿಕ್ಕಿಗೆ ಭಾರತದಲ್ಲಿಯೂ ಪಾಕಿಸ್ತಾನದಲ್ಲಿಯೂ ವ್ಯಾಪಿಸಿಕೊಂಡಿರುವ ಒಣ ಭೂಪ್ರದೇಶವಾಗಿದೆ. ಅತಿ ಕಡಿಮೆ ಪ್ರಮಾಣದಲ್ಲಿ ಮಾತ್ರ ಮಳೆ ಲಭಿಸುವ ಈ ಪ್ರದೇಶದಲ್ಲಿ ಕಳ್ಳಿ, ಮುಳ್ಳಿನ ಗಿಡಗಳು ಮತ್ತು ಕುರುಚಲು ಸಸ್ಯಗಳು ಸಾಮಾನ್ಯವಾದ ಸಸ್ಯ ಪ್ರಬೇಧಗಳಾಗಿವೆ.

ಚಿತ್ರ(6.3) ನೀರೀಕ್ಷಿಸಿರಿ. ಭಾರತ ಉಪಭೂಖಂಡವು ದೀರ್ಘವಾದ ಕರಾವಳಿ ತೀರವನ್ನು ಹೊಂದಿದೆ. ಮಾಲಿದ್ವೀಪ, ಶ್ರೀಲಂಕಾ ಎಂಬೀ ದ್ವೀಪ ರಾಷ್ಟ್ರಗಳು ಮತ್ತು ಲಕ್ಷದ್ವೀಪ, ಅಂಡಮಾನ್ ನಿಕೋಬಾರ್ ದ್ವೀಪಗಳಂತಹ ಸಣ್ಣ ದ್ವೀಪ ಸಮೂಹಗಳು ಭಾರತ ಉಪಭೂಖಂಡದ ಭಾಗಗಳಾಗಿವೆ.

ಕೊಟ್ಟಿರುವ ಚಿತ್ರಗಳನ್ನು (6.4, 6.5) ಹೋಲಿಕೆ ಮಾಡಿ ಅವುಗಳು ಯಾವ ಭೂಪ್ರದೇಶಗಳ ಜನಜೀವನವನ್ನು ಸೂಚಿಸುತ್ತವೆ ಎಂಬುದನ್ನು ತಿಳಿದುಕೊಳ್ಳಿರಿ.



ಚಿತ್ರ 6.4



ಚಿತ್ರ 6.5

ಭಾರತ ಉಪಭೂಖಂಡಕ್ಕೆ ತನ್ನದೇ ಆದ ಹವಾಗುಣ ವೈಶಿಷ್ಟ್ಯತೆಗಳಿವೆ.

ಹವಾಗುಣದಲ್ಲಿ ಪ್ರಾದೇಶಿಕ ವೈವಿಧ್ಯವು ನೆಲೆ ನಿಂತಿರುವಾಗಲೂ ಭಾರತೀಯ ಉಪಭೂಖಂಡದ ಹವಾಗುಣವು ಸಾಮಾನ್ಯವಾಗಿ 'ಮಾನ್ಸೂನ್ ಕಾಲಗಳು' ಎಂದು ಕರೆಯಲ್ಪಡುತ್ತದೆ. ಋತುಗಳು ಎಂಬ ಅರ್ಥ ಬರುವ 'ಮೌಸಿಂ' ಎಂಬ ಅರಬ್ ಪದದಿಂದ ಮಾನ್ಸೂನ್ ಎಂಬ ಪದ ಹುಟ್ಟಿಕೊಂಡಿತು. ಭಾರತ ಉಪಖಂಡದಲ್ಲಿ ಹವಾಗುಣದ ಮೇಲೆ ಮಾನ್ಸೂನ್ ಮಾರುತಗಳು ಪ್ರಭಾವ ಬೀರುತ್ತವೆ. ಈ ಮಾರುತಗಳು ಋತುಗಳಿಗನುಸರಿಸಿ ದಿಕ್ಕನ್ನು ಬದಲಾಯಿಸುವವುಗಳಾಗಿವೆ.

**ಅರಬ್ ಪ್ರವಾಸಿ ಮತ್ತು ಬರಹಗಾರನಾದ ಅಲ್ ಮಸೂದಿಯು ತನ್ನ ಕೃತಿಗಳಲ್ಲಿ ಋತುಗಳಿಗೆ ಅನುಸರಿಸಿ ದಿಕ್ಕನ್ನು ಬದಲಾಯಿಸುವ ಮಾನ್ಸೂನ್ ಮಾರುತಗಳ ಬಗ್ಗೆ ಪ್ರತಿಪಾದಿಸಿದ್ದಾರೆ.**

### ಸೂರ್ಯನ ಅಯನ

ಉತ್ತರಾಯಣ ರೇಖೆ ($23^{1}/_{2}^{o}$ ಉತ್ತರ) ಮತ್ತು ದಕ್ಷಿಣಾಯನ ರೇಖೆ ($23^{1}/_{2}^{o}$ ದಕ್ಷಿಣ)ಯ ನಡುವೆ ಸೂರ್ಯನ ಸ್ಥಾನವು ಬದಲಾಗುವ ವಿದ್ಯಮಾನವೇ ಅಯನವಾಗಿದೆ. ಭೂಮಿಯ ಪರಿಕ್ರಮಣ ಮತ್ತು ಭೂಮಿಯ ಅಕ್ಷದ ವಾಲುವಿಕೆಯೇ ಸೂರ್ಯನು ತನ್ನ ಸ್ಥಾನವನ್ನು ಬದಲಾಯಿಸುತ್ತಿರುವಂತೆ ಭಾಸವಾಗಲು ಕಾರಣ.

ಸೂರ್ಯನ ಅಯನದಿಂದಾಗಿ ಉತ್ತರಾಯಣ ಕಾಲದಲ್ಲಿ ಸೂರ್ಯನ ಸ್ಥಾನವು ಉಪಭೂಖಂಡದ ಮೇಲಿರುವಾಗ, ಭೂಮಿಯ ಗಾಳಿಯು ಬಿಸಿಯಾಗಿ ಮೇಲಕ್ಕೆ ಏರುತ್ತದೆ. ಸಮುದ್ರಭಾಗದಿಂದ ತೇವಾಂಶ-ಹೊತ್ತ ಗಾಳಿಯನ್ನು ಆ ಭಾಗಕ್ಕೆ ಬೀಸುವಂತೆ ಮತ್ತು ಉಪಭೂಖಂಡದ ಹಲವು ಭಾಗಗಳಲ್ಲಿ ಮಳೆಯಾಗುವಂತೆ ಮಾಡುತ್ತದೆ. ಮೇ ಮತ್ತು ಜೂನ್ ತಿಂಗಳುಗಳಲ್ಲಿ ನೈಋತ್ಯ ದಿಕ್ಕಿನ ಮೂಲಕ ಹಿಂದೂ ಮಹಾಸಾಗರದಿಂದ ಉಪಭೂಖಂಡಕ್ಕೆ ಬೀಸುವ ನೈಋತ್ಯ ಮಾರುತಗಳು ಭಾರತ ಉಪಭೂಖಂಡದಲ್ಲಿ ವ್ಯಾಪಕವಾದ ಮಳೆಯನ್ನು ಉಂಟುಮಾಡುತ್ತವೆ.

ದಕ್ಷಿಣಾಯನದ ಸಮಯದಲ್ಲಿ, ಸೂರ್ಯನ ಸ್ಥಾನವು ಹಿಂದೂಮಹಾಸಾಗರದ ಮೇಲ್ಭಾಗದಲ್ಲಿರುವುದರಿಂದ, ಸಮುದ್ರದ ಮೇಲ್ಮೈ ಗಾಳಿಯು ಬಿಸಿಯಾಗಿ ಮೇಲಕ್ಕೆ ಏರುತ್ತದೆ. ಆಗ ಉತ್ತರ ದಿಕ್ಕಿನಿಂದ ಗಾಳಿಯು ಈ ಭಾಗಕ್ಕೆ ಬೀಸುತ್ತದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ

ಈಶಾನ್ಯದಿಂದ ನೈಋತ್ಯ ದಿಕ್ಕಿಗೆ ಬೀಸುವ ಈ ಮಾರುತಗಳು ಸಾಮಾನ್ಯವಾಗಿ ಶುಷ್ಕವಾಗಿರುವುದರಿಂದ ಮಳೆಯ ಪ್ರಮಾಣವು ಕಡಿಮೆಯಾಗಿರುತ್ತದೆ. ಆದರೆ ಬಂಗಾಳ ಕೊಲ್ಲಿಯಿಂದ ನೀರಾವಿಯನ್ನು ಹೀರಿಕೊಳ್ಳುವುದರಿಂದ ಪರ್ಯಾಯ ದ್ವೀಪದ ಪೂರ್ವ ಕರಾವಳಿಯಲ್ಲಿ ವ್ಯಾಪಕ ಮಳೆಯಾಗಲು ಕಾರಣವಾಗುತ್ತದೆ.

ಭಾರತ ಉಪಭೂಖಂಡದ ಎಲ್ಲಾ ಭಾಗಗಳಲ್ಲೂ ಒಂದೇ ರೀತಿಯ ಮಳೆ ಇರುವುದಿಲ್ಲ ಎಂಬುದು ನಿಮಗೆ ಅರ್ಥವಾಯಿತಲ್ಲವೇ?

ಹವಾಗುಣದ ಮೇಲೆ ಪ್ರಭಾವ ಬೀರುವ ಘಟಕಗಳು ಯಾವುವು ಎಂದು ನೋಡೋಣ.

ಒಂದು ಪ್ರದೇಶದ

- ಅಕ್ಷಾಂಶ ಸ್ಥಾನ
- ಸಮುದ್ರ ಮಟ್ಟದಿಂದಿರುವ ಎತ್ತರ
- ಭೂಸ್ವರೂಪ
- ಸಾಗರದ ಸಾಮೀಪ್ಯ
- ಮಾರುತಗಳು

ಪ್ರಮುಖ ಅಕ್ಷಾಂಶ ರೇಖೆಯಾದ ಉತ್ತರಾಯಣ ರೇಖೆಯ ಎರಡೂ ಬದಿಗಳಲ್ಲಿ ವಿಭಿನ್ನ ಹವಾಗುಣಗಳು ಅನುಭವಕ್ಕೆ ಬರುತ್ತವೆ. ಉತ್ತರ ಭಾಗದಲ್ಲಿ ಸಮಶೀತೋಷ್ಣ ಹವಾಗುಣವೂ ದಕ್ಷಿಣ ಭಾಗದಲ್ಲಿ ಉಷ್ಣವಲಯದ ಹವಾಗುಣವೂ ಅನುಭವಕ್ಕೆ ಬರುತ್ತದೆ.

ಉಷ್ಣವಲಯದಲ್ಲಿ ಚಳಿಗಾಲ ಮತ್ತು ಬೇಸಿಗೆಯಲ್ಲಿ ಅನುಭವವಾಗುವ ತಾಪಮಾನ ವ್ಯತ್ಯಾಸವು ಸಾಮಾನ್ಯವಾಗಿ ಕಡಿಮೆಯಾಗಿರುತ್ತದೆ. ಆದರೆ ಸಮಶೀತೋಷ್ಣ ವಲಯದಲ್ಲಿ ಚಳಿಗಾಲ ಮತ್ತು ಬೇಸಿಗೆಯ ತಾಪಮಾನಗಳ ನಡುವಿನ ವ್ಯತ್ಯಾಸವು ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ.

ಮುನ್ನಾರ್ ಸರಕಾರಿ ಮಾದರಿ ವಸತಿ ಶಾಲೆಯಲ್ಲಿ ಓದುತ್ತಿರುವ ದಿಯಾ ತಿರುವನಂತಪುರದಲ್ಲಿರುವ ತನ್ನ ಮನೆಗೆ ಬರೆದ ಪತ್ರದ ಆಯ್ದ ಕೆಲವು ಭಾಗಗಳನ್ನು ಓದಿರಿ.




ಪ್ರಿಯ ಸಹೋದರಿ,

ನೀನು ಕ್ಷೇಮವಾಗಿದ್ದಿ ಎಂದು ಭಾವಿಸುತ್ತೇನೆ. ಹಗಲು ತರಗತಿ ಕೋಣೆಯಲ್ಲಿ ಇರುವಾಗಲೂ ಉಣ್ಣೆಯ ಬಟ್ಟೆ ಧರಿಸಿಕೊಳ್ಳುತ್ತೇನೆ. ಚಳಿಯು ತುಂಬಾ ಹೆಚ್ಚಾಗಿರುವುದರಿಂದ ರಾತ್ರಿ ಎರಡು ಹೊದಿಕೆ ಹೊದ್ದುಕೊಳ್ಳುವ ಸ್ಥಿತಿಯಾಗಿದೆ. ಮನೆಯಲ್ಲಿದ್ದಾಗ ರಾತ್ರಿಯೂ ಫ್ಯಾನನ್ನು ಬಳಸುತ್ತಿದ್ದ ನನಗೆ ಇಲ್ಲಿ ಆಶ್ಚರ್ಯವಾಗುತ್ತಿದೆ. ತಣ್ಣೀರಲ್ಲಿ ಸ್ನಾನ ಮಾಡುತ್ತಿದ್ದ ನನಗೆ ಅದನ್ನು ಊಹಿಸಲೂ ಕೂಡಾ ಸಾಧ್ಯವಿಲ್ಲ. ರಜೆಯಲ್ಲಿ ತಿರುವನಂತಪುರಕ್ಕೆ ಬರುವಾಗ ಇಲ್ಲಿ ಕೃಷಿ ಮಾಡುವ ಸೇಬು, ಸ್ಟ್ರಾಬೆರಿಗಳನ್ನು ತರುತ್ತೇನೆ. ನಮ್ಮ ಬಿಸಿಯಾದ ವಾತಾವರಣದಲ್ಲಿ ಅವುಗಳು ಬೆಳೆಯುವುದಿಲ್ಲವಲ್ಲ!

ಮುನ್ನಾರ್, ಊಟಿ ಮೊದಲಾದ ಸ್ಥಳಗಳಲ್ಲಿ ಶೀತ ಹವಾಗುಣ ಅನುಭವವಾಗಲು ಕಾರಣ ಏನೆಂಬುದನ್ನು ಆಲೋಚಿಸಿದ್ದೀರಾ? ಹಿಂದಿನ ಅಧ್ಯಾಯದಲ್ಲಿ ಸಾಮಾನ್ಯ ತಾಪಮಾನ ನಷ್ಟ (Normal Lape Rate) ದರದ ಕುರಿತು ಕಲಿತಿರುವುದನ್ನು ನೆನಪಿಸಬಹುದಲ್ಲವೇ?

ಭೂಸ್ವರೂಪವು ಹವಾಗುಣದ ಮೇಲೆ ಪ್ರಭಾವ ಬೀರುವ ಮತ್ತೊಂದು ಪ್ರಮುಖ ಘಟಕವಾಗಿದೆ. ತೇವಾಂಶಯುಕ್ತವಾದ ಗಾಳಿಯ ದಿಕ್ಕಿಗೆ ವಿರುದ್ಧವಾಗಿ ನಿಂತಿರುವ ಪರ್ವತಗಳು ಗಾಳಿಯನ್ನು ತಡೆದು ಮಳೆಯನ್ನು ಸುರಿಸುತ್ತವೆ. ಸಹ್ಯಾದ್ರಿ ಪರ್ವತಶ್ರೇಣಿಯ ಪಶ್ಚಿಮ ಇಳಿಜಾರಾದ ಕೇರಳದಲ್ಲಿ ಧಾರಾಳ ಮಳೆ ಲಭಿಸುವಾಗ ಈ ಪರ್ವತಗಳಿಂದಾಗಿ ಪೂರ್ವ ಇಳಿಜಾರಾದ ತಮಿಳುನಾಡಿನಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿರುವುದರ ಕಾರಣ ಈಗ ತಿಳಿಯಿತಲ್ಲವೇ? ಕಡಿಮೆ ಮಳೆ ಬೀಳುವ ಇಂತಹ ಪ್ರದೇಶಗಳನ್ನು ಸಾಮಾನ್ಯವಾಗಿ 'ಮಳೆ ನೆರಳು ಪ್ರದೇಶ'ಗಳು (Rainshadow Regions) ಎಂದು ಕರೆಯಲಾಗುತ್ತದೆ.




*ಚಿತ್ರ 6.6*

ಆದರೆ ಪರ್ವತ ಶ್ರೇಣಿಗಳಿಗೆ ಸಮಾನಾಂತರವಾಗಿ ತೇವಾಂಶಯುಕ್ತ ಗಾಳಿ ಬೀಸುವ ಸ್ಥಳಗಳಲ್ಲಿ ತಡೆಗಳಿಲ್ಲದ ಕಾರಣ ಮಾರುತವು ಮಳೆ ಸುರಿಸದೆ ಹಾದು ಹೋಗುತ್ತದೆ. ರಾಜಸ್ಥಾನದ ಅರಾವಳಿ ಪರ್ವತ ಶ್ರೇಣಿಯು ನೆಲೆನಿಂತಿರುವ ಪ್ರದೇಶ ಮರುಭೂಮಿಯಾಗಿ ಬದಲಾಗಲು ಇದೇ ಕಾರಣವಾಗಿದೆ.

ಸಮುದ್ರದೊಂದಿಗೆ ಸೇರಿಕೊಂಡಿರುವ ಪ್ರದೇಶಗಳಲ್ಲಿ ಉಷ್ಣ ಹವಾಗುಣವೂ ಸಮುದ್ರದಿಂದ ದೂರವಿರುವ ಪ್ರದೇಶಗಳಲ್ಲಿ ತುಲನಾತ್ಮಕವಾಗಿ ಶುಷ್ಕ ಹವಾಗುಣವು ಅನುಭವವಾಗುತ್ತದೆ.

ಗಾಳಿಯ ದಿಕ್ಕೂ ಅದರಲ್ಲಿರುವ ತೇವಾಂಶದ ಪ್ರಮಾಣವೂ ಹವಾಗುಣದ ಮೇಲೆ ಪ್ರಭಾವ ಬೀರುತ್ತದೆ. ಭೂಸ್ವರೂಪದಲ್ಲಿಯೂ ಹವಾಗುಣದಲ್ಲಿಯೂ ಇಂತಹ ಪ್ರಾದೇಶಿಕ ವ್ಯತ್ಯಾಸವು ಜನರ ಜೀವನದಲ್ಲಿ ವ್ಯತ್ಯಾಸಗಳನ್ನು ಉಂಟುಮಾಡುತ್ತದೆಯೇ?

ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಜನರ ಆಹಾರ ಪದ್ಧತಿ ಒಂದೇ ಆಗಿದೆಯೇ?

ಕಾಶ್ಮೀರದ ಜನರ ವಸ್ತ್ರಧಾರಣೆಯೂ ತಮಿಳುನಾಡಿನ ಜನರ ವಸ್ತ್ರಧಾರಣೆಯೂ ಒಂದೇ ಆಗಿದೆಯೇ?

ಪಶ್ಚಿಮ ಘಟ್ಟಗಳಲ್ಲಿ ಕೃಷಿ ಮಾಡುವ ಬೆಳೆಗಳನ್ನೇ ಉತ್ತರದ ಬಯಲು ಪ್ರದೇಶಗಳಲ್ಲಿ ಪ್ರಧಾನವಾಗಿ ಬೆಳೆಯಲಾಗುತ್ತದೆಯೇ?

ಕೆಳಗೆ ಕೊಟ್ಟಿರುವ ಚಿತ್ರದಿಂದ ಪಶ್ಚಿಮ ಘಟ್ಟಗಳಲ್ಲಿ ಕೃಷಿಮಾಡುವ ಬೆಳೆಗಳು ಯಾವುವೆಂದು ಕಂಡುಹಿಡಿಯಿರಿ.



*ಚಿತ್ರ 6.7*
*ಏಲಕ್ಕಿ ಕೃಷಿ*



*ಚಿತ್ರ 6.8*
*ಗೋಧಿ ಕೃಷಿ*

**ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ಸೇರಿಸಿ ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಿರಿ.**

ಪ್ರತಿಯೊಂದು ಪ್ರದೇಶದ ಭೂಪ್ರಕೃತಿ ಮತ್ತು ಹವಾಗುಣಕ್ಕೆ ಅನುಗುಣವಾಗಿ, ಆ ಸ್ಥಳಗಳ ಜನರ ಕೃಷಿ, ಆಹಾರ, ವಸತಿ, ಉಡುಗೆ, ಆಚರಣೆಗಳು, ನಂಬಿಕೆ ಮೊದಲಾದವುಗಳೆಲ್ಲಾ ರೂಪುಗೊಂಡಿವೆ.

ಭಾರತದಲ್ಲಿ ಹೆಚ್ಚಿನ ಜನರು ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಮಳೆಯ ವಿತರಣೆಯಲ್ಲಿ ಉಂಟಾಗುವ ಏರಿಳಿತಗಳು ಜನಜೀವನದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಕೆಲವು ಪ್ರದೇಶಗಳಲ್ಲಿ ಲಭಿಸುವ ಅತಿ ಹೆಚ್ಚು ಮಳೆಯಿಂದಾಗಿ ಆ ಪ್ರದೇಶಗಳಲ್ಲಿ ವ್ಯಾಪಕವಾಗಿ ಕೃಷಿ ಮಾಡುವಾಗ ಇತರ ಅನೇಕ ಭಾಗಗಳಲ್ಲಿ ನೀರಿನ ಕೊರತೆಯಿಂದಾಗಿ ಸೂಕ್ತವಾಗಿ ಕೃಷಿ ಮಾಡಲು ಸಾಧ್ಯವಾಗುವುದಿಲ್ಲ. ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ಬೆಳೆಸುವ ಬೆಳೆಗಳೂ ವ್ಯತ್ಯಾಸವಾಗುತ್ತವೆ. ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಭತ್ತ ಹಾಗೂ ಮಿತವಾಗಿ ಮಳೆ ಲಭಿಸುವ ಪ್ರದೇಶಗಳಲ್ಲಿ ಗೋಧಿ ಪ್ರಧಾನ ಧಾನ್ಯಬೆಳೆಗಳಾಗಿವೆ. ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಬೇಳೆಕಾಳುಗಳು ಮತ್ತು ನಾರಿರುವ(ಫೈಬರ್) ಧಾನ್ಯಗಳನ್ನು ಬೆಳೆಯಲಾಗುತ್ತದೆ.

ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಗಮನಿಸಿರಿ.

| ಬೆಳೆ | ನೀರಿನ ಪ್ರಾಮುಖ್ಯ | ಬೀಜ ಬಿತ್ತನೆಯ ತಿಂಗಳುಗಳು | ಕೊಯ್ಲು ಮಾಡುವ ತಿಂಗಳು |
|---|---|---|---|
| ಭತ್ತ | ಧಾರಳ ನೀರಿನ ಆಗತ್ಯವಿದೆ. | ಜೂನ್ | ಸೆಪ್ಟೆಂಬರ್ |
| ಗೋಧಿ | ಮಿತವಾದ ಪ್ರಮಾಣದಲ್ಲಿ ನೀರಿನ ಅಗತ್ಯವಿದೆ. | ಆಕ್ಟೋಬರ್ | ಮಾರ್ಚ್ |
| ಕಲ್ಲಂಗಡಿ | ವಿರಳವಾಗಿ ಮಳೆಬೀಳುವ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯವು ಬೇಕಾಗಿದೆ. | ಎಪ್ರಿಲ್ | ಜೂನ್ |

ವಿಭಿನ್ನ ಕಾಲಗಳಲ್ಲಿ ಬೇರೆ ಬೇರೆ ಬೆಳೆಗಳನ್ನು ಕೃಷಿ ಮಾಡುವುದೆಂದು ತಿಳಿಯಿತಲ್ಲವೇ? ಪ್ರತಿಯೊಂದು ಬೆಳೆಯನ್ನು ಬಿತ್ತನೆ ಮಾಡುವುದಕ್ಕೂ ಕೊಯ್ಲು ಮಾಡುವುದಕ್ಕೂ ನಿರ್ದಿಷ್ಟ ಕಾಲಗಳಿವೆ. ಈ ಕಾಲಗಳನ್ನು ಕೃಷಿ ಕಾಲಗಳೆಂದು ಹೇಳುವರು. ಭಾರತದಲ್ಲಿ ಮೂರು ಕೃಷಿ ಕಾಲಗಳಿವೆ.

- ಖಾರಿಫ್
- ರಾಬಿ
- ಸೈದ್

ನೈಋತ್ಯ ಮಾನ್ಸೂನ್ ಕಾಲದಲ್ಲಿ ಬರುವ ಖಾರಿಫ್ ಕಾಲದಲ್ಲಿ ಅಧಿಕ ಉಷ್ಣತೆ ಮತ್ತು ನೀರಿನ ಅಗತ್ಯವಿರುವ ಭತ್ತ, ಹತ್ತಿ, ಸೆಣಬು, ಮೆಕ್ಕೆಜೋಳ, ಬಾಜ್ರಾ, ತೊಗರಿ ಎಂಬೀ ಕೃಷಿಗಳನ್ನು ಮಾಡುತ್ತಾರೆ.

ಅಕ್ಟೋಬರ್ - ನವೆಂಬರ್ ತಿಂಗಳುಗಳಲ್ಲಿ ಚಳಿಗಾಲದ ಆರಂಭದೊಂದಿಗೆ ಪ್ರಾರಂಭವಾಗುವ ರಾಬಿ ಕಾಲದಲ್ಲಿ ಉಷ್ಣವೂ ನೀರೂ ಮಿತವಾಗಿ ಮಾತ್ರ ಅಗತ್ಯವಿರುವ ಗೋಧಿ, ಬೇಳೆಕಾಳುಗಳು, ಸಾಸಿವೆ ಮೊದಲಾದವುಗಳ ಕೃಷಿಕಾಲವಾಗಿದೆ. ಫೆಬ್ರವರಿ ತಿಂಗಳಿನೊಂದಿಗೆ ರಾಬಿ ಕಾಲವು ಕೊನೆಗೊಳ್ಳುವುದು.

ರಾಬಿ ಬೆಳೆ ಕೊಯ್ಲಿನ ನಂತರ ಆರಂಭಿಸುವ ಅಲ್ಪಾವಧಿಯ ಬೇಸಿಗೆ ಕಾಲವಾಗಿದೆ ಸೈದ್. ಕಲ್ಲಂಗಡಿ, ಸೌತೆಕಾಯಿ, ತರಕಾರಿಗಳು, ಮೇವಿನ ಬೆಳೆಗಳು ಇತ್ಯಾದಿಗಳನ್ನು ಈ ಸಮಯದಲ್ಲಿ ನೀರಾವರಿಯ ಸೌಕರ್ಯ ಇರುವ ಪ್ರದೇಶಗಳಲ್ಲಿ ಕೃಷಿ ಮಾಡಲಾಗುತ್ತದೆ. ಭಾರತದಲ್ಲಿ ಮೂರು ಕೃಷಿ ಕಾಲಗಳಿದ್ದರೂ, ಸ್ಥಳೀಯ ವ್ಯತ್ಯಾಸಗಳು ಸ್ಪಷ್ಟವಾಗಿ ಕಂಡುಬರುತ್ತವೆ.

ಭಾರತದಲ್ಲಿ ಕೃಷಿ ಮಾಡುವ ಪ್ರಧಾನ ಬೆಳೆಗಳನ್ನು ಯಾವೆಲ್ಲಾ ರೀತಿಯಾಗಿ ವರ್ಗೀಕರಿಸಬಹುದೆಂದು ನೋಡುವ.

## ಆಹಾರ ಬೆಳೆಗಳು

ಆಹಾರ ಬೆಳೆಗಳನ್ನು ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳು ಎಂದು ಎರಡು ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಭತ್ತ ಮತ್ತು ಗೋಧಿಯಂತಹ ಮೃದು ಧಾನ್ಯಗಳು ಮತ್ತು ಬಾಜಿರ, ಜೋಳ, ರಾಗಿ ಮುಂತಾದ ಒರಟಾದ ಧಾನ್ಯಗಳನ್ನು ಭಾರತದಲ್ಲಿ ಕೃಷಿ ಮಾಡಲಾಗುತ್ತದೆ.



*ಚಿತ್ರ 6.9*
*ಗೋಧಿ*



*ಚಿತ್ರ 6.10*
*ಬೇಳೆಕಾಳುಗಳು*

ಪಚ್ಚೆ ಹೆಸರು, ತೊಗರಿ ಎಂಬಿವುಗಳು ಭಾರತದಲ್ಲಿ ಕೃಷಿ ಮಾಡುವ ಪ್ರಧಾನ ದ್ವಿದಳ ಧಾನ್ಯಗಳು.

## ನಾಣ್ಯ ಬೆಳೆಗಳು :

ನಾಣ್ಯ ಬೆಳೆಗಳು ವಾಣಿಜ್ಯಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಬೆಳೆಗಳಾಗಿವೆ. ಕಬ್ಬು, ತಂಬಾಕು, ಹತ್ತಿ, ಸೆಣಬು, ಎಣ್ಣೆಬೀಜಗಳು ಮೊದಲಾದವುಗಳು ಪ್ರಧಾನ ನಾಣ್ಯ ಬೆಳೆಗಳಾಗಿವೆ.

## ನಾರು ಬೆಳೆಗಳು :

ಹತ್ತಿ ಮತ್ತು ಸೆಣಬು ಭಾರತದ ಪ್ರಧಾನ ನಾರು ಬೆಳೆಗಳಾಗಿವೆ. ನಾರು ಬೆಳೆಗಳು ನಮಗೆ ಬಟ್ಟೆಬರೆಗಳು, ಚೀಲಗಳು, ಗೋಣಿಗಳು ಮೊದಲಾದ ಆನೇಕ ವಸ್ತುಗಳನ್ನು ನಿರ್ಮಿಸಲು ಅಗತ್ಯವಿರುವ ನಾರುಗಳನ್ನು ನೀಡುವುದು.

## ಎಣ್ಣೆ ಬೀಜಗಳು :

ಖಾದ್ಯತೈಲವನ್ನು ಉತ್ಪಾದಿಸಲು ಎಣ್ಣೆಬೀಜಗಳನ್ನು ಕೃಷಿ ಮಾಡಲಾಗುತ್ತದೆ. ನೆಲಕಡಲೆ, ಸಾಸಿವೆ, ಸೋಯಾಬೀನ್, ಸೂರ್ಯಕಾಂತಿ ಮೊದಲಾದವುಗಳು ಇದರಲ್ಲಿ ಸೇರುತ್ತವೆ. ಇದರ ಹೊರತಾಗಿ ಚಹಾ, ಕಾಫಿ, ರಬ್ಬರ್, ಸುಗಂಧ ದ್ರವ್ಯಗಳು, ಗೆಡ್ಡೆಗೆಣಸುಗಳು ಮೊದಲಾದ ಇತರ ಬೆಳೆಗಳನ್ನು ಭಾರತದಲ್ಲಿ ಕೃಷಿ ಮಾಡಲಾಗುತ್ತದೆ. ಇವುಗಳಲ್ಲಿ ಹೆಚ್ಚಿನವುಗಳನ್ನು ತೋಟಗಾರಿಕಾ ಬೆಳೆಗಳಾಗಿ ಕೃಷಿ ಮಾಡಲಾಗುತ್ತದೆ.

ವಿವಿಧ ರೀತಿಯ ಬೆಳೆಗಳ ಕುರಿತು ತಿಳಿದುಕೊಂಡಿರಲ್ಲವೇ? ಇವುಗಳೆಲ್ಲವನ್ನು ಕೃಷಿ ಮಾಡುವುದು ಒಂದೇ ರೀತಿಯಲ್ಲಾಗಿದೆಯೇ?

ಪ್ರಪಂಚದ ವಿವಿಧ ಭಾಗಗಳಲ್ಲಿ ಭೂ ಸ್ವರೂಪ, ಮಣ್ಣಿನ ಫಲವತ್ತತೆ, ಹವಾಗುಣ, ನೀರಿನ ಲಭ್ಯತೆ, ಜನಸಾಂದ್ರತೆ, ಕೃಷಿ ಭೂಮಿಯ ವಿಸ್ತೀರ್ಣ, ಬೆಳೆಗಳ ಮೌಲ್ಯ, ಲಭ್ಯವಿರುವ ತಂತ್ರಜ್ಞಾನ ಇತ್ಯಾದಿಗಳ ಆಧಾರದಲ್ಲಿ ವಿವಿಧ ಕೃಷಿ ವಿಧಾನಗಳು ನೆಲೆನಿಂತಿವೆ. ಇವುಗಳಲ್ಲಿ ಸಾಂಪ್ರದಾಯಿಕ ಜೀವನಾಧಾರಿತ ಕೃಷಿ, ಜೀವನಾಧಾರಿತ ಕೃಷಿ, ಸಂಯೋಜಿತ ಕೃಷಿ , ವಿಸ್ತಾರವಾದ ವಾಣಿಜ್ಯ ಧಾನ್ಯ ಕೃಷಿ, ಹೈನುಗಾರಿಕೆ, ತೋಟಗಾರಿಕೆ ಬೆಳೆಗಳ ಕೃಷಿ, ಫಲ -ಪುಷ್ಪಗಳ ಕೃಷಿ ಮೊದಲಾದವುಗಳು ಒಳಗೊಳ್ಳುತ್ತವೆ. ಭಾರತದ ವಿವಿಧ ಕೃಷಿ ವಿಧಾನಗಳು ಯಾವುವು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ತಿಳಿದುಕೊಳ್ಳುವ.

## ಮುಂದುವರಿದ ಚಟುವಟಿಕೆಗಳು

- ಭಾರತ ಉಪಭೂಖಂಡದಲ್ಲಿ ಒಳಪಡುವ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳು, ಸಾಂಸ್ಕೃತಿಕ ವಿಶೇಷತೆಗಳು ಎಂಬಿವುಗಳನ್ನು ವಾಚನ ಸಾಮಾಗ್ರಿಗಳು, ಅಂತರ್‌ಜಾಲ ಎಂಬಿವುಗಳ ಸಹಾಯದೊಂದಿಗೆ ಕಂಡುಹಿಡಿದು ಲೇಖನ ತಯಾರಿಸಿರಿ.
- ಉಪಖಂಡದ ವಿವಿಧ ರಾಜ್ಯಗಳ ಸಾಂಸ್ಕೃತಿಕ ವೈವಿಧ್ಯವನ್ನು ಸೂಚಿಸುವ ಚಿತ್ರಗಳನ್ನು ಸಂಗ್ರಹಿಸಿ ಒಂದು ಭಿತ್ತಿಪತ್ರಿಕೆಯನ್ನು ತಯಾರಿಸಿರಿ.
- ಕೊಟ್ಟಿರುವ ಭಾರತ ಉಪಭೂಖಂಡದ ರೂಪರೇಖೆಯಲ್ಲಿ ವಿವಿಧ ದೇಶಗಳಿಗೆ ಪ್ರತ್ಯೇಕ ಬಣ್ಣ ನೀಡಿ ಅವುಗಳ ಹೆಸರನ್ನು ಬರೆದು ಸೇರಿಸಿರಿ.



N
W
E
S
ಭಾರತ ಉಪಭೂಖಂಡದ
ರೂಪುರೇಖೆ
MAP NOT TO SCALE



7

# ಆಹಾರ ಉತ್ಪಾದನೆಯಿಂದ ಆಹಾರ ಭದ್ರತೆಯವರೆಗೆ



ಚಿತ್ರ 7.1

ತಿಳಿಯಾದ ಆಕಾಶದ ಕೆಳಗೆ ಹಚ್ಚ ಹಸುರಿನ ಬಯಲು. ತಂಗಾಳಿಯಲ್ಲಿ ನಿಧಾನವಾಗಿ ತಲೆದೂಗುತ್ತಿರುವ ಭತ್ತದ ಕಾಳುಗಳನ್ನು ನೋಡುವುದೇ ಒಂದು ಸೊಗಸು.... ಇಂದು ರಜೆಯಾದುದರಿಂದ ನಾನು ಮತ್ತು ತಂಗಿ ಅಪ್ಪ ಅಮ್ಮ ನ ಜೊತೆಯಲ್ಲಿ ಕೃಷಿ ಕೆಲಸ ಮಾಡಲು ಹೋಗಿದ್ದೆವು. ಭತ್ತ ಮಾತ್ರವಲ್ಲ, ಪಕ್ಕದಲ್ಲಿ ತರಕಾರಿ ಕೃಷಿಯೂ ಇದೆ. ಬದನೆ, ಅಲಸಂಡೆ, ಪಡುವಲ, ಬೆಂಡೆ, ಹರಿವೆ, ಸುವರ್ಣಗಡ್ಡೆ,ಕೆಸು ಹೀಗೆ ಬಹುತೇಕ ಎಲ್ಲಾ ತರಕಾರಿಗಳು ಇವೆ. ಬೆಲೆ ಕೊಯ್ಲಿಗೆ ತಯಾರಾಗಿ ನಿಂತಿರುವ ತರಕಾರಿ ತೋಟದ ದೃಶ್ಯವು ನನ್ನನ್ನು ಬೆರಗುಗೊಳಿಸಿತು. ಎಂದಿಗಿಂತಲೂ ಅಧಿಕ ಇಳುವರಿಯೊಂದಿಗೆ ನಾವಿಂದು ಮನೆಗೆ ಹಿಂತಿರುಗಿ ಬಂದೆವು. ಮನೆಗೆ ಅಗತ್ಯವಿರುವ ಹೆಚ್ಚಿನ ಆಹಾರ ವಸ್ತುಗಳನ್ನು ಸ್ವಯಂ ಉತ್ಪಾದಿಸಿ ಉಪಯೋಗಿಸುವ ಅಭ್ಯಾಸವು ಅಪ್ಪನಿಗೆ ಹಿಂದಿನಿಂದಲೂ ರೂಢಿಯಲ್ಲಿದೆ. ಸ್ವಲ್ಪ ಹೆಚ್ಚು ತರಕಾರಿ ಲಭಿಸಿದುದರಿಂದ ಸ್ವಲ್ಪವನ್ನು ಕೀರ್ತಿ ಅಕ್ಕನ ಮನೆಗೂ ಬಾಕಿ ಉಳಿದುದ್ದನ್ನು ಸಂತೆಗೂ ಅಮ್ಮ ತೆಗೆದುಕೊಂಡು ಹೋದರು...

ನೀವು ಓದಿದ್ದು ನೀತುವಿನ ದಿನಚರಿಯ ಭಾಗವಾಗಿದೆ.

ದೈನಂದಿನ ಉಪಯೋಗಕ್ಕೆ ಅಗತ್ಯವಿರುವ ಯಾವೆಲ್ಲ ಆಹಾರ ಬೆಳೆಗಳನ್ನು ಇವರು ಕೃಷಿ ಮಾಡುತ್ತಾರೆ?

● ● ●

● ● ●

ಹೆಚ್ಚುವರಿ ಉತ್ಪಾದನೆಯನ್ನು ಹೇಗೆ ಉಪಯೋಗಿಸುತ್ತಾರೆ?

●

●

ಈ ರೀತಿಯಲ್ಲಿ ಕೃಷಿ ಮಾಡುವುದರಿಂದ ದೊರೆಯುವ ಪ್ರಯೋಜನಗಳು ಯಾವುವು?

●

●

ಬೇಟೆಯಾಡಿ ಜೀವಿಸುತ್ತಿದ್ದ ನಮ್ಮ ಪೂರ್ವಜರಿಂದ ಹಿಡಿದು ಆಧುನಿಕ ಮಾನವನ ವಿಕಾಸದವರೆಗೆ ಕೃಷಿಯು ಮಾನವನ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದೆ. ಕೃಷಿ ಮಾಡಿ ಜೀವಿಸಲು ಆರಂಭಿಸಿದ ನಂತರ ಕುಟುಂಬ, ಒಕ್ಕೂಟ, ಗ್ರಾಮ, ನಗರ ಹೀಗೆ ಸಾಮಾಜಿಕ ಜೀವನಕ್ಕೆ ಅಗತ್ಯವಾದ ವ್ಯವಸ್ಥೆಗಳು ರೂಪುಗೊಂಡವು. ಕ್ರಮೇಣ ಮನುಷ್ಯರು ಜೀವನಾಧಾರಿತ ಸಂಘಟಿತ ಕೃಷಿ ರೀತಿಯಿಂದ ಮಾರುಕಟ್ಟೆ ಆಧಾರಿತ ಕೃಷಿ ರೀತಿಗೆ ಬದಲಾದರು.ಈ ಬದಲಾವಣೆಗಳು ಯಾವುವು? ಅದಕ್ಕಾಗಿ ಮನುಷ್ಯರು ಅವಲಂಭಿಸಿಕೊಂಡ ಕೃಷಿ ವಿಧಾನಗಳು ಯಾವುವೆಂಬುದನ್ನು ಪರಿಚಯಿಸಿಕೊಳ್ಳುವ.

### ಕೃಷಿಯ ಉಗಮ

ಅಲೆಮಾರಿಗಳಾಗಿ ಸಂಚರಿಸುತ್ತಿದ್ದ ಮಾನವನು ಸುಮಾರು 7000 ಬಿ.ಸಿ.ಇ ಯಲ್ಲಿ ಕೃಷಿ ಮಾಡಲು ಆರಂಭಿಸಿದನು. ಮೆಸೊಪೊಟೇಮಿಯಾ, ತುರ್ಕಿ, ಈಜಿಪ್ಟ್, ಪಶ್ಚಿಮ ಏಷ್ಯಾ, ಯುರೋಪ್ ಎಂಬೀ ಪ್ರದೇಶಗಳಲ್ಲಿ ಮಾನವನು ವಿವಿಧ ಕಾಲಗಳಲ್ಲಿ ಕೃಷಿ ಮಾಡಲು ಆರಂಭಿಸಿದನು.

ಸುಮಾರು 3000 ಬಿ.ಸಿ.ಇ ಯಿಂದ ಸಿಂಧೂ ನದಿ ನಾಗರಿಕತೆಯೊಂದಿಗೆ ಭಾರತದಲ್ಲಿ ಕೃಷಿ ಸಂಸ್ಕೃತಿಯು ಬೆಳೆದುಬಂದಿತು. ಈ ನದಿ ತೀರದ ಅವಳಿ ನಗರಗಳಾದ ಮೊಹೆಂಜದಾರೊ ಮತ್ತು ಹರಪ್ಪನಗರಗಳಲ್ಲಿ ಗೋಧಿ, ಬಾರ್ಲಿ ಮುಂತಾದ ಧಾನ್ಯಗಳನ್ನು ಕೃಷಿ ಮಾಡಲಾಗುತ್ತಿತ್ತು. ದಕ್ಷಿಣ ಭಾರತದಲ್ಲಿ ಕೃಷಿಯು ಬಹಳ ಕಾಲದ ನಂತರ ಪ್ರಾರಂಭವಾಯಿತು.

## ಜೀವನಾಧಾರಿತ ಕೃಷಿ

ಕೃಷಿಕರು ತಮ್ಮ ಕುಟುಂಬದ ಜೀವನಾಧಾರಕ್ಕೆ ಅಗತ್ಯವಾದುದನ್ನು ಮಾತ್ರ ಉತ್ಪಾದಿಸಿ ಉಪಯೋಗಿಸುವ ರೀತಿಯು ಇದಾಗಿದೆ. ಲಾಭಗಳಿಸುವುದು ಈ ಕೃಷಿಯ ಪ್ರಾಥಮಿಕ ಉದ್ದೇಶವಲ್ಲ ಆದರೆ, ಕೆಲವು ಸಂದರ್ಭಗಳಲ್ಲಿ ಹೆಚ್ಚುವರಿಯಾಗಿ ಲಭಿಸುವ ಕೃಷಿ ಉತ್ಪನ್ನಗಳನ್ನು ಇತರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಮಾರಾಟ ಮಾಡಲಾಗುತ್ತದೆ. ಈ ಕೃಷಿ ವಿಧಾನದಲ್ಲಿ ಸಾಂಪ್ರದಾಯಿಕ ಕೃಷಿ ಉಪಕರಣಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

## ಸಂಯೋಜಿತ ಕೃಷಿ

ಒಂದು ನಿರ್ದಿಷ್ಟ ಕೃಷಿ ಭೂಮಿಯಲ್ಲಿ ಏಕ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಕೃಷಿ ಬೆಳೆಗಳನ್ನು ಬೆಳೆಸುವುದು ಸಂಯೋಜಿತ ಕೃಷಿಯಾಗಿದೆ. ಇದರೊಂದಿಗೆ ಜಾನುವಾರು ಸಾಕಣೆ, ಕೋಳಿ ಸಾಕಣೆ, ಮೀನು ಸಾಕಣೆ ಇತ್ಯಾದಿಗಳನ್ನು ಸಂಯೋಜಿಸಿ ಬೆಳೆಸಬಹುದು. ಈ ರೀತಿಯಲ್ಲಿ ಕೃಷಿ ಮಾಡುವುದರಿಂದ ಉಂಟಾಗುವ ಪ್ರಯೋಜನಗಳು ಯಾವುವು?



ಚಿತ್ರ 7.2

- ಜಾನುವಾರುಗಳಿಗಿರುವ ಆಹಾರವು ಕೃಷಿಯಿಂದ ಲಭಿಸುತ್ತದೆ.
- ಕೃಷಿಗೆ ಬೇಕಾದ ಗೊಬ್ಬರವು ಜಾನುವಾರುಗಳಿಂದ ತಿರುಗಿ ಲಭಿಸುತ್ತದೆ.
- ವೆಚ್ಚವು ತುಲನಾತ್ಮಕವಾಗಿ ಕಡಿಮೆಯಾಗಿರುತ್ತದೆ.
- 
- 

ಇನ್ನಷ್ಟು ಮಾಹಿತಿಗಳನ್ನು ಕಂಡುಕೊಂಡು ಪೂರ್ತಿಗೊಳಿಸಿರಿ.

## ತೋಟಗಾರಿಕಾ ಕೃಷಿ

ಸಾಂಪ್ರದಾಯಿಕ ರೀತಿಯಲ್ಲಿ ಭತ್ತ ಮತ್ತು ಆಹಾರ ಬೆಳೆಗಳನ್ನು ಮಾತ್ರ ಕೃಷಿ ಮಾಡುತ್ತಿದ್ದ ರೈತರು ಬ್ರಿಟಿಷರ ಆಗಮನದೊಂದಿಗೆ ವಿಶಾಲವಾದ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೋಟಗಾರಿಕಾ ಬೆಳೆಗಳಾದ ಚಹಾ, ಕಾಫಿ, ಲವಂಗ, ಏಲಕ್ಕಿ, ಕರಿಮೆಣಸು ಮುಂತಾದ ಕೃಷಿ ಮಾಡಲಾರಂಭಿಸಿದರು. ಕೈಗಾರಿಕಾ ಕ್ರಾಂತಿಯ ಹುಟ್ಟೂರಾದ ಬ್ರಿಟನ್ ಸೇರಿದಂತೆ ಇತರ ಯೂರೋಪಿಯನ್ ರಾಷ್ಟ್ರಗಳಿಗೆ ಹೆಚ್ಚಿನ ಪ್ರಮಾಣದ ಕೃಷಿ ಕಚ್ಚಾ ವಸ್ತುಗಳ ಅಗತ್ಯವಿತ್ತು. ಅದಕ್ಕಾಗಿ ಅವರು 19 ನೇ ಶತಮಾನದ ಆರಂಭದೊಂದಿಗೆ ವಸಾಹತುಗಳಲ್ಲಿ ತೋಟಗಾರಿಕಾ ಬೆಳೆಗಳಿಗೆ ಪ್ರೋತ್ಸಾಹ ನೀಡಿದರು. ದೀರ್ಘಾವಧಿಯ ಆದಾಯ ಮತ್ತು ತುಲನಾತ್ಮಕವಾಗಿ ಕಡಿಮೆ ಉತ್ಪಾದನಾ ವೆಚ್ಚವು ಈ ಕೃಷಿ ವಿಧಾನದ ಲಕ್ಷಣವಾಗಿದೆ.



ಚಿತ್ರ 7.3

## ವಾಣಿಜ್ಯ ಬೆಳೆಗಳ ಕೃಷಿ

ಕೃಷಿ ಉತ್ಪನ್ನಗಳನ್ನು ವಾಣಿಜ್ಯ ಆಧಾರದಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪಾದಿಸುವುದು ವಾಣಿಜ್ಯ ಬೆಳೆ ಕೃಷಿಯಾಗಿದೆ. ಕೈಗಾರಿಕಾ ಕೇಂದ್ರಗಳಲ್ಲಿ ಬಳಸುವ ಕಚ್ಚಾ ವಸ್ತುಗಳನ್ನು ಒದಗಿಸುವಲ್ಲಿ ವಾಣಿಜ್ಯ ಬೆಳೆ ಕೃಷಿಯ ಪಾತ್ರವು ಬಹುದೊಡ್ಡದಾಗಿದೆ. ಇದು ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಆಧುನಿಕ ತಂತ್ರಜ್ಞಾನದ ಉಪಯೋಗವೂ ಅಗತ್ಯವಿರುವ ಒಂದು ಕೃಷಿ ವಿಧಾನವಾಗಿದೆ. ರಬ್ಬರ್, ಕಬ್ಬು, ಹತ್ತಿ, ಸೆಣಬು ಮೊದಲಾದವುಗಳು ವಾಣಿಜ್ಯ ಕೃಷಿ ಬೆಳೆಗಳಾಗಿವೆ.

ನಮ್ಮ ದೇಶದ ವಿವಿಧ ಕೃಷಿ ರೀತಿಗಳ ಕುರಿತು ತಿಳಿದುಕೊಂಡಿರಲ್ಲವೇ? ಇನ್ನೂ ಹೆಚ್ಚಿನ ವಿಶೇಷತೆಗಳನ್ನು ಸೇರಿಸಿ ಪಟ್ಟಿಯನ್ನು ವಿಸ್ತರಿಸಿರಿ.



*ಚಿತ್ರ 7.4*

| ಜೀವನಾಧಾರಿತ ಕೃಷಿ | ಸಂಯೋಜಿತ ಕೃಷಿ | ತೋಟಗಾರಿಕಾ ಕೃಷಿ | ವಾಣಿಜ್ಯ ಬೆಳೆ ಕೃಷಿ |
|---|---|---|---|
| • ಸ್ವಂತ ಬಳಕೆಗೆ ಅಗತ್ಯವಿರುವ ಉತ್ಪಾದನೆ | • ಒಂದೇ ಗೊಬ್ಬರವನ್ನು ಒಂದಕ್ಕಿಂತ ಹೆಚ್ಚು ಕೃಷಿ ಬೆಳೆಗಳಿಗೆ ಬಳಸಬಹುದು | • ತುಲನಾತ್ಮಕವಾಗಿ ಕಡಿಮೆ ಉತ್ಪಾದನಾ ವೆಚ್ಚ | • ಹೆಚ್ಚಿನ ಬಂಡವಾಳ ಹೂಡಿಕೆ |
| • ಸಣ್ಣ ಸ್ಥಳದಲ್ಲಿಯೂ ಕೃಷಿ ಮಾಡಲು ಸಾಧ್ಯವಿದೆ | • ಕಡಿಮೆ ಉತ್ಪಾದನಾ ವೆಚ್ಚ | • ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ | • ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ |
| • | • | • | • |
| • | • | • | • |

ST-503-13-SOC. SCI. (K)-7-VOL-1

## ಕೃಷಿ - ಆಹಾರಕ್ಕಾಗಿ ಮತ್ತು ಆದಾಯಕ್ಕಾಗಿ



*ಚಿತ್ರಗಳು 7.5*

ಚಿತ್ರದಲ್ಲಿರುವ ಕೃಷಿ ಬೆಳೆಗಳಲ್ಲಿ ಆಹಾರಕ್ಕಾಗಿ ಉಪಯೋಗಿಸುವ ಬೆಳೆಗಳು ಯಾವುವು?

- 
- 
- 

ಇತರ ಬೆಳೆಗಳು ಯಾವುವು?

- 
- 
- 

ಕೃಷಿ ಬೆಳೆಗಳನ್ನು ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳು ಎಂದು ಎರಡಾಗಿ ವರ್ಗೀಕರಿಸಲಾಗಿದೆ. ಆಹಾರ ವಸ್ತುಗಳಾಗಿ ಉಪಯೋಗಿಸಲು ಸಾಧ್ಯವಿರುವ ಬೆಳೆಗಳು ಆಹಾರ ಬೆಳೆಗಳಾಗಿವೆ. ಆದರೆ, ವಾಣಿಜ್ಯ-ಕೈಗಾರಿಕಾ ಅಗತ್ಯಗಳಿಗಾಗಿ ಉಪಯೋಗಿಸುವ ಬೆಳೆಗಳು ವಾಣಿಜ್ಯ ಬೆಳೆಗಳಾಗಿವೆ.

ನಮ್ಮ ದೇಶದಲ್ಲಿರುವ ಕೃಷಿ ಬೆಳೆಗಳನ್ನು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.


| ಆಹಾರ ಬೆಳೆಗಳು | ವಾಣಿಜ್ಯ ಬೆಳೆಗಳು |
|---|---|
| • ಭತ್ತ | • ಹತ್ತಿ |
| • ಗೋಧಿ | • ರಬ್ಬರ್ |
| • | • |
| • | • |
| • | • |



**ಕೆಳಗೆ ಕೊಟ್ಟಿರುವ ಪಟ್ಟಿಯಿಂದ ಪ್ರತಿಯೊಂದು ಬೆಳೆಯನ್ನು ಯಾವೆಲ್ಲಾ ರಾಜ್ಯಗಳಲ್ಲಿ ಕೃಷಿ ಮಾಡುತ್ತಾರೆ ಎಂಬುದನ್ನು ಕಂಡುಕೊಂಡು ಆ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸಿ ಬಣ್ಣಹಚ್ಚಿರಿ.**

| ಬೆಳೆ | ರಾಜ್ಯಗಳು |
|---|---|
| ಗೋಧಿ | ಉತ್ತರ ಪ್ರದೇಶ ,ಪಂಜಾಬ್, ಮಧ್ಯಪ್ರದೇಶ, ಹರಿಯಾಣ |
| ಹತ್ತಿ | ಮಹಾರಾಷ್ಟ್ರ, ಗುಜರಾತ್, ತೆಲಂಗಾನ, ರಾಜಸ್ಥಾನ |
| ಭತ್ತ | ಪಶ್ಚಿಮ ಬಂಗಾಳ, ತಮಿಳುನಾಡು, ಆಂಧ್ರಪ್ರದೇಶ, ಬಿಹಾರ |







ಗೋಧಿ | ಹತ್ತಿ | ಭತ್ತ

ವೈವಿಧ್ಯಮಯವಾದ ಕೃಷಿ ಬೆಳೆಗಳು ಭಾರತದ ವಿಶೇಷತೆಯಾಗಿದೆ.ಭಾರತದಲ್ಲಿ ವಿವಿಧ ರೀತಿಯ ಕೃಷಿ ಬೆಳೆಗಳನ್ನು ಬೆಳೆಸಲು ಸೂಕ್ತವಾದ ಭೌಗೋಳಿಕ ಘಟಕಗಳು ಯಾವುವು ಎಂಬುದನ್ನು ನೋಡೋಣ.










ಹಿಂದಿನ ಅಧ್ಯಾಯದಲ್ಲಿ ನಮ್ಮ ದೇಶದ ಕೃಷಿಕಾಲಗಳ ಕುರಿತು ನೀವು ಪರಿಚಯಿಸಿಕೊಂಡಿದ್ದೀರಲ್ಲವೇ? ಅವುಗಳು ಯಾವುವು?

- 
- 
- 

**ವಿವಿಧ ಬೆಳೆಗಳನ್ನು ಎಲ್ಲಾ ಪ್ರದೇಶಗಳಲ್ಲಿ ಕೃಷಿಮಾಡಲು ಸಾಧ್ಯವೇ? ಕಾರಣವೇನು? ಟಿಪ್ಪಣಿ ತಯಾರಿಸಿರಿ..**

## ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು

ಕೃಷಿ ಉತ್ಪನ್ನಗಳನ್ನು ಅವಲಂಬಿಸಿ ಕಾರ್ಯ ನಿರ್ವಹಿಸುವ ಕೈಗಾರಿಕೆಗಳು ಕೃಷಿ ಆಧಾರಿತ ಕೈಗಾರಿಕೆಗಳಾಗಿವೆ.

ಕೃಷಿ ಉತ್ಪನ್ನವಾದ ಹತ್ತಿಯು ಬಟ್ಟೆ ಕೈಗಾರಿಕೆಯ ಕಚ್ಚಾ ವಸ್ತುವಾಗಿದೆ. ಆದುದರಿಂದ ಬಟ್ಟೆಯ ಕೈಗಾರಿಕೆಯು ಕೃಷಿ ಆಧಾರಿತ ಕೈಗಾರಿಕೆಗೆ ಉದಾಹರಣೆಯಾಗಿದೆ. ಇದೇ ರೀತಿಯಲ್ಲಿ ರಬ್ಬರ್, ಕಬ್ಬು ಮೊದಲಾದ ಕೃಷಿ ಉತ್ಪನ್ನಗಳನ್ನು ವಿವಿಧ ಕೈಗಾರಿಕೆಗಳಲ್ಲಿ ಕಚ್ಚಾ ವಸ್ತುಗಳಾಗಿ ಉಪಯೋಗಿಸಲಾಗುತ್ತದೆ.

ಕೃಷಿ ಉತ್ಪನ್ನಗಳನ್ನು ಕಚ್ಚಾ ವಸ್ತುಗಳಾಗಿ ಉಪಯೋಗಿಸುವ ಹೆಚ್ಚಿನ ಕೃಷಿ ಆಧಾರಿತ ಕೈಗಾರಿಕೆಗಳನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕೃಷಿ ಉತ್ಪನ್ನಗಳು | ಕೈಗಾರಿಕೆ |
|---|---|
| • ಹತ್ತಿ | • ಬಟ್ಟೆ ಕೈಗಾರಿಕೆ |
| • ಕಬ್ಬು | • ಸಕ್ಕರೆ ಕೈಗಾರಿಕೆ |
| • | • |
| • | • |

## ಖನಿಜ ಸಂಪತ್ತುಗಳೊಂದಿಗೆ



*ಚಿತ್ರಗಳು 7.6*

ಖನಿಜಗಳು ಮತ್ತು ಖನಿಜಗಳನ್ನು ಖನನ ಮಾಡುವ ಪ್ರದೇಶಗಳ ಚಿತ್ರಗಳನ್ನು ಮೇಲೆ ನೀಡಲಾಗಿದೆ.

- ಖನಿಜಗಳು ಎಂದರೇನು?
- ಖನಿಜಗಳು ಎಲ್ಲಿಂದ ಲಭಿಸುತ್ತವೆ?
- ಇವುಗಳ ಉಪಯೋಗವೇನು? ನಾವು ಕಂಡುಕೊಳ್ಳೋಣ.

ಖನಿಜಗಳು ಭೂಮಿಯ ಹೊರಪದರದಲ್ಲಿ ಕಂಡುಬರುವ ಲೋಹ ಮತ್ತು ಅಲೋಹಗಳ ಸಂಯುಕ್ತಗಳಾಗಿವೆ.

ಹೆಮಟೈಟ್, ಮ್ಯಾಗ್ನೆಟೈಟ್, ಕ್ಯಾಲಮೈನ್, ಬಾಕ್ಸೈಟ್ ಮತ್ತು ಸಿನ್ನಬಾರ್ ಎಂಬಿವುಗಳು ಲೋಹೀಯ ಖನಿಜಗಳಾಗಿವೆ. ಇವುಗಳಲ್ಲಿ ಹೆಚ್ಚಿನವುಗಳನ್ನು ಲೋಹಗಳ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ.

ಮೈಕಾ, ವಜ್ರ, ಸಿಲಿಕಾ (ಹೊಯ್ಗೆ) ಮುಂತಾದವು ಅಲೋಹ ಖನಿಜಗಳೂ, ಕಲ್ಲಿದ್ದಲು, ಪೆಟ್ರೋಲಿಯಂ ಎಂಬಿವುಗಳು ಇಂಧನ ಖನಿಜಗಳೂ ಆಗಿವೆ.

ಖನಿಜ ಆಧಾರಿತ ಕೈಗಾರಿಕೆಗಳು ಖನಿಜಗಳನ್ನು ಪ್ರಧಾನ ಕಚ್ಚಾ ವಸ್ತುಗಳಾಗಿ ಉಪಯೋಗಿಸುವವುಗಳಾಗಿವೆ. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯು ದೇಶದ ಅತಿದೊಡ್ಡ ಖನಿಜ ಆಧಾರಿತ ಕೈಗಾರಿಕೆಯಾಗಿದೆ. ಇದು ಕೈಗಾರಿಕಾ ಕ್ಷೇತ್ರದ ಬೆನ್ನೆಲುಬು ಎಂದೂ ಪ್ರಾಥಮಿಕ ಕೈಗಾರಿಕೆಯೆಂದೂ ಕರೆಯಲ್ಪಡುವುದು.

ದೇಶದ ಪ್ರಮುಖ ಖನಿಜ ಆಧಾರಿತ ಕೈಗಾರಿಕೆಗಳು.

- ಉಕ್ಕಿನ(ಕಬ್ಬಿಣ) ಕೈಗಾರಿಕೆ
- ತಾಮ್ರದ ಕೈಗಾರಿಕೆ
- ಅಲ್ಯೂಮಿನಿಯಂ ಕೈಗಾರಿಕೆ
- 
- 

ಕೆಳಗೆ ಕೊಟ್ಟಿರುವ ಖನಿಜಗಳನ್ನು ಯಾವೆಲ್ಲ ಅಗತ್ಯಗಳಿಗಾಗಿ ಉಪಯೋಗಿಸಲಾಗುತ್ತದೆ? ಹೆಚ್ಚಿನ ಖನಿಜಗಳ ಉಪಯೋಗವನ್ನು ತಿಳಿದುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಖನಿಜಗಳು | ಉಪಯೋಗ |
|---|---|
| ಹೆಮಟೈಟ್ | ಕಬ್ಬಿಣ ತಯಾರಿ |
| ಸಿಲಿಕಾ (ಹೊಯ್ಗೆ) | ● |
| ಬಾಕ್ಸೈಟ್ | ವಿಮಾನ ,ವಿದ್ಯುತ್ ಉಪಕರಣಗಳು |
| ವಜ್ರ | ● |
| ಕಲ್ಲಿದ್ದಲು | ರೈಲ್ವೆ, ಕಬ್ಬಿಣ ತಯಾರಿ |
| ಪೆಟ್ರೋಲಿಯಂ | ● |

## ಹಸಿರು ಕ್ರಾಂತಿ

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರ ಭೂ ಕಂದಾಯ ವ್ಯವಸ್ಥೆಯು ಕೃಷಿಕರಲ್ಲಿ ಸಾಲದ ಹೊರೆಯನ್ನು ಮತ್ತು ಬ್ರಿಟೀಷರ ಆಹಾರ ಬೆಳೆಗಳ ಕುರಿತಾದ ನಿರ್ಲಕ್ಷ್ಯವು ಆಹಾರದ ಕೊರತೆಯನ್ನು ಸೃಷ್ಟಿಸಿತು. ಸ್ವಾತಂತ್ರ್ಯಾನಂತರದ ಕೃಷಿ ವಲಯದಲ್ಲಿನ ಪರಿಮಿತವಾದ ಮೂಲಭೂತ ಸೌಕರ್ಯ ಮತ್ತು ಹಳೆಯ ತಂತ್ರಜ್ಞಾನಗಳ ಬಳಕೆಯು ಕೃಷಿ ಉತ್ಪಾದನಾ ಸಾಮರ್ಥ್ಯವು ಕುಸಿಯಲು ಕಾರಣವಾಯಿತು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮತ್ತು ಸ್ವಾತಂತ್ರ್ಯ ಲಭಿಸಿದ ನಂತರದ ಅವಧಿಯಲ್ಲಿ ಭಾರತೀಯ ಕೃಷಿ ಕ್ಷೇತ್ರವು ಎದುರಿಸಿದ ಕೆಲವು ಸಮಸ್ಯೆಗಳನ್ನು ನೀವು ಮೇಲೆ ಓದಿದ್ದೀರಿ. ಇದಕ್ಕಿರುವ ಕಾರಣಗಳೇನು?

- ಬ್ರಿಟಿಷರು ಜಾರಿಗೆ ತಂದ ಭೂ ಕಂದಾಯ ಪದ್ಧತಿ.
- ಮೂಲಭೂತ ಸೌಕರ್ಯಗಳ ಕೊರತೆ.
- 
- 

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಸಂದರ್ಭದಲ್ಲಿ ನಮ್ಮ ಕೃಷಿ ಕ್ಷೇತ್ರವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿತ್ತು. ಈ ಬಿಕ್ಕಟ್ಟುಗಳನ್ನು ಪರಿಹರಿಸಲು, ಸ್ವತಂತ್ರ ಭಾರತದಲ್ಲಿ ಭೂ ಸುಧಾರಣೆಗಳು ಮತ್ತು ಹಸಿರು ಕ್ರಾಂತಿಗಳನ್ನು ಜಾರಿಗೊಳಿಸಲಾಯಿತು.

ಭೂಸುಧಾರಣೆಯ ಭಾಗವಾಗಿ ಒಬ್ಬ ವ್ಯಕ್ತಿಗೆ ತನ್ನ ಒಡೆತನದಲ್ಲಿರಿಸಬಹುದಾದ ಭೂಮಿಯ ಹಕ್ಕಿನ ಮಿತಿಯನ್ನು ನಿಗದಿಪಡಿಸಲಾಯಿತು. ಮಿತಿಗಿಂತ ಹೆಚ್ಚಿನ ಭೂಮಿಯನ್ನು ಸರ್ಕಾರವು ಹೆಚ್ಚುವರಿ ಭೂಮಿಯಾಗಿ ಪರಿಗಣಿಸಿ ಸ್ವಾಧೀನಪಡಿಸಿಕೊಂಡು ಭೂರಹಿತ ಕೃಷಿಕರಿಗೆ ಮತ್ತು ಒಕ್ಕಲುಗಳಿಗೆ ವಿತರಿಸಲಾಯಿತು. ಇದರಿಂದಾಗಿ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ ಉಂಟಾಯಿತು. ಭಾರತಕ್ಕೆ ಮಾದರಿಯಾದ ಭೂಸುಧಾರಣಾ ಕಾಯ್ದೆಯನ್ನು ಜಾರಿಗೊಳಿಸಿದ ಮೊದಲ ರಾಜ್ಯಗಳಲ್ಲಿ ಕೇರಳವೂ ಒಂದಾಗಿದೆ.

ಅಧಿಕ ಇಳುವರಿ ನೀಡುವ ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಹೊಸ ತಂತ್ರಜ್ಞಾನಗಳು, ಕಡಿಮೆ ಬಡ್ಡಿ ದರದ ಸಾಲಗಳು ಮತ್ತು ವೈಜ್ಞಾನಿಕ ನೀರಾವರಿ ವ್ಯವಸ್ಥೆ ಮುಂತಾದವುಗಳನ್ನು ಬಳಸಿಕೊಂಡು ಆಹಾರ ಧಾನ್ಯಗಳ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸುವ ಯೋಜನೆಯೇ ಹಸಿರು ಕ್ರಾಂತಿ. ಗೋಧಿ ಬೆಳೆಯು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ, ಮೊದಲ ಹಂತದಲ್ಲೇ ಲಾಭ ಪಡೆದುಕೊಂಡ ಉತ್ಪಾದನೆಯಾಗಿದೆ. ಆದುದರಿಂದ ಇದನ್ನು 'ಗೋಧಿ ಕ್ರಾಂತಿ' ಎಂದೂ ಕರೆಯುತ್ತಾರೆ.



***ಚಿತ್ರ*** *7.7*
**ಡಾ. ಎಂ.ಎಸ್. ಸ್ವಾಮಿನಾಥನ್**

ಭಾರತೀಯ ಹಸಿರು ಕ್ರಾಂತಿಯ ಪಿತಾಮಹ ಎಂದು ಕರೆಯಲ್ಪಡುವ ಡಾ. ಎಂ. ಎಸ್. ಸ್ವಾಮಿನಾಥನ್ ಅವರು ಆಗಸ್ಟ್ 7, 1925 ರಂದು ತಮಿಳುನಾಡಿನ ಕುಂಭಕೋಣಂನಲ್ಲಿ ಜನಿಸಿದರು. ಅವರು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಮೊದಲ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ದೇಶದ 70 ಶೇ.ದಷ್ಟು ಜನರು ಕೃಷಿಯಲ್ಲಿ ತೊಡಗಿದ್ದಾಗಲೂ ದೇಶವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಇದಕ್ಕೆ ಪರಿಹಾರವನ್ನು ಕಂಡುಹಿಡಿಯಲು ನಾರ್ಮನ್ ಇ-ಬೋರ್ಲಾಗರ ಸಹಕಾರದೊಂದಿಗೆ ಭಾರತೀಯ ಕೃಷಿಕ್ಷೇತ್ರದಲ್ಲಿ ಹಸಿರು ಕ್ರಾಂತಿ ಪ್ರಯೋಗ ನಡೆಸಿದರು. ಇದರ ಫಲವಾಗಿ ಉತ್ಪಾದನೆಯು ಹಿಂದಿನ ಉತ್ಪಾದನೆಗಿಂತ ಐದು ಮಿಲಿಯನ್ ಟನ್‌ಗಳಷ್ಟು ಹೆಚ್ಚಾಯಿತು. ಇದರ ಫಲವಾಗಿ ಭಾರತವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿತು. ಈ ಸಾಧನೆಗಳಿಗಾಗಿ ಅವರು ನೀಡಿದ ನಾಯಕತ್ವಕ್ಕೆ ರಾಷ್ಟ್ರವು ಅವರಿಗೆ ಪದ್ಮಶ್ರೀ, ಪದ್ಮಭೂಷಣ ಮತ್ತು ಭಾರತ ರತ್ನ ಪ್ರಶಸ್ತಿಗಳನ್ನು ನೀಡಿ ಗೌರವಿಸಿತು. ಅವರು 2023 ನೇ ಸೆಪ್ಟೆಂಬರ್ 28 ರಂದು ಚೆನ್ನೈನಲ್ಲಿ ನಿಧನರಾದರು.

## ಹಸಿರು ಕ್ರಾಂತಿಯ ಎರಡು ಮುಖಗಳು

| ಗುಣಗಳು | ಪರಿಮಿತಿಗಳು |
| --- | --- |
| ◆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳ<br>◆ ಆಹಾರ ಸ್ವಾವಲಂಬನೆಯನ್ನು ಖಾತರಿಪಡಿಸಲಾಯಿತು.<br>◆ ಆಹಾರ ಧಾನ್ಯಗಳ ಬೆಲೆ ಕಡಿಮೆಯಾಯಿತು.<br>◆ ಆಹಾರ ಧಾನ್ಯಗಳ ಕಾಳಸಂತೆ ಮತ್ತು ಅಕ್ರಮ ದಾಸ್ತಾನು ಕಡಿಮೆಯಾಯಿತು.<br>◆<br>◆ | ◆ ಅತಿಯಾದ ನೀರಿನ ಬಳಕೆಯಿಂದ ಅಂತರ್ಜಲ ಮಟ್ಟ ಗಣನೀಯವಾಗಿ ಕುಸಿಯಿತು.<br>◆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆಯು ಕಡಿಮೆಯಾಯಿತು..<br>◆<br>◆ |

**ದೇಶದಲ್ಲಿ ಆಹಾರದ ಕೊರತೆ ಮತ್ತು ಬಡತನವನ್ನು ಹೋಗಲಾಡಿಸಲು ಹಸಿರು ಕ್ರಾಂತಿಯು ಹೇಗೆ ಸಹಾಯಕವಾಗಿದೆ ಎಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.**



*ಚಿತ್ರ 7.8*
ನೊರ್ಮನ್ ಇ. ಬೋರ್ಲಾಗ್

ನೊರ್ಮನ್ ಎರ್ನೆಸ್ಟ್ ಬೋರ್ಲಾಗ್ರು ಜಗತ್ತಿನಾದ್ಯಂತ ಸಾವಿರಾರು ಮಂದಿಯನ್ನು ಹಸಿವಿನಿಂದ ರಕ್ಷಿಸಿದ ಜಗತ್ತಿನ ಹಸಿರು ಕ್ರಾಂತಿಯ ಪಿತಾಮಹನಾಗಿದ್ದಾರೆ. 1914 ಮಾರ್ಚ್ 25 ರಂದು ಅಮೇರಿಕಾದಲ್ಲಿ ಜನಿಸಿದ ಅವರು ಹಸಿವಿನ ಮುಕ್ತಿಯು ಶಾಂತಿ ಸಮಾಧಾನಕ್ಕಿರುವ ಮೊದಲ ಹೆಜ್ಜೆ ಎಂದು ನಂಬಿದ್ದರು. 1970 ರಲ್ಲಿ ಇವರಿಗೆ ಶಾಂತಿಗಿರುವ ನೊಬೆಲ್ ಪ್ರಶಸ್ತಿಯು ಲಭಿಸಿತು.

## ಬಡತನ ಎಂದರೆ...

ತಮ್ಮ ಗೆಳೆಯನನ್ನು ಹುಡುಕಿಕೊಂಡು ಆ ದಿನ ಇಬ್ಬರು ಗೆಳೆಯರು ಆತನ ಮನೆಗೆ ಬಂದದ್ದು. ಅವನನ್ನು ಮನೆಯಲ್ಲಿ ಕಾಣಲು ಸಾಧ್ಯವಾಗಲಿಲ್ಲ. ಆತ ಎಲ್ಲಿಗೆ ಹೋದನೆಂದು ಮನೆಯವರಿಗೂ ಗೊತ್ತಿರಲಿಲ್ಲ... ಕೊನೆಗೆ ಅವರು ಕೋಣೆಯೊಳಗೆ ಪ್ರವೇಶಿಸಿ ಹುಡುಕಾಟ ನಡೆಸಿದರು. ಮಹಾನುಭಾವನು ಮಂಚದಡಿಯಲ್ಲಿ ಕೂತು ಸ್ಲೇಟಿನಲ್ಲಿ ಲೆಕ್ಕವನ್ನು ಮಾಡುತ್ತಿದ್ದನು. ಅವರು ಕೇಳಿದರು, ಇದನ್ನು ನಿನಗೆ ಕಾಗದದಲ್ಲಿ ಮಾಡಬಾರದೇ......

"ನನ್ನ ತಂದೆಯು ಆಹಾರ ನೀಡುವುದಕ್ಕಾಗಿಯೇ ತುಂಬಾ ಕಷ್ಟಪಡುತ್ತಿದ್ದಾರೆ. ಹೀಗಿರುವಾಗ ಹಣ ಕೊಟ್ಟು ಹೇಗೆ ಕಾಗದವನ್ನು ಖರೀದಿಸಲಿ?" ಅವನ ಉತ್ತರವನ್ನು ಕೇಳಿ ಆ ಗೆಳೆಯರಿಗೆ ದುಃಖವಾಯಿತು..

*(ಮೂಲ: ಚೇಪ್ಪಾಡ್ ಭಾಸ್ಕರನ್ ನಾಯರ್ ಅವರ 'ಭಾರತೀಯ ಶಾಸ್ತ್ರಜ್ಞನ್‌ಮಾರ್')*

ನೀವು ಓದಿದ್ದು 'ಗಣಿತದ ಮಾಂತ್ರಿಕ' ಎಂದು ಬಣ್ಣಿಸಲ್ಪಡುವ ಭಾರತೀಯ ಗಣಿತಶಾಸ್ತ್ರಜ್ಞರಾದ ಶ್ರೀನಿವಾಸ ರಾಮಾನುಜನ್ ಅವರ ಜೀವನ ಚರಿತ್ರೆಯಿಂದ ಆಯ್ದ ಒಂದು ಭಾಗವಾಗಿದೆ.

ಮಿತವಾದ ಅಗತ್ಯಗಳನ್ನು ಕೂಡಾ ಪೂರೈಸಲು ಸಾಧ್ಯವಾಗದ ಅನೇಕ ಜನರು ನಮ್ಮ ಸಮಾಜದಲ್ಲಿದ್ದಾರೆ. ಇಂತಹ ಅಗತ್ಯಗಳನ್ನು ಪೂರೈಸಲಾಗದ ಸ್ಥಿತಿಯನ್ನು ನಾವು ಏನೆಂದು ಕರೆಯಬಹುದು?

•

ಮಾನವನಿಗೆ ಆಹಾರ, ವಸ್ತ್ರ, ವಸತಿ, ವಿದ್ಯಾಭ್ಯಾಸ, ಆರೋಗ್ಯ ಎಂಬೀ ಪ್ರಾಥಮಿಕ ಅಗತ್ಯಗಳನ್ನು ಕೂಡಾ ಪೂರೈಸಲಾಗದ ಸ್ಥಿತಿಯು ಬಡತನವಾಗಿದೆ. ಸಾಮಾನ್ಯ ಅಗತ್ಯಗಳನ್ನು ಕೂಡಾ ಪೂರೈಸಲು ಬೇಕಾದ ಆದಾಯ ಅಥವಾ ಆಸ್ತಿಯನ್ನು ಗಳಿಸಲು ಸಾಧ್ಯವಾಗದವರೇ ಬಡವರು.

**ಬಡತನ ರೇಖೆ**

**ಒಂದು ದೇಶದ ಜನರನ್ನು ಬಡವರು ಮತ್ತು ಬಡವರಲ್ಲದವರು ಎಂದು ವಿಭಜಿಸುವ ಕಾಲ್ಪನಿಕ ರೇಖೆಯು ಬಡತನ ರೇಖೆಯಾಗಿದೆ.**

ಒಬ್ಬ ವ್ಯಕ್ತಿಯ ಆದಾಯದಿಂದ ಅಥವಾ ಆಹಾರದಿಂದ ಲಭಿಸುವ ಚೈತನ್ಯದ ಆಧಾರದ ಮೇಲೆ ನಮ್ಮ ದೇಶದ ಬಡತನವನ್ನು ಲೆಕ್ಕ ಹಾಕಲಾಗುತ್ತದೆ. ದೇಶದ ಜನರನ್ನು ಬಡತನಕ್ಕೆ ಕೊಂಡೊಯ್ಯುವ ಕಾರಣಗಳು ಯಾವುವು ಎಂಬುದನ್ನು ನೋಡೋಣ.




**ಇವುಗಳಲ್ಲದೆ ಬೇರೆ ಯಾವ ಕಾರಣಗಳು ಬಡತನಕ್ಕೆ ಕಾರಣವಾಗುತ್ತವೆ ಎಂಬುದನ್ನು ಕಂಡುಕೊಂಡು ಪದಸೂರ್ಯವನ್ನು ಪೂರ್ಣಗೊಳಿಸಿರಿ.**

## ಬಹು ಆಯಾಮದ ಬಡತನ ಸೂಚ್ಯಂಕ
## (Multidimensional Poverty Index)

ಜಾಗತಿಕವಾಗಿ ಬಡತನವನ್ನು ಲೆಕ್ಕ ಹಾಕಲು ಅಭಿವೃದ್ಧಿಪಡಿಸಿದ ಒಂದು ಹೊಸ ವಿಧಾನವೇ ಬಹು ಆಯಾಮದ ಬಡತನ ಸೂಚ್ಯಂಕ (MPI). ಇದನ್ನು ಓಕ್ಸ್‌ಫರ್ಡ್ ಪವರ್ಟಿ ಆ್ಯಂಡ್ ಹ್ಯೂಮನ್ ಡೆವೆಲಪ್ ಮೆಂಟ್ ಇನಿಶಿಯೇಟಿವ್ (OPHI) ಮತ್ತು ಯು.ಎನ್ ಡೆವಲಪ್‌ಮೆಂಟ್ ಪ್ರೋಗ್ರಾಂ (UNDP) ಜಂಟಿಯಾಗಿ ಸಿದ್ಧಪಡಿಸಿದೆ. ಒಂದು ಕುಟುಂಬದ ಸದಸ್ಯರ ಆರೋಗ್ಯ, ವಿದ್ಯಾಭ್ಯಾಸ, ಜೀವನದ ಗುಣಮಟ್ಟ ಎಂಬೀ ಮೂರು ಆಯಾಮಗಳಲ್ಲಿ ಹನ್ನೆರಡು ಸೂಚಕಗಳನ್ನು ನಿರ್ಣಯಿಸುವ ಮೂಲಕ ಬಹು ಆಯಾಮದ ಬಡತನವನ್ನು ಲೆಕ್ಕಹಾಕಲಾಗುತ್ತದೆ.

ಬಹು ಆಯಾಮದ ಬಡತನ ಸೂಚ್ಯಂಕದ ಪ್ರಕಾರ, ಬಡತನವನ್ನು ಅಳೆಯಲು ಆದಾಯವು ಏಕೈಕ ಮಾನದಂಡವಲ್ಲ ಎಂದು ನೀವು ಅರ್ಥಮಾಡಿಕೊಂಡಿರಲ್ಲವೇ? ಆದರೆ, ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಜೀವನಮಟ್ಟಗಳ ವಿಷಯದಲ್ಲಿ ಪ್ರತಿಯೊಬ್ಬ ವ್ಯಕ್ತಿ ಮತ್ತು ಕುಟುಂಬವು ಎಷ್ಟರ ಮಟ್ಟಿಗೆ ಸುಧಾರಿಸಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಬಹು ಆಯಾಮದ ಬಡತನವನ್ನು ಲೆಕ್ಕಹಾಕುವುದಾಗಿದೆ.


**ಆರೋಗ್ಯ**
- ಪೋಷಕಾಹಾರ
- ಮಕ್ಕಳ ಮತ್ತು ಹದಿಹರೆಯದವರ ಮರಣ ಪ್ರಮಾಣ
- ತಾಯಿಯ ಆರೋಗ್ಯ

**ವಿದ್ಯಾಭ್ಯಾಸ**
- ಶಾಲಾ ಶಿಕ್ಷಣ
- ಶಾಲಾ ಹಾಜರಾತಿ

**ಜೀವನದ ಗುಣಮಟ್ಟ**
- ಅಡುಗೆ ಇಂಧನ
- ಸ್ವಚ್ಛತೆ
- ಕುಡಿಯುವ ನೀರು
- ವಿದ್ಯುತ್
- ಮನೆ
- ಆಸ್ತಿಗಳು
- ಬ್ಯಾಂಕ್ ಖಾತೆಗಳು

ನೀತಿ ಆಯೋಗ ಅಂಗೀಕರಿಸಿದ ಬಹು ಆಯಾಮದ ಬಡತನ ಸೂಚ್ಯಂಕದ ಪ್ರಕಾರ ನಮ್ಮ ದೇಶದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 2015-16 ಮತ್ತು 2019-21 ವರ್ಷಗಳ ಬಡತನ ಮಟ್ಟವನ್ನು ಗ್ರಾಫ್ ನಲ್ಲಿ ಸೂಚಿಸಲಾಗಿದೆ.

ST-503-14-SOC. SCI. (K)-7-VOL-1




*ಚಿತ್ರ 7.9*

ಮೇಲೆ ನೀಡಿರುವ ಗ್ರಾಫನ್ನು ನಿರೀಕ್ಷಿಸಿರಿ.

1. ಬಹು ಆಯಾಮದ ಬಡತನ ಸೂಚ್ಯಂಕದ ಪ್ರಕಾರ ಭಾರತದ ರಾಜ್ಯಗಳ ಪೈಕಿ ಕೇರಳದ ಸ್ಥಾನವನ್ನು ಹುಡುಕಿರಿ.

2. ನಮ್ಮ ರಾಜ್ಯದ ಬಡತನವು 2015-2016 ಕ್ಕೆ ಹೋಲಿಸಿದರೆ 2019-2021 ರಲ್ಲಿ ಎಷ್ಟರ ಮಟ್ಟಿಗೆ ಕಡಿಮೆಯಾಗಿದೆ ಎಂಬುದನ್ನು ಕಂಡುಕೊಳ್ಳಿರಿ.

3. ಕೇರಳದ ಈ ಸಾಧನೆಗೆ ಪ್ರಮುಖ ಕಾರಣಗಳು ಯಾವುವು ಎಂದು ಕಂಡುಹಿಡಿದು ಟಿಪ್ಪಣಿ ತಯಾರಿಸಿರಿ.

**ಬಡತನದಿಂದ ಹೊರಬರಲು...**

ನಮ್ಮ ದೇಶದಲ್ಲಿ ನೆಲೆನಿಂತಿರುವ ಬಡತನವನ್ನು ಕೊನೆಗೊಳಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನೇಕ ಬಡತನ ನಿರ್ಮೂಲನ ಯೋಜನೆಗಳನ್ನು ಜಾರಿಗೊಳಿಸುತ್ತಾ ಬಂದಿವೆ. ಈ ಯೋಜನೆಗಳನ್ನು ಮೂರು ವಿಭಾಗಗಳಾಗಿ ವರ್ಗೀಕರಿಸಬಹುದು.

| ಯೋಜನೆಯ ವಿಭಾಗ | ಯೋಜನೆಯ ಹೆಸರು | ಯೋಜನೆಯ ಉದ್ದೇಶಗಳು |
|---|---|---|
| ಸ್ವ-ಉದ್ಯೋಗ-ವೇತನ ಯೋಜನೆಗಳು  | ● ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ<br>● ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆ | ಕಡಿಮೆ ಆದಾಯವಿರುವ ಕುಟುಂಬದ ಪ್ರಾಯ ಪೂರ್ತಿಯಾದ ಸದಸ್ಯರಿಗೆ ಉದ್ಯೋಗ ಅವಕಾಶ ಮತ್ತು ಆದಾಯವು ಲಭಿಸುವುದು. |
| | ● ಜೀವನಂ ಯೋಜನೆ | ಆರ್ಥಿಕ ಸಂಕಷ್ಟ ಎದುರಿಸುತ್ತಿರುವ, ಅಪರಾಧ ಸಂತ್ರಸ್ತರಾಗಿ ಮರಣ ಹೊಂದಿದವರ ಅವಲಂಬಿತರಿಗೆ, ಆರ್ಥಿಕ ಸಂಕಷ್ಟದಿಂದ ಪಾರಾಗಲು ಜೀವನೋಪಾಯ ಮಾರ್ಗಗಳನ್ನು ಒದಗಿಸುವುದು. |
| | ● ಅಯ್ಯಂಕಾಳಿ ನಗರ ಉದ್ಯೋಗ ಖಾತರಿ ಯೋಜನೆ | ನಗರ ಪ್ರದೇಶಗಳಲ್ಲಿ ವಾಸಿಸುವ ಕೌಶಲ್ಯರಹಿತ ದೈಹಿಕ ಕೆಲಸವನ್ನು ಮಾಡಲು ಸಿದ್ಧರಿರುವ ಪ್ರತಿಯೊಂದು ಕುಟುಂಬದ ಪ್ರಾಯ ಪೂರ್ತಿಯಾದ ಸದಸ್ಯರಿಗೆ ಉದ್ಯೋಗ ನೀಡುವುದು. |
| ಆಹಾರ ಭದ್ರತಾ ಯೋಜನೆಗಳು  | ● ಸಾರ್ವಜನಿಕ ವಿತರಣಾ ವ್ಯವಸ್ಥೆ | ಜನರ ಆಹಾರ ಭದ್ರತೆಯನ್ನು ಖಾತರಿಪಡಿಸುವುದು. |
| | ● ಪ್ರಧಾನ ಮಂತ್ರಿ ಪೋಷನ್ ಶಕ್ತಿ ನಿರ್ಮಾಣ್ (PM-POSHAN) | 1 ರಿಂದ 8 ರ ವರೆಗಿನ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ಯೋಜನೆ |

| | | |
|---|---|---|
| | ● ಸುಭಿಕ್ಷ ಕೇರಳಂ ಯೋಜನೆ | ಕೇರಳವನ್ನು ಆಹಾರ ಸ್ವಾವಲಂಬನೆಯೆಡೆಗೆ ತಲುಪಿಸುವ ಉದ್ದೇಶದಿಂದ ಜಾರಿಗೊಳಿಸಿದ ಯೋಜನೆ. |
| ಸಾಮಾಜಿಕ ಭದ್ರತಾ ಯೋಜನೆಗಳು  | ● ರಾಷ್ಟ್ರೀಯ ಸಾಮಾಜಿಕ ಸಹಾಯ ಯೋಜನೆ<br>● ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ | ನಿರಾಲಂಬರಾದ ಹಿರಿಯ ನಾಗರಿಕರಿಗೆ ಪಿಂಚಣಿ ಮತ್ತು ವಿಮಾ ರಕ್ಷಣೆಯನ್ನು ಒದಗಿಸುವುದು. |
| | ● ನಿರಾಮಯ ಆರೋಗ್ಯ ವಿಮಾ ಯೋಜನೆ | ರಾಜ್ಯದಲ್ಲಿರುವ ವಿಶೇಷ ಚೇತನರಿಗೆ ಆರೋಗ್ಯ ವಿಮೆ ಒದಗಿಸುವ ಯೋಜನೆಯಾಗಿದೆ. |

ಇವುಗಳಲ್ಲದೆ ಇತರ ಕೆಲವು ಯೋಜನೆಗಳನ್ನು ಕೂಡ ಕೇರಳವು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಾ ಬಂದಿದೆ.

ಸ್ನೇಹಸಾಂತ್ವನ, ವಯೋಮಿತ್ರ, ಕಡು ಬಡತನ ನಿರ್ಮೂಲನೆ, ಕಾರುಣ್ಯಂ ಆರೋಗ್ಯ ಸುರಕ್ಷಾ, ತಾಲೋಲಂ, ಆಶ್ವಾಸ ಕಿರಣ, ಸ್ನೇಹಪೂರ್ವ, ಕ್ಯಾನ್ಸರ್ ಸುರಕ್ಷೆ, ಮತ್ತು ಲೈಫ್ ಮಿಷನ್ ಮೊದಲಾದವುಗಳು ಕೆಲವು ಉದಾಹರಣೆಗಳಾಗಿವೆ.

**ನಿಮ್ಮ ಪ್ರದೇಶದಲ್ಲಿ ಮೇಲೆ ಕೊಟ್ಟಿರುವ ಯೋಜನೆಗಳ ಪ್ರಯೋಜನವನ್ನು ಪಡೆಯುತ್ತಿರುವವರು ಯಾರೆಲ್ಲಾ ಎಂಬುದನ್ನು ಕಂಡುಹಿಡಿಯಿರಿ? ಇದೇ ರೀತಿ ಇತರ ಯಾವೆಲ್ಲಾ ಯೋಜನೆಗಳು ಜಾರಿಯಲ್ಲಿವೆ ಎಂಬುದನ್ನು ಕಂಡುಹಿಡಿದು ಟಿಪ್ಪಣಿ ತಯಾರಿಸಿರಿ.**

## ಕುಟುಂಬಶ್ರೀ ಮತ್ತು ಬಡತನ ನಿರ್ಮೂಲನೆ

ಕುಟುಂಬಶ್ರೀಯು ಬಡತನ ನಿರ್ಮೂಲನೆ ಮತ್ತು ಮಹಿಳೆಯರ ಆರ್ಥಿಕ ಉನ್ನತಿಯ ಉದ್ದೇಶದಿಂದ ಮೇ 17, 1998 ರಂದು ಆರಂಭಿಸಿದ ಯೋಜನೆಯಾಗಿದೆ. ಇದು ಸಾಮಾಜಿಕ ಜೀವನದ ಹೆಚ್ಚಿನ ಕ್ಷೇತ್ರಗಳಲ್ಲಿಯೂ ವ್ಯಾಪಿಸಿಕೊಂಡಿದೆ. ಶೀ ಸ್ಟಾರ್ಟ್ಸ್, ಜನಕೀಯ ಹೋಟೆಲ್‌ಗಳು, ಕೊಚ್ಚಿ ಮೆಟ್ರೋ ಸರ್ವಿಸ್, ಕೇರಳದ ಮೊದಲ ವಾಟರ್ ಮೆಟ್ರೋ ಸರ್ವಿಸ್ ಮೊದಲಾದವುಗಳಲ್ಲಿಯೂ ಕುಟುಂಬಶ್ರೀಯ ಸದಸ್ಯರು ಉದ್ಯೋಗ ನಿರ್ವಹಿಸುತ್ತಿದ್ದಾರೆ. ದೇಶದ ಬಹುತೇಕ ರಾಜ್ಯಗಳು ಕುಟುಂಬಶ್ರೀ ಮಾದರಿಯನ್ನು ಕೈಗೆತ್ತಿಕೊಂಡಿವೆ. ಬಡತನ ನಿರ್ಮೂಲನೆ, ವೈಜ್ಞಾನಿಕ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಲು, ಸಾಮಾಜಿಕ ಬಂಡವಾಳ ಸಂಗ್ರಹಿಸಲು ಕುಟುಂಬಶ್ರೀಯ ಅನುಭವಗಳು ಮತ್ತು ಸಾಧನೆಗಳು ಸಹಕಾರಿಯಾಗಿದೆ.

**ಬಡತನ ನಿರ್ಮೂಲನೆಯಲ್ಲಿ ಕುಟುಂಬಶ್ರೀಯ ಕಾರ್ಯಕ್ರಮವು ಎಷ್ಟರಮಟ್ಟಿಗೆ ಸಹಾಯಕವಾಗಿವೆ ಎಂಬುದನ್ನು ತಿಳಿದುಕೊಳ್ಳಲು ನಿಮ್ಮ ಪ್ರದೇಶದಲ್ಲಿರುವ ಕುಟುಂಬಶ್ರೀ ಘಟಕದ ಸದಸ್ಯರೊಂದಿಗೆ ಸಂದರ್ಶನವನ್ನು ನಡೆಸಲು ಅಗತ್ಯವಾದ ಪ್ರಶ್ನಾವಳಿಯನ್ನು ತಯಾರಿಸಿರಿ.**

## ಆಹಾರ ಭದ್ರತೆ

ಆಹಾರ ಭದ್ರತೆ ಎಂದರೆ ಸಮಾಜದ ಪ್ರತಿಯೊಬ್ಬರಿಗೂ ಎಲ್ಲಾ ಸಮಯದಲ್ಲೂ ಅವರವರ ಅಗತ್ಯಕ್ಕೆ ಅನುಗುಣವಾಗಿ ಸುರಕ್ಷಿತ, ಪೋಷಕಾಂಶಯುಕ್ತ ಆಹಾರವನ್ನು ಒದಗಿಸುವುದು ಮತ್ತು ಅವುಗಳನ್ನು ಪಡೆಯಲು ಅಗತ್ಯವಾದ ಸಂದರ್ಭಗಳನ್ನು ಖಾತರಿಪಡಿಸುವುದಾಗಿದೆ.

## ಆಹಾರ ಭದ್ರತೆಯನ್ನು ಖಾತರಿಪಡಿಸಲು ಸಾಧ್ಯವಾಗದಿರಲು ಕಾರಣಗಳೇನು?

| | |
|---|---|
| ಹವಾಮಾನ ವೈಪರೀತ್ಯ | ಕೈಗಾರಿಕೀಕರಣ |
| ಆದಾಯದ ಕೊರತೆ | ಬೆಲೆ ಏರಿಕೆ |
| ಲಭ್ಯತೆಯ ಕೊರತೆ | ವಿತರಣೆಯಲ್ಲಿ ಅಸಮತೋಲನ ಸ್ಥಿತಿ |
| | |
| | |
| | |



ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಣೆ ಮಾಡುವ ಸರಕಾರಿ ಸಂಸ್ಥೆಗಳು ಯಾವುವು? ಹೆಚ್ಚಿನವುಗಳನ್ನು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ಸಿವಿಲ್ ಸಪ್ಲೈ
- ತ್ರಿವೇಣಿ ಸೂಪರ್ ಮಾರ್ಕೆಟ್
- 
- 
- 
- 

## ಹಸಿವು ಮುಕ್ತ ಕೇರಳ

ಹಸಿವನ್ನು ಇಲ್ಲದಾಗಿಸಿ ಕೇರಳವನ್ನು ಒಂದು ಹಸಿವು ಮುಕ್ತ ರಾಜ್ಯವನ್ನಾಗಿ ಬದಲಾಯಿಸುವುದು ಹಸಿವು ಮುಕ್ತ ಯೋಜನೆಯ ಪ್ರಮುಖ ಗುರಿಯಾಗಿದೆ. 2017-2018 ರಿಂದ ಕುಟುಂಬಶ್ರೀ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಸಹಾಯದೊಂದಿಗೆ ಈ ಯೋಜನೆ ನಡೆಯುತ್ತಿದೆ. ಇಂತಹ ವಿನೂತನವಾದ ಯೋಜನೆಗಳ ಮೂಲಕ ಎಲ್ಲರಿಗೂ ಅಗತ್ಯವಾದ ಆಹಾರವನ್ನು ಖಾತರಿಪಡಿಸುವ ಮೂಲಕ ಆಹಾರ ಭದ್ರತೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಇದರ ಗುರಿಯಾಗಿದೆ.

ಆರೋಗ್ಯಕರ ಜೀವನವನ್ನು ಕಾಪಾಡಿಕೊಳ್ಳಲು ಸೂಕ್ತ ಪ್ರಮಾಣದ ಪೋಷಕಾಂಶಯುಕ್ತ ಆಹಾರದ ಅಗತ್ಯವಿದೆ. ಆಹಾರ ಅಭದ್ರತೆಯು ಸಾಮಾನ್ಯವಾಗಿ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೇಲೆ ಪರಿಣಾಮ ಬೀರುತ್ತದೆ. ಆದರೆ ಭೂಕಂಪಗಳು, ಬರಗಾಲ, ಪ್ರವಾಹಗಳು, ಸುನಾಮಿ, ಸಾಂಕ್ರಾಮಿಕ ರೋಗಗಳು ಇತ್ಯಾದಿಗಳನ್ನು ಎದುರಿಸುವಾಗ ಆಹಾರದ ಅಭದ್ರತೆಯು ದೇಶದ ಇತರ ವಿಭಾಗಗಳ ಮೇಲೂ ಪರಿಣಾಮ ಬೀರಬಹುದು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸೂಕ್ತವಾದ ಕಾರ್ಯನಿರ್ವಹಣೆಯಿಂದ ಆಹಾರದ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಪರಿಹರಿಸಬಹುದು.



## ಮುಂದುವರಿದ ಚಟುವಟಿಕೆಗಳು

- ಸಾಂಪ್ರದಾಯಿಕ ಕೃಷಿ ರೀತಿಗಳಿಂದ ವಿಭಿನ್ನವಾಗಿ ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ನಡೆಸುವ ಕೃಷಿ ರೀತಿಗಳನ್ನು ಕಂಡುಕೊಂಡು ವಿವರಣೆಯನ್ನು ತಯಾರಿಸಿರಿ.
- 'ಬಡತನ ನಿರ್ಮೂಲನಾ ಯೋಜನೆಗಳು ಮತ್ತು ಬಡತನ ಲಘೂಕರಣ' ಎಂಬ ವಿಷಯದ ಕುರಿತು ಒಂದು ವಿಚಾರಗೋಷ್ಠಿಗಾಗಿ ಪ್ರಬಂಧವನ್ನು ತಯಾರಿಸಿರಿ.
- ಕುಟುಂಬಶ್ರೀಯ ಚಟುವಟಿಕೆಗಳ ಕುರಿತು ಸದಸ್ಯರೊಂದಿಗೆ ಸಂದರ್ಶನವನ್ನು ನಡೆಸಿರಿ.
- ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವಿಶೇಷತೆಗಳನ್ನು ಅನ್ವೇಷಿಸಿ ತಿಳಿದುಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

| | | |
|---|---|---|
| 1 | ಯೋಜನೆಯು ಜಾರಿಗೆ ಬಂದ ವರ್ಷ | |
| 2 | ಯೋಜನೆಯ ಉದ್ದೇಶ | |
| 3 | ಈ ಯೋಜನೆಯನ್ನು ಜಾರಿಗೊಳಿಸಿದ ಕೇರಳದ ಮೊದಲ ಎರಡು ಜಿಲ್ಲೆಗಳು | |
| 4 | ಖಾತರಿಪಡಿಸುವ ಒಟ್ಟು ಕೆಲಸದ ದಿನಗಳ ಸಂಖ್ಯೆ | |
| 5 | ಪ್ರಸ್ತುತ ಇರುವ ದಿವಸ ವೇತನ | |
| 6 | ಈ ಯೋಜನೆಯಲ್ಲಿ ಸೇರಿಸಿ ನಡೆಸುವ ಕೆಲಸ ಕಾರ್ಯಗಳು ಯಾವುವು? | |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ. ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ದಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

## ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000

*online* ***R.T.E Monitoring : www.nireekshana.org.in***